

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 13 ಗುರುವಾರ 2025

ಸಂಪುಟ: 45 | ಸಂಚಿಕೆ: 296 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4





ಉದಯಗಿರಿ ಪೊಲೀಸ್ ಠಾಣೆ ಮೇಲೆ ಕಲ್ಲು ತೂರಾಟ ಪ್ರಕರಣ

ಸಿಸಿಬಿ ಪೊಲೀಸರಿಂದ ಎಂಟು ಮಂದಿ ಬಂಧನ

50ಕ್ಕೂ ಹೆಚ್ಚು ಮಂದಿಯ ಗುರುತು ಪತ್ತೆ; ತಲೆಮರೆಸಿಕೊಂಡಿರುವ ಆರೋಪಿಗಳಿಗಾಗಿ ಮುಂದುವರಿದ ಶೋಧ

ಮೈಸೂರು, ಫೆ.12(ಆರ್‌ಕೆ)– ದೆಹಲಿ ವಿಧಾನಸಭಾ ಚುನಾವಣಾ ಫಲಿತಾಂಶ ಸಂಬಂಧ ಅವಹೇಳನಕಾರಿ ಪೋಸ್ಟರ್ ವೈರಲ್ ಮಾಡಲಾಗಿದೆ ಎಂಬ ಕಾರಣಕ್ಕೆ ಏಕಾಏಕಿ ಉದಯಗಿರಿ ಪೊಲೀಸ್ ಠಾಣೆ ಮುಂದೆ ಜಮಾವಣೆಗೊಂಡು ಕಲ್ಲು ತೂರಿ ಪೊಲೀಸರ ಗಾಯಗೊಳಿಸಿದ್ದು, ವಾಹನಗಳು ಹಾಗೂ ಠಾಣೆಯ ಕಿಟಕಿ ಗಾಜು ಪುಡಿಗೊಳಿಸಿದ ಪ್ರಕರಣ ಸಂಬಂಧ ಸಿಸಿಬಿ ಪೊಲೀಸರು 8 ಮಂದಿಯನ್ನು ಬಂಧಿಸಿ ವಿಚಾರಣೆ ನಡೆಸುತ್ತಿದ್ದಾರೆ ಎಂದು ಮೈಸೂರು ನಗರ ಪೊಲೀಸ್ ಕಮಿಷ್ನರ್ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ಮೈಸೂರಿನ ಶಾಂತಿನಗರದ ಸುಹೇಲ್, ರಹೀಲ್ ಪಾಷ, ಅಯಾನ್, ಗೌಸಿಯಾನಗರದ ಸೈಯ್ಯದ್ ಸಾಧಿಕ್, ಸತ್ಯನಗರದ ಏಜಾಜ್, ರಾಜೀವ್‌ನಗರದ ಸಾಧಿಕ್ ಪಾಷ, ಅರ್ಬಾಜ್ ಷರೀಫ್ ಹಾಗೂ ಸೋಹೆಬ್ ಪಾಷಾ



ಬಂಧಿತ ಆರೋಪಿಗಳು. ಸೋಮವಾರ ರಾತ್ರಿ ಉದಯಗಿರಿ ಠಾಣೆ ಬಳಿ ಜಮಾವಣೆಗೊಂಡಿದ್ದ ನೂರಾರು ಮಂದಿ ಯುವಕರು ಪೊಲೀಸ್ ಠಾಣೆ ಮೇಲೆ ಕಲ್ಲು ತೂರಿದ್ದರು.

ಘಟನೆಯಲ್ಲಿ ನಾಲ್ವರು ಪೊಲೀಸ್ ಅಧಿಕಾರಿಗಳು ಹಾಗೂ ಕೆಎಸ್‌ಆರ್‌ಪಿ ತುಕಡಿಯ ಮೂವರು ಕಾನ್‌ಸ್ಟೇಬಲ್‌ಗಳು ಗಾಯಗೊಂಡು, ಡಿಸಿಪಿ ಕಾರು ಸೇರಿದಂತೆ ಹಲವು ವಾಹನಗಳು ಜಖಂಗೊಂಡಿದ್ದವು.

ಕಲ್ಲು ತೂರಾಟ ಸಂದರ್ಭ ಉಂಟಾಗಿದ್ದ ಉದ್ವಿಗ್ನ ವಾತಾವರಣ ತಹಬದಿಗೆ ತರಲು ಪೊಲೀಸರು ಲಾಠಿ ಪ್ರಹಾರ ನಡೆಸಿ, ಅಶ್ರುವಾಯು ಪ್ರಯೋಗ ಮಾಡಿದ್ದರು. ಆ ವೇಳೆ ಮಾಡಿದ್ದ ವೀಡಿಯೋ ರೆಕಾರ್ಡ್ ಹಾಗೂ ಸುತ್ತಮುತ್ತ ಇರುವ ಸಿಸಿ ಕ್ಯಾಮರಾಗಳ ಫುಟೇಜ್‌ಗಳನ್ನು ಪಡೆದು ಪರಿಶೀಲನೆ ನಡೆಸಿದ ಸಿಸಿಬಿ ಪೊಲೀಸರು, 50ಕ್ಕೂ ಹೆಚ್ಚು ಮಂದಿ ಆರೋಪಿಗಳನ್ನು ಗುರುತಿಸಿದ್ದು, 8 ಮಂದಿಯನ್ನು ಇಂದು ಬಂಧಿಸಿದ್ದಾರೆ. ಈ ನಡುವೆ ಪ್ರಕರಣ ಸಂಬಂಧ 15 ಸಂಶಯಾಸ್ಪದ ಯುವಕರನ್ನು ಪೊಲೀಸರು ವಶಕ್ಕೆ ಪಡೆದು ■ 6ನೇ ಪುಟಕ್ಕೆ

ಮೈಕ್ರೋ ಫೈನಾನ್ಸ್ ಸುಗ್ರೀವಾಜ್ಞೆಗೆ

ರಾಜ್ಯಪಾಲರ ಅಂಕಿತ

ಸಮರ್ಪಕ ಜಾರಿಗೆ ಕೆಲ ಬದಲಾವಣೆಗೆ ಸಲಹೆ



ಥಾವರ್ ಚಂದ್ ಗೆಹ್ಲೋಟ್

ರಾಜ್ಯಪಾಲರು ಸೂಚಿಸಿದ ಬದಲಾವಣೆಗಳು

- ಆರ್‌ಬಿಐ ಅಡಿ ನೋಂದಾಯಿತ, ಸಹಕಾರಿ, ಸಣ್ಣ ಹಣಕಾಸು ಸಂಸ್ಥೆಗಳಿಗೆ ವ್ಯಾಪಾರ ವ್ಯವಹಾರಕ್ಕೆ ಯಾವುದೇ ಅಡ್ಡಿಯಾಗದಂತೆ ಎಚ್ಚರಿಕೆ ವಹಿಸಬೇಕು.
- ಈಗಾಗಲೇ ಸಾಲ ನೀಡಿರುವ ಮೈಕ್ರೋ ಫೈನಾನ್ಸ್ ಸಂಸ್ಥೆಗಳು, ಸಾಲ ನೀಡಿದಾತರು ಈ ಸುಗ್ರೀವಾಜ್ಞೆಯಿಂದ ಅವರ ಸಾಲ ಹಾಗೂ ಬಡ್ಡಿ ವಸೂಲಾತಿಗೆ ಅಡ್ಡಿಯಾಗಬಹುದು; ಅವರ ಕಾನೂನು ಹೋರಾಟಕ್ಕೆ ಆಸ್ಪದ ಕಲ್ಪಿಸಬಹುದು.
- ಸಂವಿಧಾನದ ಕಲಂ 19 ಮತ್ತು 32 ಅಡಿ ನೈಸರ್ಗಿಕ ನ್ಯಾಯ ಪಡೆಯಲು ಅವಕಾಶವಿದೆ. ಹೀಗಾಗಿ ಅವರ ಹಕ್ಕು ಮತ್ತು ಸ್ವಾತಂತ್ರ್ಯಕ್ಕೆ ಧಕ್ಕೆ ಉಂಟಾಗದಂತೆ ಎಚ್ಚರಿಕೆ ವಹಿಸಬೇಕು. ಅಷ್ಟೇ ಅಲ್ಲದೆ, ಆದಷ್ಟು ಶೀಘ್ರವಾಗಿ ವಿಧಾನ ಮಂಡಲದಲ್ಲಿ ವಿಧೇಯಕ ಮಂಡಿಸಿ ಸಮಗ್ರವಾಗಿ ಚರ್ಚಿಸಿ ಜಾರಿಗೆ ತರುವಂತೆಯೂ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಸೂಚಿಸಿದ್ದಾರೆ.

ಬೆಂಗಳೂರು, ಫೆ.12– ಮಹತ್ವದ ಬೆಳವಣಿಗೆಯೊಂದರಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಮೈಕ್ರೋ ಫೈನಾನ್ಸ್‌ನವರ ಕಿರುಕುಳ ತಪ್ಪಿಸುವ ಉದ್ದೇಶದಿಂದ ರಾಜ್ಯ ಸರ್ಕಾರ ಹೊರಡಿಸಲು ಉದ್ದೇಶಿಸಿರುವ ಮೈಕ್ರೋ ಫೈನಾನ್ಸ್ ಸುಗ್ರೀವಾಜ್ಞೆಗೆ ಅಂಕಿತ ಹಾಕಿದ್ದಾರೆ.

ಆರು ತಿಂಗಳುಗಳ ಕಾಲ ಈ ಸುಗ್ರೀವಾಜ್ಞೆ ಜಾರಿಯಲ್ಲಿರಲಿದ್ದು, ಮುಂದಿನ ಸದನದಲ್ಲಿ ಈ ಕುರಿತು ಮಸೂದೆಯನ್ನು ಮಂಡಿಸುವಂತೆ ರಾಜ್ಯಪಾಲರು ರಾಜ್ಯ ಸರ್ಕಾರಕ್ಕೆ ಸೂಚನೆ ನೀಡಿದ್ದಾರೆ. ಸದ್ಯ ಕೆಲವು ಉಪಯುಕ್ತ ಬದಲಾವಣೆಗಳನ್ನು ಸೂಚಿಸುವ ಮೂಲಕ ಸುಗ್ರೀವಾಜ್ಞೆಗೆ ರಾಜ್ಯಪಾಲರು ಸಮ್ಮತಿ ನೀಡಿದ್ದಾರೆ.

ಈ ಕುರಿತು ಅಧಿಕೃತ ಪ್ರಕಟಣೆ ಹೊರಡಿಸಿರುವ ರಾಜಭವನವು 'ಮೈಕ್ರೋ ಫೈನಾನ್ಸ್ ಕಿರುಕುಳ ತಪ್ಪಿಸಲು ಈ ಸುಗ್ರೀವಾಜ್ಞೆ ಒಂದು ಉತ್ತಮ ಹೆಜ್ಜೆ ಎಂದು ಹೇಳಿದ್ದಾರೆ' ಎಂದು ಸ್ಪಷ್ಟಪಡಿಸಿದೆ. ಮುಂದುವರೆದು ಅನಿಯಂತ್ರಿತ ಮತ್ತು ನೋಂದಾಯಿತವಲ್ಲದ ಎಂಎಫ್‌ಐಗಳು ಮತ್ತು ಮನಿ ಲೆಂಡಿಂಗ್ ಏಜೆನ್ಸಿಗಳು ಸಾಲಗಾರರಿಗೆ ಅನಗತ್ಯ ಕಿರುಕುಳ ನೀಡುವುದನ್ನು ತಪ್ಪಿಸಲು ಈ ಸುಗ್ರೀವಾಜ್ಞೆ ಅವಶ್ಯಕ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅಭಿಪ್ರಾಯಪಟ್ಟಿದ್ದಾರೆ ■ 6ನೇ ಪುಟಕ್ಕೆ

ಪ್ರಯಾಣಿಕರ ಸೋಗಿನಲ್ಲೆ ಮೈಸೂರು–ಬೆಂಗಳೂರು ರೈಲಿನಲ್ಲಿ

ದರೋಡೆ; ನಾಲ್ವರ ಬಂಧನ

95 ಸಾವಿರ ರೂ. ಮೌಲ್ಯದ ಮೊಬೈಲ್, ನಗದು ವಶ

ಮೈಸೂರು, ಫೆ.12(ಆರ್‌ಕೆ)– ಮೈಸೂರು–ಬೆಂಗಳೂರು ರೈಲುಗಳಲ್ಲಿ ವಿನೂತನ ರೀತಿ ದರೋಡೆ ಆರಂಭವಾಗಿದೆ. ಪ್ರಯಾಣಿಕರಂತೆ ರೈಲು ಹತ್ತುವ ಈ ದರೋಡೆಕೋರರು, ರೈಲು ಚಲಿಸುವ ವೇಳೆಯೇ ಪ್ರಯಾಣಿಕರಿಗೆ ಬೆದರಿಕೆ ಹಾಕಿ ಸುಲಿಗೆ ಮಾಡುತ್ತಾರೆ. ಇಂತಹ ಒಂದು ಪ್ರಕರಣವನ್ನು ರೈಲ್ವೆ ಪೊಲೀಸರು ಭೇದಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಈ ಸಂಬಂಧ ನಾಲ್ವರನ್ನು ಬಂಧಿಸಿರುವ ಮೈಸೂರಿನ ರೈಲ್ವೆ ಪೊಲೀಸರು, 6,830 ರೂ. ನಗದು ಸೇರಿದಂತೆ 95 ಸಾವಿರ ರೂ. ಮೌಲ್ಯದ 6 ಮೊಬೈಲ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಮೈಸೂರಿನ ಭಾರತ್‌ನಗರ 9ನೇ ಬ್ಲಾಕ್ ಅಮೃತ ಬಡಾವಣೆ ನಿವಾಸಿ ಶೈಕ್ ನಾಸೀರ್ ಮಗ



ಶೈಕ್ ಸೋಹೈಲ್



ಸೋಹೈಲ್ ಖಾನ್



ಮೊಹಮದ್ ಯಾಸೀನ್

ಶೈಕ್ ಸೋಹೈಲ್ ಅಲಿಯಾಸ್ ಅಜಾನ್ ಅಲಿಯಾಸ್ ಸೈಕೋ (22), ಫೈಯಾಜ್ ಖಾನ್ ಮಗ ಸೋಹೈಲ್ ಖಾನ್ (20), ಶ್ರೀನಗರದ ಡಾ.ರಾಜ್‌ಕುಮಾರ್ ರಸ್ತೆಯ 3ನೇ ಕ್ರಾಸ್ ನಿವಾಸಿ ಶಬೀರ್ ಮಗ ಮೊಹಮದ್ ಯಾಸೀನ್(22) ■ 6ನೇ ಪುಟಕ್ಕೆ

ಮುಡಾ ಅಕ್ರಮ ನಿವೇಶನ ಹಂಚಿಕೆ ಪ್ರಕರಣ

ಲೋಕಾಯುಕ್ತ ಕೇಂದ್ರ ಕಚೇರಿಗೆ ತನಿಖಾ ವರದಿ ಸಲ್ಲಿಸಿದ ಮೈಸೂರು ಲೋಕಾಯುಕ್ತ ಎಸ್ಪಿ ಉದೇಶ್

- ಐಜಿ ಸುಬ್ರಹ್ಮಣ್ಯೇಶ್ವರರಾವ್ ಪರಿಶೀಲನೆ ನಂತರ ಡಿಜಿಪಿಯೊಂದಿಗೆ ಚರ್ಚೆ
- ಮುಂದಿನ ಕಾನೂನು ಪ್ರಕ್ರಿಯೆಗನುಗುಣವಾಗಿ ಕೋರ್ಟ್‌ಗೆ ಸಲ್ಲಿಕೆ



ಉದೇಶ್

ಬೆಂಗಳೂರು, ಫೆ.12(ಕೆಎಂಶಿ)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ)ದ 14 ಬಿಡಿ ನಿವೇಶನಗಳ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕುಟುಂಬದ ಪಾತ್ರ ಇಲ್ಲ ಎಂದಿರುವ ಲೋಕಾಯುಕ್ತ, ಈ ಲೋಪಕ್ಕೆ ಅಧಿಕಾರಿಗಳೇ ಕಾರಣ ಎಂದಿದೆ. ನ್ಯಾಯಾಲಯದ ಆದೇಶದಂತೆ ಪ್ರಕರಣದ ಬಗ್ಗೆ ತನಿಖೆ ನಡೆಸಿದ್ದ ಮೈಸೂರು ಲೋಕಾಯುಕ್ತ ಎಸ್‌ಪಿ ಉದೇಶ್, ತನಿಖೆ ಪೂರ್ಣಗೊಳಿಸಿ ಇಂದು ದಾಖಲೆಗಳ ಸಮೇತ ಬೃಹತ್ ವರದಿಯನ್ನು ಕೇಂದ್ರ ಕಚೇರಿಗೆ



ತಲುಪಿಸಿದ್ದಾರೆ. ಮುಡಾ ಹಗರಣದ ತನಿಖೆ ಇಂದು ಇಡೀ ದಿನ ಕೇಂದ್ರ ಕಚೇರಿಯಲ್ಲಿ ಸಂಚಲನ ಮೂಡಿಸಿತು.

ಉದೇಶ್ ಅವರು ಇಂದು ಬೆಳಗ್ಗೆ ಕೇಂದ್ರ ಕಚೇರಿಯ ಪರಿಶೀಲನಾ ಅಧಿಕಾರಿಗೆ ವರದಿ ತಲುಪಿಸಿದರು. ಮೈಸೂರು ಎಸ್‌ಪಿ ನೀಡಿದ ವರದಿ ಪರಿಶೀಲನೆ ನಂತರ ಅಧಿಕಾರಿಗಳು ಲೋಕಾಯುಕ್ತ ಐಜಿ ಸುಬ್ರಮಣ್ಯೇಶ್ವರ ರಾವ್ ಅವರಿಗೆ ನೀಡಿದರು. ವರದಿ ಬಂದ ನಂತರ ಸುಬ್ರಮಣ್ಯೇಶ್ವರ ರಾವ್ ಅವರು, ಸಂಜೆ ತನಿಖಾಧಿಕಾರಿಯನ್ನು ಕರೆಸಿಕೊಂಡು ಪೂರ್ಣ ಮಾಹಿತಿ ಪಡೆದರು. ಐಜಿ ಅವರು ಬಹುತೇಕ ಒಂದೆರಡು ದಿನದಲ್ಲಿ ಪೊಲೀಸ್ ಮಹಾನಿರ್ದೇಶಕರೊಂದಿಗೆ ತನಿಖಾ ವರದಿಗೆ ಸಂಬಂಧಿಸಿದಂತೆ ■ 6ನೇ ಪುಟಕ್ಕೆ





ಜನರ ನಿರ್ಧಾರದಂತೆ ಮುಂದಿನ ನನ್ನ ರಾಜಕೀಯ ನಿರ್ಧಾರ

'ಪಬ್ಲಿಕ್ ಟಿವಿ' ವಾರ್ಷಿಕೋತ್ಸವ ಸಂದರ್ಶನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ



ಬೆಂಗಳೂರು, ಫೆ.12– ಚುನಾವಣಾ ರಾಜಕೀಯ ಸ್ವಲ್ಪಮಟ್ಟಿಗೆ ಸಾಕು ಎನಿಸುತ್ತಿದೆ. ಆದರೆ, ಜನರ ಪ್ರೀತಿ–ವಿಶ್ವಾಸ ಜಾಸ್ತಿ ಇರುವುದರಿಂದ ಮುಂದುವರಿಯಬೇಕೋ ಅಥವಾ ಬೇಡವೋ ಎಂಬುದನ್ನು ಜನರ ಅಭಿಪ್ರಾಯ ಪಡೆದು ತೀರ್ಮಾನಿಸುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದ್ದಾರೆ. ಕನ್ನಡದ ಸುದ್ದಿ ವಾಹಿನಿ 'ಪಬ್ಲಿಕ್ ಟಿವಿ'ಯ 13ನೇ ವಾರ್ಷಿಕೋತ್ಸವ ಸಂಭ್ರಮಾಚರಣೆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜೊತೆಗೆ ಪಬ್ಲಿಕ್ ಟಿವಿ ಮುಖ್ಯಸ್ಥರಾದ ಹೆಚ್.ಆರ್. ರಂಗನಾಥ್ ಅವರು ನಡೆಸಿದ ಸಂದರ್ಶನದಲ್ಲಿ ಮುಂದುವರೆದು ಸಿದ್ದರಾಮಯ್ಯ ಮುಂದೆ ಚುನಾವಣೆಯಲ್ಲಿ ನಿಲ್ಲಬಾರದು ಅಂತ ಮಾನಸಿಕವಾಗಿ ಸಿದ್ಧನಾಗಿದ್ದೇನೆ. ಆದರೆ, ಜನರು, ಹಿತೈಷಿಗಳು ಮತ್ತು ಸ್ನೇಹಿತರು ರಾಜಕೀಯದಲ್ಲಿ ಮುಂದುವರಿಯಬೇಕು ಎಂದು ಒತ್ತಡ ಹಾಕುತ್ತಿದ್ದಾರೆ. ಮುಂದಿನ ಚುನಾವಣೆಯಲ್ಲೂ ಜನರು ನಮಗೆ ಅಧಿಕಾರ ಕೊಡುತ್ತಾರೆ ಎಂಬ ವಿಶ್ವಾಸ ಇದೆ ಎಂದು ತಿಳಿಸಿದ್ದಾರೆ. ಹಿತೈಷಿಗಳು ರಾಜಕೀಯದಲ್ಲಿ ಮುಂದುವರಿಯಬೇಕು ಎನ್ನುತ್ತಾರೆ ಸರಿ, ಆದರೆ ಅಧಿಕಾರದಲ್ಲಿ ಮುಂದುವರಿಯುವ ವಿಚಾರದಲ್ಲಿ ಏನು ■ 6ನೇ ಪುಟಕ್ಕೆ

ತಿ.ನರಸೀಪುರ ತ್ರಿವೇಣಿ ಸಂಗಮದ ಕುಂಭಮೇಳದಲ್ಲಿ

ಅಂತಿಮ ಕ್ಷಣದವರೆಗೆ ಲಕ್ಷಾಂತರ ಜನರಿಂದ ಪುಣ್ಯಸ್ನಾನ



ತಿ.ನರಸೀಪುರದ ತ್ರಿವೇಣಿ ಸಂಗಮದ ನಡುಹೊಳೆ ಬಸಪ್ಪನ ವಿಗ್ರಹದ ಬಳಿ ವಿವಿಧ ಮಠಾಧೀಶರು ಪುಣ್ಯಸ್ನಾನ ಮಾಡಿದರು.

ತಿ.ನರಸೀಪುರ, ಫೆ.12(ಎಂಟಿವೈ)– ತಿ.ನರಸೀಪುರದ ತ್ರಿವೇಣಿ ಸಂಗಮ ಕ್ಷೇತ್ರದಲ್ಲಿ ವಿಜೃಂಭಣೆಯಿಂದ ಜರುಗಿದ 13ನೇ ಕುಂಭಮೇಳದ ಕೊನೆ ದಿನವಾದ ಬುಧವಾರ ಮಾಘ ಶುದ್ಧ ವ್ಯಾಸ ಪೂರ್ಣಿಮೆ ಅಂಗವಾಗಿ ವಿವಿಧ ಮಠಾಧೀಶರೂ, ಗಣ್ಯರೂ ಸೇರಿದಂತೆ ಎರಡೂವರೆ ಲಕ್ಷಕ್ಕೂ ಹೆಚ್ಚು ಮಂದಿ ಭಕ್ತರು ಪವಿತ್ರ ಪುಣ್ಯಸ್ನಾನ ಮಾಡಿ ಭಕ್ತಿಭಾವ ಮೆರೆದರು.

ಕನ್ನಡ ನಾಡಿನ ಜೀವನದಿ ಕಾವೇರಿ, ಕಪಿಲ ಹಾಗೂ ಗುಪ್ತಗಾಮಿನಿ ಸ್ಫಟಿಕ ಸರೋವರ ಸಂಗಮಗೊಳ್ಳುವ ತ್ರಿವೇಣಿ ಸಂಗಮದಲ್ಲಿ ನಡೆಯುತ್ತಿರುವ ಕುಂಭಮೇಳದ ಕೊನೆಯ ದಿನವಾದ ಬುಧವಾರ ನಾಡಿನೆಲ್ಲೆಡೆ, ಮಾತ್ರವಲ್ಲದೆ ಹೊರರಾಜ್ಯಗಳಿಂದಲೂ ಅಪಾರ ಸಂಖ್ಯೆಯ ಭಕ್ತರು ಆಗಮಿಸಿ ಕುಂಭಸ್ನಾನ ಮಾಡಿ ಪುಳಕಿತರಾದರು. ಇಂದು ಮಾಘ ಮಾಸದ ಶುದ್ಧ ವ್ಯಾಸ ಪೂರ್ಣಿಮೆ ದಿನವಾಗಿದ್ದು, ತ್ರಿವೇಣಿ ಸಂಗಮ ಕ್ಷೇತ್ರದಲ್ಲಿ ಕುಂಭಸ್ನಾನ ಮಾಡಿದರೆ ಪುಣ್ಯವೆಂಬ ಭಾವನೆ ಇರುವುದರಿಂದ ಮುಂಜಾನೆ 4 ಗಂಟೆಯಿಂದಲೇ ಭಕ್ತರು ಸಾಗರೋಪಾದಿಯಲ್ಲಿ ತಿ.ನರಸೀಪುರದ ತ್ರಿವೇಣಿ ಸಂಗಮ ಕ್ಷೇತ್ರಕ್ಕೆ ಹರಿದು ಬಂದು ಪುಣ್ಯಸ್ನಾನ ಮಾಡಿದರು. ಅಗಸ್ತ್ಯೇಶ್ವರ ದೇವಸ್ಥಾನ, ಗುಂಜಾ ನರಸಿಂಹಸ್ವಾಮಿ, ಭಿಕ್ಷೇಶ್ವರ ದೇವಾಲಯದ ಮುಂಭಾಗದಲ್ಲಿ ಪುಣ್ಯಸ್ನಾನಕ್ಕಾಗಿ ನಿಗದಿ ಮಾಡಿದ್ದ ಸ್ಥಳದಲ್ಲಿ ದಿನವಿಡೀ ಅಪಾರ ಸಂಖ್ಯೆಯ ಭಕ್ತರು ಸ್ನಾನ ಮಾಡಿದ್ದು, ಜಿಲ್ಲಾಡಳಿತದ ಮೂಲದ ಪ್ರಕಾರ ಬುಧವಾರ ಒಂದೇ ದಿನ ಎರಡೂವರೆ ಲಕ್ಷಕ್ಕೂ ಅಧಿಕ ಮಂದಿ ಪುಣ್ಯಸ್ನಾನ ಮಾಡಿದ್ದಾರೆ. ಇಂದು ಮಹೋದಯ ಪುಣ್ಯಸ್ನಾನದ ದಿನವಾಗಿರುವುದರಿಂದ ಎರಡು ಪುಣ್ಯ ಲಗ್ನಗಳಲ್ಲಿ ಭಕ್ತಾದಿಗಳು ಹೆಚ್ಚಿನ ■ 6ನೇ ಪುಟಕ್ಕೆ

ತಿ.ನರಸೀಪುರದ 13ನೇ ಕುಂಭಮೇಳಕ್ಕೆ ತೆರೆ

ತಿ.ನರಸೀಪುರ,ಫೆ.12(ಎಂಟಿವೈ)– ದಕ್ಷಿಣ ಭಾರತದ ಏಕೈಕ ಕುಂಭಮೇಳ ಎನಿಸಿರುವ ತಿ.ನರಸೀಪುರದ ತ್ರಿವೇಣಿ ಸಂಗಮದಲ್ಲಿ ಕಳೆದ 3 ದಿನಗಳಿಂದ ನಡೆಯುತ್ತಿದ್ದ 13ನೇ ಕುಂಭಮೇಳ ಬುಧವಾರ ಸಂಜೆ ಸಂಪನ್ನಗೊಂಡಿತು.

ಮಾಘ ಮಾಸದ ಶುದ್ಧ ವ್ಯಾಸ ಪೂರ್ಣಿಮೆ ದಿನದ ಇಂದು ಮುಂಜಾನೆಯಿಂದಲೇ ವಿವಿಧ ಲಗ್ನದಲ್ಲಿ ಶಾಸ್ತ್ರೋಕ್ತವಾಗಿ ತ್ರಿವೇಣಿ ಸಂಗಮದಲ್ಲಿ ಅಪಾರ ಸಂಖ್ಯೆಯ ಭಕ್ತರು ಪುಣ್ಯಸ್ನಾನ ಮಾಡುವ ಮೂಲಕ ಭಕ್ತಿ ಮೆರೆದರು. ಮೈಸೂರು ಜಿಲ್ಲೆಯ ತಿ.ನರಸೀಪುರದ ತ್ರಿವೇಣಿ ಸಂಗಮ ಕ್ಷೇತ್ರದಲ್ಲಿ ಪ್ರತಿ 3 ವರ್ಷಗಳಿಗೊಮ್ಮೆ ಕುಂಭಮೇಳ ನಡೆಯಲಿದ್ದು, ಕಾವೇರಿ, ಕಪಿಲ ಹಾಗೂ ಗುಪ್ತಗಾಮಿನಿ ಸ್ಫಟಿಕ ಸರೋವರ ಸಂಗಮದ ಸ್ಥಳದಲ್ಲಿ ಪುಣ್ಯಸ್ನಾನ ಮಾಡಲಾಗುತ್ತದೆ. ಉತ್ತರಭಾರತದ ಪ್ರಯಾಗ್‌ರಾಜ್‌ನಲ್ಲಿ ಮಹಾಕುಂಭಮೇಳ ನಡೆಯುತ್ತಿರುವ ಸಂದರ್ಭದಲ್ಲಿಯೇ ತಿ.ನರಸೀಪುರದಲ್ಲಿ ನಡೆದ ಮೂರು ದಿನದ ಕುಂಭಮೇಳಕ್ಕೆ ತೆರೆ ಬಿದ್ದಿದೆ. ಕೋವಿಡ್ ಕಾರಣದಿಂದಾಗಿ 2022ರಲ್ಲಿ ನಡೆಯಬೇಕಾಗಿದ್ದ 12ನೇ ಕುಂಭಮೇಳ ಸಾಂಪ್ರದಾಯಿಕ ಪೂಜೆಗಷ್ಟೇ ಸೀಮಿತಗೊಂಡಿತ್ತು. ಈ ಹಿನ್ನೆಲೆಯಲ್ಲಿ 6 ವರ್ಷದ ಬಳಿಕ ನಡೆದ 13ನೇ ಕುಂಭಮೇಳಕ್ಕೆ ಈ ಬಾರಿ ಭಕ್ತ ಸಾಗರವೇ ಹರಿದು ಬಂದಿತ್ತು. ಫೆ.10ರಂದು ವಿಧ್ಯುಕ್ತವಾಗಿ ವಿವಿಧ ಮಠಾಧೀಶರಿಂದ ಧ್ವಜಾರೋಹಣದ ಮೂಲಕ ಆರಂಭವಾಗಿದ್ದ ಕುಂಭಮೇಳಕ್ಕೆ ನಾಡಿನಾದ್ಯಂತ ಅಪಾರ ಸಂಖ್ಯೆಯ ಭಕ್ತರು ಆಗಮಿಸಿ, ಪುಣ್ಯಸ್ನಾನ ಮಾಡಿದ್ದಾರೆ.

ಕುಂಭಮೇಳಕ್ಕೆ ಬಂದು ಪುಣ್ಯಸ್ನಾನ ಮಾಡಬಯಸುವ ಭಕ್ತರಿಗಾಗಿ ಜಿಲ್ಲಾಡಳಿತದ ವತಿಯಿಂದ ತ್ರಿವೇಣಿ ಸಂಗಮದ ಅಗಸ್ತ್ಯೇಶ್ವರ, ಗುಂಜಾ ನರಸಿಂಹಸ್ವಾಮಿ ಹಾಗೂ ಭಿಕ್ಷೇಶ್ವರ ದೇವಾಲಯದ ಬಳಿ ಪುಣ್ಯಸ್ನಾನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಕುಂಭಮೇಳದ ಎರಡನೇ ದಿನವಾದ ಮಂಗಳವಾರವೂ ಮುಂಜಾನೆಯಿಂದಲೇ ಸಾವಿರಾರು ಸಂಖ್ಯೆಯಲ್ಲಿ ಭಕ್ತರು ತ್ರಿವೇಣಿ ಸಂಗಮಕ್ಕೆ ಬಂದು ಪುಣ್ಯಸ್ನಾನ ಮಾಡಿ ಪುಳಕಿತರಾಗಿದ್ದರು. ಕೊನೆ ದಿನವಾದ ಬುಧವಾರ ಮುಂಜಾನೆಯಿಂದಲೇ ಹೊರರಾಜ್ಯ ಸೇರಿದಂತೆ ವಿವಿಧೆಡೆಯಿಂದ ಬಂದಿದ್ದ ಲಕ್ಷಾಂತರ ■ 6ನೇ ಪುಟಕ್ಕೆ

ಮೈಸೂರು ಮಿತ್ರ

ಎರಡೂ ಕುಂಭಮೇಳದಲ್ಲಿ ಸ್ನಾನ ಮಾಡಿ ಡಿಸಿಎಂ ಡಿ.ಕೆ.ಶಿವಕುಮಾರ್ ಪಾಪವನ್ನು ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಿಕೊಂಡಿದ್ದಾರೆ

- ಮಾಜಿ ಸಿಎಂ ಡಿ.ವಿ. ಸದಾನಂದಗೌಡ ಮಾರ್ಮಿಕ ನುಡಿ
- ಸಿಎಂ ಸಿದ್ದರಾಮಯ್ಯ ಈಗ ಬದಲಾಗಿದ್ದಾರೆ; 'ಸಿದ್ದ' ಪದ ತೆಗೆದುಹಾಕಬೇಕು

ತಿ.ನರಸೀಪುರ,ಫೆ.12(ಎಂಟಿವೈ)– ಕುಂಭಮೇಳದ ಬಗ್ಗೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ತಮ್ಮದೇ ಪಕ್ಷದ ಕೆಲವು ನಾಯಕರು ಟೀಕೆ ಮಾಡುತ್ತಿರುವ ಸಂದರ್ಭದಲ್ಲಿಯೇ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎರಡೂ ಕಡೆ ಪುಣ್ಯಸ್ನಾನ ಮಾಡುವ ಮೂಲಕ ಪಾಪವನ್ನು ಸ್ವಲ್ಪಮಟ್ಟಿಗೆ ಕಡಿಮೆ ಮಾಡಿಕೊಂಡಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಟೀಕಿಸಿದ್ದಾರೆ.



ಸದಾನಂದಗೌಡ

ತಿ.ನರಸೀಪುರದಲ್ಲಿ ನಡೆಯುತ್ತಿರುವ ಕುಂಭಮೇಳದ ಕೊನೆ ದಿನವಾದ ಬುಧವಾರ ಕುಟುಂಬ ಸದಸ್ಯರೊಂದಿಗೆ ಆಗಮಿಸಿ ಪುಣ್ಯಸ್ನಾನ ಮಾಡಿದ ಬಳಿಕ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಕುಂಭಮೇಳದ ಪುಣ್ಯಸ್ನಾನ ಮಾಡುವುದು ನಮ್ಮ ಧಾರ್ಮಿಕ ನಂಬಿಕೆ. ಲಕ್ಷಾಂತರ ಮಂದಿ ಪುಣ್ಯಸ್ನಾನ ಮಾಡುತ್ತಿದ್ದಾರೆ. ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿ 144 ವರ್ಷದ ನಂತರ ಮಹಾಕುಂಭ ಮೇಳ ನಡೆಯುತ್ತಿದೆ. ಕೋಟ್ಯಾಂತರ ಮಂದಿ ಮಹಾಕುಂಭಮೇಳದಲ್ಲಿ ಪಾಲ್ಗೊಂಡಿದ್ದಾರೆ. ಆದರೆ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹಾಗೂ ಇನ್ನಿತರ ಕೆಲ ಕಾಂಗ್ರೆಸ್ ನಾಯಕರು ಕುಂಭಮೇಳದ ಬಗ್ಗೆ ಟೀಕಿಸಿರುವುದು ಖಂಡನೀಯ. ಕಾಂಗ್ರೆಸ್ ಪಕ್ಷದವರೇ ಆಗಿರುವ ಡಿ.ಕೆ.ಶಿವಕುಮಾರ್ ಪ್ರಯಾಗ್ ರಾಜ್ ಹಾಗೂ ತಿ.ನರಸೀಪುರದ ಕುಂಭಮೇಳದಲ್ಲೂ ಪುಣ್ಯಸ್ನಾನ ಮಾಡಿದ್ದಾರೆ. ಇದರಿಂದ ಅವರು ಮಾಡಿದ್ದ ಪಾಪ ಸ್ವಲ್ಪ ಪ್ರಮಾಣದಲ್ಲಿ ಕಡಿಮೆಯಾಗಿದೆ ಎಂದು ಲೇವಡಿ ಮಾಡಿದರು.

ಸಿದ್ದರಾಮಯ್ಯ ಬದಲಾಗಿದ್ದಾರೆ: ಎರಡನೆ ಬಾರಿ ಮುಖ್ಯಮಂತ್ರಿಯಾದ ಬಳಿಕ ಸಿದ್ದರಾಮಯ್ಯ ಬದಲಾಗಿದ್ದಾರೆ. ಮೊದಲ ಅವಧಿಯಲ್ಲಿ ಸಿಎಂ ಆಗಿದ್ದಾಗ ಇದ್ದಂತೆ ಈಗ ಇಲ್ಲ. ಅವರ ಹೆಸರಿಂದ 'ಸಿದ್ದ' ಎನ್ನುವ ಪದ ತೆಗೆದುಹಾಕಬೇಕು ಎನ್ನಿಸುತ್ತಿದೆ. ಆ ಮಟ್ಟಕ್ಕೆ ಅವರು ಬದಲಾಗಿದ್ದಾರೆ. ಸಿದ್ದರಾಮಯ್ಯ ಅವರ ತಲೆಯಲ್ಲಿ ಕೇವಲ ಮುಡಾ ವಿಚಾರ ತುಂಬಿಕೊಂಡಿದೆ. ಸ್ವಯಂಕೃತ ಅಪರಾಧದಿಂದ ಸಿದ್ದರಾಮಯ್ಯ ಅಧಿಕಾರದಿಂದ ಕೆಳಗೆ ಇಳಿಯುತ್ತಾರೆ. ಆಗ ಹೈಕಮಾಂಡ್ ಬೆಂಬಲದಿಂದಷ್ಟೇ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿ ಆಗಬಹುದು ಎಂದು ಭವಿಷ್ಯ ನುಡಿದರು.

ಮೆಟ್ರೋ ದರ ಏರಿಕೆ: ರಾಜ್ಯದಲ್ಲಿ ಮೆಟ್ರೊ ದರ ಹೆಚ್ಚಳವಾಗಿದ್ದು, ಅದನ್ನು ನಿಯಂತ್ರಿಸುವುದಕ್ಕೆ ರಾಜ್ಯ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ದರ ಕಡಿಮೆ ಮಾಡುವಂತೆ ರಾಜ್ಯ ಸರ್ಕಾರ ವಿಶೇಷ ಒತ್ತಡ ಹಾಕಬೇಕು. ಕೇಂದ್ರದ ಮೇಲೆ ಬೊಟ್ಟು ಮಾಡುವುದನ್ನು ಬಿಡಬೇಕು. ಮೆಟ್ರೋ ದರ ಕಡಿಮೆ ಆಗಬೇಕು. ಇದಕ್ಕೆ ಕೇಂದ್ರ ಸರ್ಕಾರ ಮಧ್ಯ ಪ್ರವೇಶಿಸಬೇಕು. ರಾಜ್ಯ ಸರ್ಕಾರ ಮೊದಲು ಒತ್ತಡ ಹಾಕಬೇಕು. ರಾಜ್ಯ ಸರ್ಕಾರ ಕರೆದರೆ ಕೇಂದ್ರದ ಬಳಿಗೆ ನಾವು ಜೊತೆಯಾಗಿ ಹೋಗುತ್ತೇವೆ ಎಂದು ತಿಳಿಸಿದರು.

ಒಂದು ಕೋಮಿನ ಜನರಿಂದ ದಾಂಧಲೆ: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಲೆಲ್ಲಾ ಒಂದು ಕೋಮಿನ ಜನರು ಕಾನೂನು ಕೈಗೆತ್ತಿಕೊಂಡು ದಾಂಧಲೆ ನಡೆಸುತ್ತಲೇ ಬಂದಿದ್ದಾರೆ. ಮೈಸೂರಿನ ಉದಯಗಿರಿ ಠಾಣೆ ಮೇಲೆ ಕಲ್ಲು ತೂರಾಟ ಪ್ರಕರಣ ಇದಕ್ಕೆ ಸಾಕ್ಷಿ. ಗೃಹ ಸಚಿವ ಪರಮೇಶ್ವರ್‌ಗೆ ಕಾನೂನು ಸುವ್ಯವಸ್ಥೆ ನಿಭಾಯಿಸಲು ಬರುತ್ತಿಲ್ಲ. ಇದರಿಂದ ಶಾಂತಿ ಸುವ್ಯವಸ್ಥೆ ಹದಗೆಡುತ್ತಿದೆ ಎಂದು ಕಿಡಿಕಾರಿದರು.

ಸಚಿವರು ಕೆಲಸ ಮಾಡುತ್ತಿಲ್ಲ: ರಾಜ್ಯದಲ್ಲಿ ಭ್ರಷ್ಟ ಸರ್ಕಾರ ಅಧಿಕಾರದಲ್ಲಿದೆ. ಗೃಹ ಸಚಿವರು ಡಾ.ಜಿ.ಪರಮೇಶ್ವರ್ ಕೇವಲ ಕುರ್ಚಿಗೆ ಅಂಟಿಕೊಂಡು ಕುಳಿತಿದ್ದಾರೆ. ಸಚಿವರಾದ ಕೆ.ಎನ್.ರಾಜಣ್ಣ, ಸತೀಶ್ ಜಾರಕಿಹೊಳಿ ಸೇರಿದಂತೆ ಕೆಲ ಮಂತ್ರಿಗಳು ಕೆಲಸ ಮಾಡುತ್ತಿಲ್ಲ. ಕೇವಲ ಓಲೈಕೆ ರಾಜಕಾರಣ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಮುಖಂಡರಾದ ಹೇಮಂತ್‌ಕುಮಾರ್, ಯಶಸ್ವಿನಿ ಸೋಮಶೇಖರ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ರಾಜ್ಯ ಬಿಜೆಪಿಗೆ ಈ ಸ್ಥಿತಿ ಬರಬಾರದಿತ್ತು

ಬಿಜೆಪಿಯಲ್ಲಿನ ಆಂತರಿಕ ಕಚ್ಚಾಟದ ಕುರಿತು ಪ್ರತಿಕ್ರಿಯಿಸಿ ಡಿ.ವಿ.ಸದಾನಂದ ಗೌಡ, ನನ್ನ ಪಕ್ಷಕ್ಕೆ ಈ ಪರಿಸ್ಥಿತಿ ಬರಬಾರದಿತ್ತು. ನಮ್ಮಲ್ಲಿ ಆಂತರಿಕ ಅವ್ಯವಸ್ಥೆ ಇದೆ. ನಮ್ಮ ಪಕ್ಷ ರಾಜ್ಯದಲ್ಲಿ ದಯನೀಯ ಸ್ಥಿತಿಯಲ್ಲಿದೆ. ಹೈಕಮಾಂಡ್ ಮಧ್ಯ ಪ್ರವೇಶಿಸಬೇಕು. ಇದುವರೆಗೆ ಸುಮ್ಮನಿದ್ದದ್ದು ಸಾಕು. ಇನ್ನಾದರೂ ಪಕ್ಷದ ಹೈಕಮಾಂಡ್ ಮೌನ ಮುರಿಯಬೇಕು. ನಮ್ಮ ಪಕ್ಷದ ಮುಖಂಡರ ನಡುವಿನ ಜಗಳ ಹೆಚ್ಚಾಗಿರುವುದು ಕಾಂಗ್ರೆಸ್‌ಗೆ ಸ್ವಲ್ಪ ಪ್ಲಸ್ ಪಾಯಿಂಟ್ ಆಗಿದೆ. ಈ ಹಿನ್ನೆಲೆಯಲ್ಲಿ ಪಕ್ಷದ ಆಂತರಿಕ ಜಗಳಕ್ಕೆ ಅಂಕುಶ ಹಾಕಲು ಮುಖಂಡರು ಸಜ್ಜಾಗಿದ್ದಾರೆ.

ಸರ್ಕಾರ ಮರಳು ಮಾಫಿಯಾ ಕೈಲಿದೆ; ಅಧಿಕಾರಿಗಳಿಗೆ ರಕ್ಷಣೆ ನೀಡಿ...!

ವಿಧಾನಸೌಧದ ಗಾಂಧೀಜಿ ಪ್ರತಿಮೆ ಬಳಿ ಬಿಜೆಪಿ ಪ್ರತಿಭಟನೆ

ಬೆಂಗಳೂರು, ಫೆ.12(ಕೆಎಂಶಿ)–ರಾಜ್ಯದಲ್ಲಿ ಪೊಲೀಸರ ಆತ್ಮಸ್ಥೈರ್ಯ ಕುಸಿದಿದೆ, ಅಧಿಕಾರಿಗಳಿಗೆ ರಕ್ಷಣೆ ಇಲ್ಲವಾಗಿದೆ. ಮರಳು ಮಾಫಿಯಾ ಕೈಯ್ಯಲ್ಲಿ ಸರ್ಕಾರ ಸಿಲುಕಿದ್ದು, ಮೈಸೂರು ಗಲಭೆಕೋರರ ಪರವಾಗಿ ಸಚಿವರು ಮಾತಾಡುತ್ತಿದ್ದಾರೆ ಎಂದು ವಿಧಾನಸಭೆಯ ವಿರೋಧಪಕ್ಷದ ನಾಯಕ ಆರ್.ಅಶೋಕ ಇಂದಿಲ್ಲಿ ತೀವ್ರವಾಗಿ ಟೀಕಿಸಿದ್ದಾರೆ.

ಅಧಿಕಾರಿಗಳಿಗೆ ರಕ್ಷಣೆ ನೀಡುವುದು, ಕಾನೂನು–ಸುವ್ಯವಸ್ಥೆ ಕಾಪಾಡುವಂತೆ ಆಗ್ರಹಿಸಿ ವಿಧಾನಸೌಧದ ಗಾಂಧೀಜಿಯವರ ಪ್ರತಿಮೆ ಬಳಿ ಬಿಜೆಪಿ ಪ್ರತಿಭಟನೆ ವೇಳೆ ಮಾತನಾಡಿದ ಅವರು, ಮೈಸೂರಿನ ಉದಯಗಿರಿ ಪೊಲೀಸ್ ಠಾಣೆ ಮೇಲೆ ಕೆಲವರು ದಾಳಿ ಮಾಡಿದರೂ ಪೊಲೀಸರಿಗೆ ರಕ್ಷಣೆ ನೀಡಿಲ್ಲ, ಇಂತಹ ಘಟನೆಗಳಿಂದ ಅಧಿಕಾರಿಗಳ ಆತ್ಮಸ್ಥೈರ್ಯ ಕುಸಿಯುತ್ತಿದೆ, ನಿಷ್ಠಾವಂತ ಅಧಿಕಾರಿಗಳು ಹಾಗೂ ಪೊಲೀಸರಿಗೆ ರಕ್ಷಣೆ ನೀಡುವಂತೆ ಪೊಲೀಸ್ ಮಹಾನಿರ್ದೇಶಕರಿಗೆ ಮನವಿ ಸಲ್ಲಿಸಲಾಗಿದೆ ಎಂದರು.

ನಿಷ್ಠಾವಂತ ಅಧಿಕಾರಿಗಳನ್ನು ಕಾಪಾಡಬೇಕಾದ ವಿಧಾನಸೌಧ ಮೌನಸೌಧವಾಗಿದೆ. ಸರ್ಕಾರಿ ಕೆಲಸ ದೇವರ ಕೆಲಸ ಎಂಬುದಾಗಿ ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯ ವಿಧಾನಸೌಧದ ಮೇಲೆ ಬರೆಸಿದ್ದಾರೆ, ಆದರೆ, ಇಂದಿನ ಪರಿಸ್ಥಿತಿ ಗಮನಿಸಿದರೆ ಕಾಂಗ್ರೆಸ್ ಆಡಳಿತದಲ್ಲಿ ದೆವ್ವಗಳ ಕೆಲಸ ಎಂಬಂತಾಗಿದೆ. ಭದ್ರಾವತಿಯಲ್ಲಿ ಮರಳು ಮಾಫಿಯಾ ತಡೆಯಲು ಹೋದ ಮಹಿಳಾ ಅಧಿಕಾರಿಯ ಮೇಲೆ ಲಾರಿ ಹತ್ತಿಸಿ ಕೊಲ್ಲುವುದಾಗಿ ಶಾಸಕರ ಮಗ ಜೀವ ಬೆದರಿಕೆ ಹಾಕಿದ್ದಾನೆ. ಅವಾಚ್ಯ ಪದಗಳಿಂದ ನಿಂದಿಸಿದ್ದಾನೆ. ಮಾಫಿಯಾ ಕೈಯಲ್ಲಿ ಸರ್ಕಾರ ಸಿಲುಕಿದ್ದು, ಅಧಿಕಾರಿಗಳಿಗೆ ಕೆಲಸ ಮಾಡಲು ಸಾಧ್ಯವಾಗುತ್ತಿಲ್ಲ.



ರಾಜ್ಯದಲ್ಲಿ ಕಾನೂನು–ಸುವ್ಯವಸ್ಥೆ ಕಾಪಾಡುವಂತೆ ಆಗ್ರಹಿಸಿ ವಿಧಾನಸೌಧದ ಗಾಂಧೀಜಿಯವರ ಪ್ರತಿಮೆ ಬಳಿ ಬಿಜೆಪಿ ವತಿಯಿಂದ ಪ್ರತಿಭಟನೆ ನಡೆಯಿತು.

ಪ್ರಕರಣಕ್ಕೆ ಸಂಬಂಧಿಸಿದ ಎಫ್‌ಐಆರ್‌ನಲ್ಲಿ ಶಾಸಕ ಸಂಗಮೇಶ್ ಪುತ್ರನ ಹೆಸರಿಲ್ಲ. ಪ್ರಕರಣ ಮುಚ್ಚಿಹಾಕಲು ಯತ್ನಿಸಲಾಗುತ್ತಿದೆ. ಸರ್ಕಾರಿ ನೌಕರರ ಸಂಘದ ಅಧ್ಯಕ್ಷರು ಮಾಧ್ಯಮಗಳಲ್ಲಿ ಹೇಳಿಕೆ ನೀಡುವ ಬದಲು ಬೀದಿಗಿಳಿದು ಹೋರಾಟ ಮಾಡಬೇಕು ಎಂದು ಒತ್ತಾಯಿಸಿದರು.

ಬೆಳಗಾವಿ ಅಧಿವೇಶನದ ವೇಳೆ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ವಿರುದ್ಧ ತಕ್ಷಣ ಕ್ರಮ ಕೈಗೊಳ್ಳಲಾಗಿತ್ತು, ಮೈಸೂರು ಗಲಭೆಗೆ ಸಂಬಂಧಿಸಿದಂತೆ ಯಾರನ್ನೂ ಬಂಧಿಸಿಲ್ಲ. ಸರ್ಕಾರ ಗಲಭೆಕೋರರ ಪರವಾಗಿ ನಿಂತಿದೆ. ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುವ ಬದಲು ಪೊಲೀಸ್ ಅಧಿಕಾರಿಗಳನ್ನೇ ಟೀಕಿಸಲಾಗುತ್ತಿದೆ, ಮುಸ್ಲಿಮರ ಮತಗಳಿಂದ ಗೆದ್ದ ಸಚಿವರು ಆ ಸಮುದಾಯದ ಪರವಾಗಿ ಮಾತಾಡುತ್ತಿದ್ದಾರೆ.

ಭದ್ರಾವತಿಯ ಮಹಿಳಾ ಅಧಿಕಾರಿಯ ಮೇಲೆ ಒತ್ತಡ ಹೇರಲಾಗಿದೆ, ಭಯದಿಂದ ಅವರು ಯಾರ ವಿರುದ್ಧವೂ ದೂರು ನೀಡಿಲ್ಲ, ದೂರು ಕೊಟ್ಟರೂ ಸರ್ಕಾರ ಅಧಿಕಾರಿಯ ಪರವಾಗಿ ನಿಲ್ಲುವುದಿಲ್ಲ, ಪೊಲೀಸ್ ಅಧಿಕಾರಿಗೆ ಸ್ಟಾರ್ ಕೊಟ್ಟವರು ಯಾರು ಎಂಬುದಾಗಿ ಸಚಿವ ರಾಜಣ್ಣ ಪ್ರಶ್ನಿಸಿದ್ದಾರೆ.

ಪೊಲೀಸರಿಗೆ ಜನರು ಸ್ಟಾರ್ ನೀಡಿದ್ದಾರೆ. ಅವರಿಗೆ ಜನರ ತೆರಿಗೆ ಹಣದಿಂದ ಸಂಬಳ ನೀಡಲಾಗುತ್ತಿದೆಯೇ ಹೊರತು, ಸಚಿವರ ಹಣದಿಂದ ಅಲ್ಲ. ಪೊಲೀಸರನ್ನು ಪ್ರಶ್ನಿಸುವುದಿದ್ದರೆ ಕಚೇರಿಗೆ ಕರೆದು ಮಾತನಾಡಬೇಕು. ಅದನ್ನು ಬಿಟ್ಟು ಸಾರ್ವಜನಿಕ ಸ್ಥಳದಲ್ಲಿ ಅಧಿಕಾರಿಗಳನ್ನು ನಿಂದಿಸಬಾರದು. ಈ ರೀತಿ ನಡೆದುಕೊಂಡರೆ ಪೊಲೀಸರು ಆತ್ಮವಿಶ್ವಾಸದಿಂದ ಕೆಲಸ ಮಾಡುವುದಾದರೂ ಹೇಗೆ ಎಂದು ಕಿಡಿಕಾರಿದರು.

ಮೈಸೂರಲ್ಲಿ ನಿಷೇಧಿತ ಪ್ಲಾಸ್ಟಿಕ್ ಜಪ್ತಿ; 5 ಸಾವಿರ ದಂಡ



ಮೈಸೂರಲ್ಲಿ ಪಾಲಿಕೆ ಅಧಿಕಾರಿಗಳು ಪ್ಲಾಸ್ಟಿಕ್ ವಶಪಡಿಸಿಕೊಂಡರು.

ಮೈಸೂರು, ಫೆ.12(ಬಿಎಲ್‌ಯು)– ನಿಷೇಧಿತ ಪ್ಲಾಸ್ಟಿಕ್ ಮಾರಾಟ ಮಾಡುತ್ತಿದ್ದ ಅಂಗಡಿ ಮೇಲೆ ದಾಳಿ ಮಾಡಿರುವ ಮೈಸೂರು ನಗರ ಪಾಲಿಕೆ ಅಧಿಕಾರಿಗಳು ಪ್ಲಾಸ್ಟಿಕ್ ವಶಪಡಿಸಿಕೊಂಡು, ದಂಡ ವಿಧಿಸಿದ್ದಾರೆ.

ಏಕಬಳಕೆಯ ಪ್ಲಾಸ್ಟಿಕ್ ಪರಿಸರದ ಮೇಲೆ ದುಷ್ಪರಿಣಾಮ ಬೀರುವ ಕಾರಣ ನಗರಪಾಲಿಕೆ ಇದನ್ನು ನಿಷೇಧಿಸಿದೆ. ಆದರೂ ಶಿವರಾಂಪೇಟೆಯ ಅಂಗಡಿಗಳಲ್ಲಿ ಇದನ್ನು ಮಾರಾಟ ಮಾಡಲಾಗುತ್ತಿದೆ. ಈ ಹಿನ್ನೆಲೆಯಲ್ಲಿ ಸಹಾಯಕ ಆಯುಕ್ತೆ ಪ್ರತಿಭಾ, ಪರಿಸರ ಇಂಜಿನಿಯರ್ ಮೈತ್ರಿ, ಆರೋಗ್ಯ ನಿರೀಕ್ಷಕ ಮಂಜುಕುಮಾರ್ ಅವರು ಶಿವರಾಂಪೇಟೆಯ ಅಂಗಡಿಗಳ ಮೇಲೆ ದಾಳಿ ಮಾಡಿ 30 ಕೆ.ಜಿ.ಪ್ಲಾಸ್ಟಿಕ್ ವಶಪಡಿಸಿಕೊಂಡು, 5 ಸಾವಿರ ರೂ. ದಂಡ ವಿಧಿಸಿದ್ದಾರೆ.

ಕುಂಭಮೇಳ: ಮೈಸೂರಿನಿಂದ ಉತ್ತರ ಪ್ರದೇಶದ ತುಂಡ್ಲಾಗೆ ವಿಶೇಷ ರೈಲು

ಬೆಂಗಳೂರು, ಫೆ.12– ಕುಂಭಮೇಳದ ಸಮಯದಲ್ಲಿ ಪ್ರಯಾಣಿಕರ ಹೆಚ್ಚುವರಿ ದಟ್ಟಣೆ ನಿವಾರಿಸಲು ಮೈಸೂರು ಮತ್ತು ಉತ್ತರ ಪ್ರದೇಶದ ತುಂಡ್ಲಾ ನಿಲ್ದಾಣಗಳ ನಡುವೆ ಒಂದು ಟ್ರಿಪ್ ವಿಶೇಷ ಎಕ್ಸ್ ಪ್ರೆಸ್ ರೈಲುಗಳನ್ನು ಓಡಿಸಲು ರೈಲ್ವೆ ಮಂಡಳಿ ಅನುಮೋದನೆ ನೀಡಿದೆ. ರೈಲು ಸಂಖ್ಯೆ 06217 ಮೈಸೂರು–ತುಂಡ್ಲಾ ವಿಶೇಷ ಎಕ್ಸ್‌ಪ್ರೆಸ್ ರೈಲು ಫೆ.17ರಂದು (ಸೋಮವಾರ) ಮೈಸೂರಿನಿಂದ ರಾತ್ರಿ 9.40 ಗಂಟೆಗೆ ಹೊರಟು, ಫೆಬ್ರವರಿ 20ರಂದು (ಗುರುವಾರ) ಬೆಳಿಗ್ಗೆ 9.30 ಗಂಟೆಗೆ ಉತ್ತರ ಪ್ರದೇಶದ ತುಂಡ್ಲಾ ನಿಲ್ದಾಣ ತಲುಪಲಿದೆ. ಪುನಃ ಇದೇ ರೈಲು (06218) ಫೆ.21ರಂದು (ಶುಕ್ರವಾರ) ತುಂಡ್ಲಾ ನಿಲ್ದಾಣದಿಂದ ಬೆಳಿಗ್ಗೆ 11.30 ಗಂಟೆಗೆ ಹೊರಟು, ಭಾನುವಾರ (ಫೆ.23, 2025) ರಾತ್ರಿ 10 ಗಂಟೆಗೆ ಮೈಸೂರು ನಿಲ್ದಾಣಕ್ಕೆ ಆಗಮಿಸಲಿದೆ. ಈ ರೈಲು ಎರಡೂ ಮಾರ್ಗಗಳಲ್ಲಿ ಮಂಡ್ಯ, ರಾಮನಗರಂ, ಕೆಂಗೇರಿ, ಕೆಎಸ್‌ಆರ್ ಬೆಂಗಳೂರು, ಯಶವಂತಪುರ, ತುಮಕೂರು, ಅರಸೀಕೆರೆ, ಕಡೂರು, ಚಿಕ್ಕಜಾಜೂರು, ದಾವಣಗೆರೆ, ಹರಿಹರ, ರಾಣೆಬೆನ್ನೂರು, ಹಾವೇರಿ, ಎಸ್‌ಎಸ್‌ಎಸ್ ಹುಬ್ಬಳ್ಳಿ, ಧಾರವಾಡ, ಅಳ್ನಾವರ, ಲೋಂಡಾ, ಖಾನಾಪುರ, ಬೆಳಗಾವಿ, ಗೋಕಾಕ್ ರೋಡ್, ಘಟಪ್ರಭಾ, ರಾಯಬಾಗ, ಕುಡಚಿ, ಮೀರಜ್, ಪುಣೆ, ದೌಂಡ್ ಕಾರ್ಡ್ ಲೈನ್, ಮನ್ಮಾಡ್, ಭೂಸಾವಲ್, ಇಟಾರ್ಸಿ, ಪಿಪಾರಿಯಾ, ನರಸಿಂಗ್ಪುರ, ಜಬಲ್ಪುರ್, ಕಟ್ನಿ, ಮೈಹಾರ್, ಸತ್ನಾ, ಮಾಣಿಕ್ಪುರ್, ಪ್ರಯಾಗರಾಜ್, ಫತೇಪುರ್, ಗೋವಿಂದಪುರಿ, ಇಟಾವಾ ನಿಲ್ದಾಣಗಳಲ್ಲಿ ನಿಲುಗಡೆಯಾಗಲಿದೆ. ಈ ವಿಶೇಷ ಎಕ್ಸ್‌ಪ್ರೆಸ್ ರೈಲಿನಲ್ಲಿ 3 ಎಸಿ ತ್ರಿ ಟೈರ್, 10 ಸ್ಲೀಪರ್ ಕ್ಲಾಸ್, 2 ಜನರಲ್ ಸೆಕೆಂಡ್ ಕ್ಲಾಸ್ ಮತ್ತು 02 ಎಸ್‌ಎಲ್‌ಆರ್ / ಡಿ ಬೋಗಿಗಳು ಸೇರಿದಂತೆ 17 ಬೋಗಿಗಳು ಇರಲಿವೆ. ಈ ರೈಲಿನ ಪ್ರತಿ ನಿಲ್ದಾಣದ ವೇಳಾಪಟ್ಟಿ ಮತ್ತು ಟಿಕೆಟ್ ಬುಕಿಂಗ್ ಬಗ್ಗೆ ಹೆಚ್ಚಿನ ಮಾಹಿತಿಗಾಗಿ, ಪ್ರಯಾಣಿಕರು ಅಧಿಕೃತ ಭಾರತೀಯ ರೈಲ್ವೆ ಜಾಲತಾಣಕ್ಕೆ ಭೇಟಿ ನೀಡಿ ಅಥವಾ ಸಹಾಯವಾಣಿ ಸಂಖ್ಯೆ 139ಗೆ ಕರೆ ಮಾಡುವ ಮೂಲಕ ಮಾಹಿತಿ ಪಡೆದುಕೊಳ್ಳಬಹುದು.

ತಗಡೂರು ಗೌರಿಶಂಕರ್ ಅವರ ಪುಣ್ಯಸ್ಮರಣೆ ಆಚರಣೆ

ಮೈಸೂರು, ಫೆ.12(ಜಿಎ)– ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ವತಿಯಿಂದ ಭಾರತೀಯ ಸಾಂಸ್ಕೃತಿಕ ವಿಕಾಸ ವೇದಿಕೆ ಸಂಸ್ಥಾಪಕ ಅಧ್ಯಕ್ಷ ದಿವಂಗತ ತಗಡೂರು ಗೌರಿಶಂಕರ್ ಅವರ ಮೊದಲ ವರ್ಷದ ಪುಣ್ಯಸ್ಮರಣೆಯನ್ನು ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಚಂದ್ರಶೇಖರ್, ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ನಾಯಕ ಹಿತರಕ್ಷಣಾ ವೇದಿಕೆ ಅಧ್ಯಕ್ಷ ದ್ಯಾವಪ್ಪನಾಯಕ, ಗೋಲ್ಡ್ ಸುರೇಶ್, ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ಅಧ್ಯಕ್ಷೆ ಹೆಚ್.ಎಲ್.ಯಮುನಾ ಹಾಗೂ ಮತ್ತಿತರರು ತಗಡೂರು ಗೌರಿಶಂಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ವತಿಯಿಂದ ಭಾರತೀಯ ಸಾಂಸ್ಕೃತಿಕ ವಿಕಾಸ ವೇದಿಕೆಯ ಸಂಸ್ಥಾಪಕ ಅಧ್ಯಕ್ಷ ದಿವಂಗತ ತಗಡೂರು ಗೌರಿಶಂಕರ್ ಅವರ ಮೊದಲ ವರ್ಷದ ಪುಣ್ಯಸ್ಮರಣೆ ಕಾರ್ಯಕ್ರಮ ನಡೆಸಲಾಯಿತು.

ಈ ವೇಳೆ ಜಿಲ್ಲಾ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಚಂದ್ರಶೇಖರ್ ಮಾತನಾಡಿ, ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸ್ವಂತ ಖರ್ಚಿನಿಂದ ಆಯೋಜಿಸುತ್ತ ಗಮನ ಸೆಳೆದಿದ್ದ ದಿವಂಗತ ತಗಡೂರು ಗೌರಿಶಂಕರ್ ಅವರು ಅನೇಕರನ್ನು ಗುರುತಿಸಿ ಉತ್ತಮ ಕಾರ್ಯಕ್ರಮ ಸಂಘಟಿಸುತ್ತಿದ್ದರು ಎಂದು ಸ್ಮರಿಸಿದರು.

ಮೂಲತಃ ಶಿಕ್ಷಕರಾಗಿದ್ದ ಗೌರಿಶಂಕರ್ ಅವರು ಸ್ವಯಂ ನಿವೃತ್ತಿ ಪಡೆದ ಬಳಿಕ ತಮಗೆ ಬರುತ್ತಿದ್ದ ಪಿಂಚಣಿ ಹಣದಲ್ಲೇ ಕಾರ್ಯಕ್ರಮ ಆಯೋಜಿಸಿ, ಸಾಂಸ್ಕೃತಿಕ, ಕಲಾಕ್ಷೇತ್ರದಲ್ಲಿ ದಿಗ್ಗಜರೆನಿಸಿಕೊಂಡವರು, ಎಲೆಮರೆ ಕಾಯಂತಿದ್ದವರನ್ನು ನಗರಕ್ಕೆ ಆಹ್ವಾನಿಸಿ ಅವರಿಂದ ಕಾರ್ಯಕ್ರಮ ರೂಪಿಸುತ್ತಿದ್ದರು. ಈ ರೀತಿ ಸ್ವಾತಂತ್ರ್ಯ ಹೋರಾಟಗಾರರನ್ನು ನೀಡಿದ ತಗಡೂರು ಗ್ರಾಮ ಇನ್ನಷ್ಟು ಖ್ಯಾತವಾಗಲು ಕಾರಣರಾದರು ಎಂದರು.

ಬಿಜೆಪಿ ಆರ್‌ಎಸ್‌ಎಸ್‌ನಿಂದ ಉದಯಗಿರಿ ವ್ಯಾಪ್ತಿಯಲ್ಲಿ ಗಲಾಟೆ

ಮೈಸೂರು, ಫೆ.12(ಜಿಎ)–ಮೈಸೂರಿನ ಉದಯಗಿರಿ ವ್ಯಾಪ್ತಿಯಲ್ಲಿ ಕಳೆದ ಹದಿನೈದು ವರ್ಷಗಳಿಂದಲೂ ಬಿಜೆಪಿ ಮತ್ತು ಆರ್‌ಎಸ್‌ಎಸ್ ಅಶಾಂತಿಯ ವಾತಾವರಣ ಸೃಷ್ಟಿಸಲು ಯತ್ನಿಸುತ್ತಿವೆ. ಇದರ ಭಾಗವಾಗಿಯೇ ಇತ್ತೀಚೆಗೆ ಠಾಣೆ ಮೇಲೆ ಕಲ್ಲು ತೂರಾಟವಾಗಿದೆ ಎಂದು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ವಕ್ತಾರ ಎಸ್. ರಾಜೇಶ್ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿಜೆಪಿ ಕಾರ್ಯಕರ್ತ ಸುರೇಶ್ ಎಂಬಾತ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ಕೇಜ್ರಿವಾಲ್ ಹಾಗೂ ಅಖಿಲೇಶ್ ಯಾದವ್ ಅವರ ಚಿತ್ರಗಳನ್ನು ವಿರೂಪಗೊಳಿಸಿ, ಅವಹೇಳನ ಪದ ಬರೆದು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದುದೇ ಈ ಘಟನೆಗೆ ಪ್ರಚೋದನೆ ನೀಡಿದೆ. ಈ ಪ್ರದೇಶದಲ್ಲಿ ಹಿಂದೂ– ಮುಸ್ಲಿಂ ಸಮುದಾಯದವರು ಸೌಹಾರ್ದತೆಯಿಂದ ಜೀವನ ನಡೆಸುತ್ತಿರುವುದು ಬಿಜೆಪಿ, ಆರ್‌ಎಸ್‌ಎಸ್‌ಗೆ ಬೇಕಿಲ್ಲ. ಹೀಗಾಗಿ ಈ ರೀತಿ ಮಾಡಿದ್ದಾರೆ ಎಂದು ದೂರಿದರು.

ಶ್ರೀ ಭಗೀರಥ ವೈದ್ಯ ಶ್ರೇಷ್ಠ ಪ್ರತಿಭಾ ರತ್ನ ಪ್ರಶಸ್ತಿ ಪ್ರದಾನ, ಪ್ರತಿಭಾ ಪುರಸ್ಕಾರ ಸಮಾರಂಭ

ಮೈಸೂರು, ಫೆ.12(ಜಿಎ)–ಮೈಸೂರು ಜಿಲ್ಲಾ ಉಪ್ಪಾರ ನೌಕರರ ಮತ್ತು ವೃತ್ತಿಪರರ ಸಂಘದ ವತಿಯಿಂದ ಮಾರ್ಚ್ ತಿಂಗಳಿನಲ್ಲಿ 'ಶ್ರೀ ಭಗೀರಥ ವೈದ್ಯ ಶ್ರೇಷ್ಠ ಪ್ರತಿಭಾ ರತ್ನ' ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಮಹದೇವ್ ಈ ವಿಷಯ ತಿಳಿಸಿ, ಅಂದಿನ ಕಾರ್ಯಕ್ರಮದಲ್ಲಿ ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕ ಡಾ.ಕೆ.ಎಸ್.ರವೀಂದ್ರನಾಥ್ ಅವರಿಗೆ 'ಶ್ರೀ ಭಗೀರಥ ವೈದ್ಯ ಶ್ರೇಷ್ಠ ಪ್ರತಿಭಾ ರತ್ನ' ಪ್ರಶಸ್ತಿ ಪ್ರದಾನ ಮಾಡಿ ಅಭಿನಂದಿಸಲಾಗುತ್ತಿದೆ ಎಂದರು.

ಪ್ರತಿಭಾ ಪುರಸ್ಕಾರಕ್ಕೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಪಡೆದಿರುವ ಮೈಸೂರು, ಚಾಮರಾಜನಗರ, ಕೊಡಗು, ಮಂಡ್ಯ ಜಿಲ್ಲೆಗಳ ಸಮುದಾಯದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದ್ದು ಅವರಿಗೆ ಭಗೀರಥ ವಿದ್ಯಾಶ್ರೀ ಪ್ರಶಸ್ತಿ ನೀಡಲಾಗುವುದು. ಸಿಬಿಎಸ್‌ಇ, ಐಸಿಎಸ್‌ಇ, ಅಂತಿಮ ಪದವಿ, ಸ್ನಾತಕೋತ್ತರ ಪದವಿಗಳಲ್ಲಿ ರ‍್ಯಾಂಕ್ ಪಡೆದವರು, ಪಿಎಚ್.ಡಿ ಪದವಿ ಪಡೆದವರು ಸಹ ಅರ್ಹರೆಂದರು. ಆಸಕ್ತರು ಮಾ.8ರ ಮುನ್ನ ಸಂಘದ ಕಚೇರಿಗೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ದೂ. 99809–06469, 98863–71687 ಅನ್ನು ಸಂಪರ್ಕಿಸಬಹುದಾಗಿದೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಶಿವರಾಜು, ಫಿಲಂ ಮಹದೇವಶೆಟ್ಟಿ, ಜವರಶೆಟ್ಟಿ, ಮಂಜು ಉಪಸ್ಥಿತರಿದ್ದರು.

ಅಯೋಧ್ಯೆ ರಾಮಮಂದಿರದ ಪ್ರಧಾನ ಅರ್ಚಕ ಸತ್ಯೇಂದ್ರ ದಾಸ್ ನಿಧನ

ಲಕ್ನೋ, ಫೆ.12–ಅಯೋಧ್ಯೆಯ ರಾಮಮಂದಿರದ ಪ್ರಧಾನ ಅರ್ಚಕ ಆಚಾರ್ಯ ಸತ್ಯೇಂದ್ರ ದಾಸ್ (83) ಅವರು ಸಂಜಯ್ ಗಾಂಧಿ ವೈದ್ಯಕೀಯ ವಿಜ್ಞಾನ ಸ್ನಾತಕೋತ್ತರ ಸಂಸ್ಥೆಯಲ್ಲಿ ಬುಧವಾರ ನಿಧನರಾಗಿದ್ದಾರೆ.




ಪಾರ್ಶ್ವವಾಯುವಿನಿಂದ ಬಳಲುತ್ತಿದ್ದ 83 ವರ್ಷದ ಸತ್ಯೇಂದ್ರ ದಾಸ್ ಅವರನ್ನು ಫೆ.3ರಂದು ಆಸ್ಪತ್ರೆಗೆ ದಾಖಲಿಸಲಾಗಿತ್ತು. 1992ರ ಡಿಸೆಂಬರ್ 6ರಂದು ಬಾಬರಿ ಮಸೀದಿಯನ್ನು ಕೆಡವಿದ ಸಂದರ್ಭದಲ್ಲಿ ಸತ್ಯೇಂದ್ರ ದಾಸ್ ಅವರು ರಾಮಮಂದಿರದ ಅರ್ಚಕರಾಗಿದ್ದರು. 'ನಿರ್ವಾಣಿ' ಅಖಾಡದಿಂದ ಬಂದ ಸತ್ಯೇಂದ್ರದಾಸ್ ಅವರು ಅಯೋಧ್ಯೆಯ ಪ್ರಮುಖ ಸಂತರಲ್ಲಿ ಒಬ್ಬರಾಗಿದ್ದರು. ಅಯೋಧ್ಯೆ ಮತ್ತು ರಾಮಮಂದಿರದ ಬೆಳವಣಿಗೆಗಳ ಬಗ್ಗೆ ಮಾಹಿತಿಯುಳ್ಳವರಾಗಿದ್ದರು. ಬಾಬರಿ ಮಸೀದಿಯನ್ನು ಕೆಡವಿದಾಗ ತಾತ್ಕಾಲಿಕವಾಗಿ ನಿರ್ಮಿಸಿದ್ದ ಟೆಂಟ್‌ನಲ್ಲಿ ರಾಮಲಲ್ಲಾ ವಿಗ್ರಹವನ್ನು ಇಟ್ಟುಕೊಂಡು ಸತ್ಯೇಂದ್ರ ದಾಸ್ ಪ್ರಧಾನ ಅರ್ಚಕರಾಗಿ ಸೇವೆ ಸಲ್ಲಿಸಿದ್ದರು.



ಸಿಸ್ಟರ್ ಪ್ರುಡೆಂಸಿಯಾ

ಮೈಸೂರು, ಫೆ.12– ಶ್ರೀರಂಗಪಟ್ಟಣ ತಾಲೂಕಿನ ನಾಗನಹಳ್ಳಿಯ ದಿವ್ಯಾ ಕೃಪಾದ ಸಿಸ್ಟರ್ ಪ್ರುಡೆಂಸಿಯಾ (93) ಬುಧವಾರ ಬೆಳಗ್ಗೆ ನಿಧನರಾದರು. ಅವರು ಮಂಡ್ಯದ ಕಾರ್ಮೆಲ್ ಕಾನ್ವೆಂಟ್, ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾನ್ವೆಂಟ್ ಮತ್ತು ಕ್ರೈಸ್ಟ್ ದಿ ಕಿಂಗ್ ಕಾನ್ವೆಂಟ್ (ಸಿಕೆಸಿ), ನಿರ್ಮಲ ಕಾನ್ವೆಂಟ್, ಅವಿಲಾ ಕಾನ್ವೆಂಟ್ ಮತ್ತು ಮೈಸೂರಿನ ಟೆರೇಷಿಯನ್ ಇನ್‌ಸ್ಟಿಟ್ಯೂಷನ್ಸ್‌ಗಳಲ್ಲಿ ಸೇವೆ ಸಲ್ಲಿಸಿದ್ದರು. ಇವರ ಅಂತ್ಯಕ್ರಿಯೆ ನಾಗನಹಳ್ಳಿಯ ದಿವ್ಯಾ ಕೃಪಾದಲ್ಲಿ ನಾಳೆ (ಫೆ.13) ಬೆಳಗ್ಗೆ 11 ಗಂಟೆಗೆ ನೆರವೇರಲಿದೆ ಎಂದು ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

13.02.2025 ಗುರುವಾರ, ಮಳೆ ನಕ್ಷತ್ರ: ಧನಿಷ್ಠ 06.02.2025 ರಿಂದ 18.02.2025 ಕ್ರೋಧಿನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ, ತಿಥಿ: ಪಾಡ್ಯ, ನಕ್ಷತ್ರ: ಮಖ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30ರಿಂದ ಯೋಗ ಮಾಡಿ ಆರೋಗ್ಯವಾಗಿರಿ, ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಥೈರಾಯಿಡ್ ಸಮಸ್ಯೆ, ಗ್ಯಾಸ್ಟ್ರೈಟಿಸ್ (ಆಮ್ಲಪಿತ್ತ) ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯರಸ್ತೆ, ಬೆಳಗ್ಗೆ 10ಕ್ಕೆ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಚರ್ಮರೋಗಕ್ಕೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ.

■ **ಬೇವಿನಮರದ ಶ್ರೀ ಯಲ್ಲಮ್ಮ ದೇವಸ್ಥಾನ :** 77ನೇ ವರ್ಷದ ಮಹೋತ್ಸವ, ಬೆಳಗ್ಗೆ 9.30ಕ್ಕೆ ಮಹಾಪೂಜೆ, ಕಲಶ ವಿಸರ್ಜನೆ, ಮಧ್ಯಾಹ್ನ 1 ಗಂಟೆಗೆ ಅನ್ನ ಸಂತರ್ಪಣೆ, ಸ್ಥಳ: ದೇವಸ್ಥಾನ, ನಾಲಾಬೀದಿ, ಕೆಆರ್.ಮೊಹಲ್ಲಾ.

■ **ಶಾರದಾ ವಿಲಾಸ ಕಾಲೇಜು :** ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ, ವಿಷಯ : ವರ್ತಮಾನದ ಕನ್ನಡ ಸಾಹಿತ್ಯ : ಪ್ರತಿಸ್ಪಂದನೆಗಳು, ಬೆಳಗ್ಗೆ 10ಕ್ಕೆ ಉದ್ಘಾಟನೆ : ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ದಿಕ್ಸೂಚಿ ಭಾಷಣ : ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಡಾ. ಸಬಿಹಾ ಭೂಮಿಗೌಡ, ವಿಶೇಷ ಆಹ್ವಾನಿತರು : ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ. ಬಿ.ಎಂ. ಸುಬ್ರಾಯ, ಗೌರವ ಕಾರ್ಯದರ್ಶಿ ಆರ್. ದಿನೇಶ್, ಅಧ್ಯಕ್ಷತೆ : ಕಾಲೇಜು ಪ್ರಾಂಶುಪಾಲರಾದ ಡಾ. ಎಂ. ದೇವಿಕಾ; ಸಂಜೆ 4.30ಕ್ಕೆ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಸಂಗೀತ ವಿವಿ ಕುಲಸಚಿವ ಪ್ರೊ. ಎಂ.ಜಿ. ಮಂಜುನಾಥ, ಸ್ಥಳ: ಶತಮಾನೋತ್ಸವ ಭವನ, ಶಾರದಾ ವಿಲಾಸ ಶಿಕ್ಷಣ ಸಂಸ್ಥೆಗಳು.

■ **ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ :** 'ಮುಕ್ತ ದಿನ' ಉದ್ಘಾಟನೆ: ಎಂಎಲ್‌ಸಿ ಡಾ.ಯತೀಂದ್ರ ಸಿದ್ದರಾಮಯ್ಯ, ಸ್ಥಳ: ಮೈಸೂರಿನ ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಮುಚ್ಚಯದ ಆವರಣ, ಬೆಳಗ್ಗೆ 10 ರಿಂದ.

■ **ಅರ್ಕ ಮಹಾಗಣಪತಿ ದೇವಸ್ಥಾನ :** ಮೊದಲ ವಾರ್ಷಿಕೋತ್ಸವ, ಸಂಜೆ 5.30ಕ್ಕೆ ಭಗವದನುಜ್ಞೆ, ಗಣಪತಿ ಪೂಜೆ, ಪುಣ್ಯಾಹ, ರಕ್ಷಾಬಂಧನಂ, ಮೃತ್ಸಂಗ್ರಹಣ, ಸದ್ಯಾಂಕುರಾರೋಪಣೆ, ಮಹಾನೀರಾಜನಮ್, ತೀರ್ಥಪ್ರಸಾದ, ಸ್ಥಳ: ಅರ್ಕಧಾಮ, ಬೋಗಾದಿ–ಗದ್ದಿಗೆ ರಸ್ತೆ, ಕಣಿಯನಹುಂಡಿ ಗ್ರಾಮ.

■ **ಆಲನಹಳ್ಳಿ ಎಸ್‌ಎನ್‌ಎಸ್ ಶಾಲೆ:** ಶಾಲಾ ವಾರ್ಷಿಕೋತ್ಸವ, ಸಾನ್ನಿಧ್ಯ: ಎಸ್‌ಎನ್‌ಎಸ್ ಕಾನ್ವೆಂಟ್ ಮತ್ತು ಪ್ರೌಢಶಾಲೆ ಸಂಸ್ಥಾಪಕರಾದ ಶ್ರೀ ಮುಮ್ಮಡಿ ನಿರ್ವಾಣ ಸ್ವಾಮೀಜಿ, ಅಧ್ಯಕ್ಷತೆ: ಕನಕಪುರ ಶ್ರೀ ದೇಗುಲ ಮಠದ ಕಿರಿಯ ಪೀಠಾಧಿಪತಿ ಹಾಗೂ ಶ್ರೀ ನಿರ್ವಾಣ ಕೃಪಾ ವಿದ್ಯಾಪೀಠದ ಅಧ್ಯಕ್ಷರಾದ ಶ್ರೀ ಚನ್ನಬಸವ ಸ್ವಾಮೀಜಿ, ಮುಖ್ಯ ಅತಿಥಿಗಳು: ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಚಿತ್ರನಟ ನಾಗಭೂಷಣ್, ಖೋ ಖೋ ವಿಶ್ವಕಪ್ ವಿಜೇತ ತಂಡದ ಆಟಗಾರ್ತಿ ಬಿ.ಚೈತ್ರಾ, ಸ್ಥಳ: ಕಲಾಮಂದಿರ, ಬೆಳಗ್ಗೆ 10ಕ್ಕೆ.

■ **ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ, ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ:** ಮಹರ್ಷಿ ಅಗಸ್ತ್ಯ ಕುರಿತು ವಿಶೇಷ ಉಪನ್ಯಾಸ, ಉದ್ಘಾಟನೆ: ಸಿಐಐಎಲ್ ನಿರ್ದೇಶಕ ಪ್ರೊ.ಶೈಲೇಂದ್ರ ಮೋಹನ್, ಹಿರಿಯ ವಕೀಲ ಡಾ.ಓ.ಶ್ಯಾಮ್ ಭಟ್ ಅವರಿಂದ ಇಂಡಿಯನ್ ನಾಲೆಡ್ಜ್ ಸಿಸ್ಟಮ್ ಅಂಡ್ ಮಹರ್ಷಿ ಅಗಸ್ತ್ಯ ಕುರಿತು ಉಪನ್ಯಾಸ, ಆಯುಷ್ ಮೆಡಿಕಲ್ ಎಜುಕೇಷನ್ ಜಂಟಿ ನಿರ್ದೇಶಕ ಡಾ.ಎನ್.ಆಂಜನೇಯಮೂರ್ತಿ ಅವರಿಂದ ಅಗಸ್ತ್ಯ ಕಾಂಟ್ರಿಬ್ಯೂಷನ್ ಟು ಸಿದ್ಧ ಮೆಡಿಸಿನ್ ಕುರಿತು ಉಪನ್ಯಾಸ, ಅಧ್ಯಕ್ಷತೆ: ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಪ್ರಿನ್ಸಿಪಾಲ್ ಡಾ. ಕೆ.ಎಸ್.ರಾಧಾಕೃಷ್ಣ ರಾಮರಾವ್, ಸ್ಥಳ: ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣ, ಬೆಳಗ್ಗೆ 10ಕ್ಕೆ.

■ **ಕರ್ನಾಟಕ ರಾಜ್ಯ ರೈತ ಸಂಘ:** ವಿಶ್ವರೈತ ಚೇತನ ಪ್ರೊ.ಎಂ.ಡಿ.ನಂಜುಂಡಸ್ವಾಮಿ–89, ಜಿಲ್ಲಾ ರೈತ ಸಮಾವೇಶ, ಬೆಳಗ್ಗೆ 11 ಗಂಟೆಗೆ ಮೆರವಣಿಗೆಗೆ ಚಾಲನೆ –ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರಿಂದ, ಬೆಳಗ್ಗೆ 11.45ಕ್ಕೆ ಪುರಭವನದ ಎದುರು ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆಗೆ ಗೌರವಾರ್ಪಣೆ, ಮಧ್ಯಾಹ್ನ 2ಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮತ್ತು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರಿಂದ ಸಮಾವೇಶದ ಹಕ್ಕೊತ್ತಾಯ ಸ್ವೀಕಾರ, ಬೆಳಗ್ಗೆ 11.15ಕ್ಕೆ ಸಂಘದ ಧ್ವಜಾರೋಹಣ: ಮಹಿಳಾ ಘಟಕದ ಕಾರ್ಯಾಧ್ಯಕ್ಷೆ ಶ್ರೀಮತಿ ಯಧುಶೈಲ ಸಂಪತ್, ಮಧ್ಯಾಹ್ನ 12ಕ್ಕೆ ಸಮಾವೇಶದ ಉದ್ಘಾಟನೆ : ಮಾಜಿ ಶಾಸಕ ಡಾ. ಸುನೀಲಂ, ಅಧ್ಯಕ್ಷತೆ : ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್, ಮುಖ್ಯ ಅತಿಥಿಗಳು : ಶಾಸಕ ಬಿ.ಆರ್. ಪಾಟೀಲ್, ಡಾ. ವಿ. ವಾಸು, ಕೃಷಿ ವಿಜ್ಞಾನಿ ಡಾ. ಪ್ರಕಾಶ್ ಕಮ್ಮರಡಿ, ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಕಿರುಹೊತ್ತಿಗೆ ಬಿಡುಗಡೆ : ಸರ್ವೋದಯ ಕರ್ನಾಟಕ ಪಕ್ಷದ ರಾಜ್ಯಾಧ್ಯಕ್ಷ ಚಾಮರಸ ಮಾಲೀ ಪಾಟೀಲ್, ರೈತ ಸಂಘದ ಕಿರು ಹೊತ್ತಿಗೆ ಬಿಡುಗಡೆ : ಕಾರ್ಯಾಧ್ಯಕ್ಷ ಜೆ.ಎಂ. ವೀರಸಂಗಯ್ಯ, ಸಂಘದ ಸಂವಿಧಾನದ ಮುದ್ರಿತಪುಸ್ತಕ ಬಿಡುಗಡೆ : ಕಾರ್ಯಾಧ್ಯಕ್ಷ ಎ.ಎಂ. ಮಹೇಶ್ ಪ್ರಭು, ಸ್ಥಳ: ಪುರಭವನ.

■ **ಶ್ರೀರಾಮಕೃಷ್ಣ ಆಶ್ರಮ :** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀಮದ್ಭಗವದ್ಗೀತಾ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜಿ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ಎಲ್ಲಮ್ಮತಾಯಿ ಅಮ್ಮನವರ ದೇವಸ್ಥಾನ:** ಭರತ ಹುಣ್ಣಿಮೆ ಅಂಗವಾಗಿ ಶ್ರೀ ಎಲ್ಲಮ್ಮತಾಯಿ ಅಮ್ಮನವರ 21ನೇ ವರ್ಷದ ಪೂಜಾ ಮಹೋತ್ಸವ, ಸಂಜೆ 6 ಗಂಟೆಗೆ ಅಭಿಷೇಕ, ವಿಶೇಷ ಪೂಜೆ, ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ರಾಮಾನುಜ ರಸ್ತೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಸೀರೆಯ ಸೊಬಗು–ವೈವಿಧ್ಯಮಯ ಸೀರೆಗಳ ಪರಿಚಯ, ಪ್ರಸ್ತುತಿ : ಜಯಶ್ರೀ ಹೆಗಡೆ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ.ಎ. ಶೋಭಾ, ವ್ಯಾಖ್ಯಾನ–ಡಾ. ಲತಾ ಮೈಸೂರು, 6.50 ರೈತರಿಗೆ ಸಲಹೆ, 7.15 ಹಸಿರುಹೊನ್ನು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು : ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ, 8.30 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಗಾಯತ್ರಿ ಗಿರೀಶ್–ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಾಡಿನಲ್ಲಿನ ಕಥೆಗಳು. ಪ್ರಸ್ತುತಿ : ಜಿ. ಶಾಂತಕುಮಾರ್

ಮಧ್ಯಾಹ್ನ: 12.35 ದೇವರನಾಮ, 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಉರ್ದು ಕಾರ್ಯಕ್ರಮ, 4.00 ಜನಪದ ಸಂಗೀತ, 4.30 ರಸಮಂಜರಿ, 5.50 ಸೀರೆಯ ಸೊಬಗು– ವೈವಿಧ್ಯಮಯ ಸೀರೆಗಳ ಪರಿಚಯ, ಪ್ರಸ್ತುತಿ : ಜಯಶ್ರೀ ಹೆಗಡೆ, 6.10 ಕ್ಯಾನ್ಸರ್‌ನ ಮಿಥ್ಯೆಗಳು –ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಚಾಪ್ಟರ್, 6.50 ಕೃಷಿರಂಗ–ಕಿಸಾನ್ ವಾಣಿ, ಪ್ರಾಯೋಜಕರು : ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ 'ನಂ ಕಂಪನಿ' ರೈತ ಉತ್ಪಾದಕ ಸಂಸ್ಥೆಗಳ ಸಬಲೀಕರಣ ಕುರಿತ ಬಾನುಲಿ ಸರಣಿ ರೈತ ಉತ್ಪಾದಕ ಕಂಪನಿಗಳ ಮೂಲಕ ನೇರ ಖರೀದಿ ಕುರಿತು ಸಂವಾದ. ಭಾಗವಹಿಸುತ್ತಾರೆ–ಮಂಡ್ಯದ ವಿಕಸನ ಗ್ರಾಮೀಣ ಹಾಗೂ ನಗರಾಭಿವೃದ್ಧಿ ಸಂಸ್ಥೆಯ ಮಾರುಕಟ್ಟೆ ಸಲಹೆಗಾರರಾದ ಜಿ. ಎ. ಚಂದ್ರು ಮತ್ತು ಹುಣಸೂರಿನ ಸಾಯಿ ವೆಂಕಟರಂಗ ಅಗ್ರೋ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯ ವೈ. ಎಸ್. ಕುಮಾರ್ ಪ್ರಸ್ತುತಿ: ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಸಂಸದ್ ಸಮೀಕ್ಷಾ, 8.15 ಯುವವಾಣಿ–ಇತ್ತೀಚೆಗೆ ಜರುಗಿದ ಮೈಸೂರು ವಿಶ್ವವಿದ್ಯಾಲಯದ 105 ಘಟಿಕೋತ್ಸವದಲ್ಲಿ ಕನ್ನಡ ಎಂ. ಎ. ವಿಷಯದಲ್ಲಿ ಪ್ರಥಮ ರ‍್ಯಾಂಕ್‌ನೊಂದಿಗೆ 11 ಚಿನ್ನದ ಪದಕ ಹಾಗೂ ನಗದು ಪುರಸ್ಕಾರ ಗಳಿಸಿದ ಹೆಚ್. ಡಿ. ಕೋಟೆ ತಾಲೂಕು ಕುಣಿಗಲು ಗ್ರಾಮದ ಕಾವ್ಯ. ಸಿ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ್, 9.30 ಕನ್ನಡ ಭಾರತಿ, 10.00 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿಮುದ್ರಣದ ಪ್ರಸಾರ

ಸೌಹಾರ್ದತೆ, ಧಾರ್ಮಿಕ ಸಹಿಷ್ಣುತೆಗೆ ಕುಂಭಮೇಳ ಪ್ರೇರಣೆ ಆಗಬೇಕು

● ಮೈಸೂರು ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಭಿಮತ ● ಪುಣ್ಯಸ್ನಾನ ಮಾಡಿಯೂ ಮನಸ್ಸಿನ ಕೊಳೆ ತೊಳೆಯದಿದ್ದರೆ ಪ್ರಯೋಜನವಾಗದು ● ಕುಂಭಮೇಳದ ಮೂಲಕ ಸಮಾನತೆ ಕಾಣುತ್ತಿದ್ದೇವೆ: ಆದಿಚುಂಚನಗಿರಿ ಶ್ರೀಗಳ ಆಶೀರ್ವಚನ



ತಿ.ನರಸೀಪುರದಲ್ಲಿ ನಡೆದ ಕುಂಭಮೇಳದ ಸಮಾರೋಪ ಸಮಾರಂಭದ ಕಾರ್ಯಕ್ರಮಕ್ಕೆ ವಿವಿಧ ಮಠಾಧೀಶರೊಂದಿಗೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಚಾಲನೆ ನೀಡಿದರು.

ತಿ.ನರಸೀಪುರ,ಫೆ.12(ಎಂಟಿವೈ,ಎಸ್‌ಕೆ)– ವಿವಿಧತೆಯಲ್ಲಿ ಏಕತೆ ಹೊಂದಿರುವ ರಾಷ್ಟ್ರವಾದ ಭಾರತದಲ್ಲಿ ಸೌಹಾರ್ದತೆ ಮತ್ತು ಧಾರ್ಮಿಕ ಸಹಿಷ್ಣುತೆಯಿಂದ ಜೀವನ ನಡೆಸಲು ಕುಂಭಮೇಳ ಪ್ರೇರಣೆಯಾಗಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಭಿಪ್ರಾಯಪಟ್ಟಿದ್ದಾರೆ.

ತಿ.ನರಸೀಪುರದ ತ್ರಿವೇಣಿ ಸಂಗಮದ ರಸ್ತೆಯ ಚೌಡೇಶ್ವರಿ ದೇವಾಲಯದ ಬಳಿ 13ನೇ ಕುಂಭಮೇಳದ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ಅವರು, ತಿ.ನರಸೀಪುರದ ತ್ರಿವೇಣಿ ಸಂಗಮ ಕ್ಷೇತ್ರದಲ್ಲಿ ಪ್ರತಿ ಮೂರು ವರ್ಷಕ್ಕೊಮ್ಮೆ ನಡೆಯುವ ಕುಂಭಮೇಳವನ್ನು ಈ ಬಾರಿ ಅದ್ಧೂರಿಯಾಗಿ, ಅರ್ಥಪೂರ್ಣವಾಗಿ ಆಚರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅಗತ್ಯ ಅನುದಾನ ಬಿಡುಗಡೆ ಮಾಡಿದ್ದಾರೆ. ಕುಂಭಮೇಳದ ಯಶಸ್ಸಿಗೆ ಅಧಿಕಾರಿ ವರ್ಗ ಶ್ರಮಿಸಿದೆ. ಅಲ್ಲದೆ, ವಿವಿಧ ಮಠಾಧೀಶರು ಕುಂಭಮೇಳದ ಧಾರ್ಮಿಕ ಕಾರ್ಯ ನಡೆಸಿಕೊಡುವ ಮೂಲಕ 13ನೇ ಕುಂಭಮೇಳ ಅತ್ಯಂತ ಯಶಸ್ವಿಯಾಗಿ ನೆರವೇರಿದೆ. ಮೊದಲ ದಿನದಿಂದಲೂ ಅಪಾರ ಸಂಖ್ಯೆಯ ಭಕ್ತರು ಕುಂಭಮೇಳದಲ್ಲಿ ಪಾಲ್ಗೊಂಡು ಕುಂಭಸ್ನಾನ ಮಾಡಿದ್ದಾರೆ ಎಂದರು.

ಮನುಷ್ಯರ ದೃಷ್ಟಿಯಲ್ಲಿ ಎಲ್ಲರೂ ಒಂದು ಎನ್ನುವುದು ಮುಖ್ಯ ಎಂದು ಡಾ.ಬಿ.ಆರ್.ಅಂಬೇಡ್ಕರ್ ಹೇಳಿದ್ದರು. ಪುಣ್ಯಸ್ನಾನ ಮಾಡಿ ಮನಸ್ಸಿನ ಕೊಳೆ ತೊಳೆಯದಿದ್ದರೆ ಪ್ರಯೋಜನವಾಗದು. ಮೊದಲು ಮನಸ್ಸಿನ ಕೊಳೆ ತೊಳೆಯಬೇಕು. ಮನಸ್ಸಿನಲ್ಲಿ ಬದಲಾವಣೆ ಆಗಬೇಕು. ಸಮುದಾಯಗಳಲ್ಲಿ ಮಾನಸಿಕ ಬದಲಾವಣೆ ತಂದು, ಸಮ ಸಮಾಜ ನಿರ್ಮಾಣದ ಪ್ರೇರಣೆಯೇ ಧಾರ್ಮಿಕ ಆಚರಣೆಗಳ ಮುಖ್ಯ ಗುರಿಯಾಗಿದೆ. ಗುಣಾತ್ಮಕವಾದ ನಿಲುವು ನಡೆ ಬಹುತ್ವವಾಗಿದೆ. ಸಂವಿಧಾನ ಇಲ್ಲದಿದ್ದರೆ ಬಹುತ್ವ ನಾಶವಾಗುತ್ತಿತ್ತು. ಸ್ವಾಮೀಜಿಗಳು, ಸಾಧು–ಸಂತರ ಸಂದೇಶವೂ ಬಹುತ್ವ ಸಾರುವುದೆ ಆಗಿದೆ. ಈ ಕುಂಭಮೇಳವೂ ವೈವಿಧ್ಯತೆಯಲ್ಲಿ ಏಕತೆಯ ಸಂದೇಶವನ್ನು ರಾಜ್ಯಕ್ಕೆ ನೀಡಿದ್ದು, ರಾಜ್ಯದ ಜನರು ಸೌಹಾರ್ದತೆಯಿಂದ ಜೀವನ ನಡೆಸಲು ಕುಂಭಮೇಳ ಪ್ರೇರಣೆಯಾಗಲಿ ಎಂದು ಅಭಿಪ್ರಾಯಪಟ್ಟರು. ಧಾರ್ಮಿಕ ವಿಚಾರಗಳಲ್ಲಿ ಸಹಿಷ್ಣುತೆ, ಸೌಹಾರ್ದತೆ ಇರಬೇಕು. ಧರ್ಮ ರಾಜಕೀಯ ಮಾಡಬಾರದು. ರಾಜಕೀಯ ಧರ್ಮದೊಳಗೆ ಪ್ರವೇಶ ಮಾಡಬಾರದು. ಹೀಗಾಗಿ ಸಂವಿಧಾನದಲ್ಲಿ ಧಾರ್ಮಿಕ ಆಚರಣೆಗಳಿಗೆ ಮುಕ್ತ ಅವಕಾಶ ನೀಡಿದೆ. ಯಾವ ಧರ್ಮವೂ ಶ್ರೇಷ್ಠ–ಕನಿಷ್ಠವಲ್ಲ ಎಂದು ಆಶಯ ಬಿತ್ತಿದೆ. ಸಂವಿಧಾನದ ಆಶಯ ಈಡೇರಿಸುವ ನಿಟ್ಟಿನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸರ್ಕಾರ ಧಾರ್ಮಿಕ ಆಚರಣೆಗೆ ಮುಕ್ತ ಅವಕಾಶ ನೀಡಿದೆ. ದೇಶದ ಮೂಲನಿವಾಸಿಗಳು ಪುರಾತನ ಕಾಲದಲ್ಲಿ ನದಿ, ಬೆಟ್ಟ, ಗಿಡ–ಮರಗಳನ್ನು ಮೂಲನಿವಾಸಿಗಳು ಪೂಜೆ ಮಾಡುತ್ತಿದ್ದರು. ಏಕೆಂದರೆ ಅವರಿಗೆ ಯಾವ ದೇವರು ಸಿಕ್ಕಿರಲಿಲ್ಲ. ಹೀಗಾಗಿ ಸಂಸ್ಕೃತಿಯನ್ನೆ ದೇವರೆಂದು ಪೂಜಿಸಿದರು. ಜೀವನ ಶೈಲಿ, ನಡೆ–ನುಡಿ, ಆಚಾರ–ವಿಚಾರಗಳೇ ನಮ್ಮ ಸಂಸ್ಕೃತಿ. ಹೀಗಾಗಿ ಭಾರತ ಮೂಲ ಸಂಸ್ಕೃತಿಯಾದ ಬಹುತ್ವದ ರಕ್ಷಣೆಯಾಗಬೇಕು ಎಂದು ಹೇಳಿದರು.

ಇದೆ ವೇಳೆ ಶ್ರೀ ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದ ಸ್ವಾಮೀಜಿ ಮಾತನಾಡಿ, ಜಾತಿ ಧರ್ಮ ಪ್ರತಿಷ್ಠೆಗಳನ್ನು ಮುರಿದು ಒಂದೇ ನದಿಯಲ್ಲಿ ಮುಳುಗಿ ಸ್ನಾನ ಮಾಡಿ ಕುಂಭಮೇಳದ ಮೂಲಕ ಸಮಾನತೆಯನ್ನು ಕಾಣುತ್ತಿದ್ದೇವೆ. ಕುಂಭಸ್ನಾನ ಮಾಡುವುದರಿಂದ ಪಾಪಗಳು ಹೊರ ಹೋಗುವುದು ಸತ್ಯ. ಆದರೆ, ಅಧ್ಯಾತ್ಮಿಕ, ಧಾರ್ಮಿಕತೆ, ಸೇವಾ ಮನೋಭಾವನೆ ಅನುಷ್ಠಾನಗೊಳ್ಳದಿದ್ದರೆ ಕುಂಭಸ್ನಾನ ವ್ಯರ್ಥವಾಗಲಿದೆ. ಧಾರ್ಮಿಕ ಕಾರ್ಯಗಳು ನಮ್ಮೊಳಗೆ ಬದಲಾವಣೆ ತರಬೇಕು ಎಂದರು. ಆಧುನಿಕತೆಯ ಬೆಳಕಿನಲ್ಲಿ ಸಾಗುತ್ತಿರುವ ಯುವಜನತೆಗೆ ಆಧ್ಯಾತ್ಮಿಕತೆಯ ಒಳನೋಟ ಪರಿಚಯವಿಲ್ಲದಿದ್ದರೆ ಬದುಕು ಸುಂದರವಾಗಿರುವುದಿಲ್ಲ. ಈ ನಿಟ್ಟಿನಲ್ಲಿ ನಮ್ಮ ಹಿರಿಯರು ಕುಂಭಮೇಳದಂತಹ ಧಾರ್ಮಿಕ ಆಚರಣೆ ಇನ್ನೂ ನಡೆಸುತ್ತಾ ಬಂದಿದ್ದಾರೆ. 1889ರಲ್ಲಿ ಯತಿಗಳು ಕಾವೇರಿ, ಕಪಿಲ, ಸ್ಫಟಿಕ ಸರೋವರ ಸಂಗಮ ಸೇರುವ ಸ್ಥಳದಲ್ಲಿ ಕುಂಭಮೇಳವನ್ನು ಆರಂಭಿಸಿದರು. ಉತ್ತರಪ್ರದೇಶದ ಪ್ರಯಾಗ್ ರಾಜ್‌ನಲ್ಲಿ ಮಹಾ ಕುಂಭಮೇಳ ನಡೆಯುತ್ತಿದ್ದು, ಅಲ್ಲಿಗೆ ನಾವೆಲ್ಲರೂ ಹೋಗಿ ಬಂದಿದ್ದೇವೆ. ಸಾಕಷ್ಟು ಮಂದಿ ಕರ್ನಾಟಕದವರು ಕುಂಭಮೇಳಕ್ಕೆ ಸಾಕ್ಷಿಯಾಗಿ ಬಂದಿದ್ದಾರೆ. ಮಹಾ ಕುಂಭ ಮೇಳಕ್ಕೆ ಹೋಗಲು ಆಗದೇ ಇರುವವರು ನರಸೀಪುರದಲ್ಲಿ ನಡೆಯುತ್ತಿರುವ ಕುಂಭಮೇಳದಲ್ಲಿ ಪಾಲ್ಗೊಂಡು ಪುಣ್ಯಸ್ನಾನ ಮಾಡಬಹುದು. ಮಹಾ ಕುಂಭಮೇಳದಷ್ಟೇ ನರಸೀಪುರದ ಕುಂಭಮೇಳಕ್ಕೆ ಮಹತ್ವವಿದೆ ಎಂದರು. ನದಿಗಳು ಚೆನ್ನಾಗಿದ್ದರೆ ದೇಶ ಚೆನ್ನಾಗಿರುತ್ತದೆ. ನದಿಗಳು ದೇಶದ ಜೀವನಾಡಿಯಾಗಿವೆ. ನದಿಗಳನ್ನು ಕಾಪಾಡುವ ನಿಟ್ಟಿನಲ್ಲಿ ಕುಂಭಮೇಳವು ಜನರಲ್ಲಿ ಜಾಗೃತಿ ಮೂಡಿಸುವ ಒಂದು ಸಂದೇಶವನ್ನು ರವಾನಿಸುತ್ತದೆ. ಮಾನವನಿಗೆ ಹೃದಯ ಎಷ್ಟು ಮುಖ್ಯವೋ ನದಿಗಳು ದೇಶಕ್ಕೆ ಅಷ್ಟೇ ಮುಖ್ಯ. ಮಾನವನ ಹೃದಯದಂತೆ ನದಿಗಳು ಕಾರ್ಯನಿರ್ವಹಿಸುತ್ತಿವೆ. ನದಿಗಳನ್ನು ಕಲುಷಿತಗೊಳಿಸದೆ ಸ್ವಚ್ಛವಾಗಿಟ್ಟುಕೊಳ್ಳಬೇಕು. ದೇಶದ ಜೀವನಾಡಿಯಾಗಿರುವ ನದಿಗಳು ಚೆನ್ನಾಗಿದ್ದರೆ ದೇಶ ಸುಭಿಕ್ಷೆಯಿಂದ ಕೂಡಿರುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕಾಗಿನೆಲೆ ಮಠದ ಶ್ರೀ ಶಿವಾನಂದ ಪುರಿ ಸ್ವಾಮೀಜಿ, ಕೈಲಾಶಾಶ್ರಮದ ಶ್ರೀ ಜಯೇಂದ್ರ ತೀರ್ಥ ಸ್ವಾಮೀಜಿ, ತಿರುಚ್ಚಿ ಸ್ವಾಮೀಜೀ, ರಾಮಕೃಷ್ಣ ಆಶ್ರಮದ ಶ್ರೀ ಮುಕ್ತಿದಾನಂದ ಮಹಾರಾಜ್, ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಸ್ವಾಮೀಜಿ ಶ್ರೀ ದತ್ತ ವಿಜಯಾನಂದ ತೀರ್ಥ ಸ್ವಾಮೀಜಿ ಸೇರಿದಂತೆ ವಿವಿಧ ಮಠಾಧೀಶರು, ಜಿಲ್ಲಾಧಿಕಾರಿ ಜಿ.ಲಕ್ಷ್ಮೀ ಕಾಂತ ರೆಡ್ಡಿ, ಜಿ.ಪಂ. ಸಿಇಓ ಕೆ.ಎಂ.ಗಾಯತ್ರಿ, ಎಸ್ಪಿ ವಿಷ್ಣುವರ್ಧನ್, ಉಪವಿಭಾಗಾಧಿಕಾರಿ ರಕ್ಷಿತ್ ಸೇರಿದಂತೆ ಭಕ್ತಾದಿಗಳು ಉಪಸ್ಥಿತರಿದ್ದರು.

ಕಂಡ ಕಂಡಲ್ಲಿ ಸ್ನಾನಕ್ಕೆ ನುಗ್ಗಿದ ಭಕ್ತರು; ನಿಯಂತ್ರಿಸಲು ಹರಸಾಹಸಪಟ್ಟ ಪೋಲೀಸರು



ತ್ರಿವೇಣಿ ಸಂಗಮ ಕ್ಷೇತ್ರದ ಅಗಸ್ತ್ಯೇಶ್ವರ ದೇವಾಲಯದ ಬಳಿ ಮೆಟ್ಟಿಲುಗಳ ಮೇಲೆ ಅಪಾರ ಸಂಖ್ಯೆಯಲ್ಲಿ ಸೇರಿರುವ ಭಕ್ತ ಸಮೂಹ.

ತಿ.ನರಸೀಪುರ, ಫೆ.12(ಎಂಟಿವೈ,ಎಸ್‌ಕೆ)– ತ್ರಿವೇಣಿ ಸಂಗಮ ಕ್ಷೇತ್ರದಲ್ಲಿ ಪುಣ್ಯಸ್ನಾನ ಮಾಡಲು ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿದ್ದು, ವ್ಯವಸ್ಥೆ ಮಾಡಲಾಗಿದ್ದ ಮೂರು ಸ್ನಾನಘಟ್ಟದಲ್ಲೂ ಭಕ್ತರು ತಡೆಗೋಡೆ ಭೇದಿಸಿ ನದಿಗೆ ಇಳಿಯುವ ದುಸ್ಸಾಹಸ ಪ್ರದರ್ಶಿಸಿದರು.

ತ್ರಿವೇಣಿ ಸಂಗಮ ಕ್ಷೇತ್ರದ ದಡದಲ್ಲಿರುವ ಅಗಸ್ತ್ಯೇಶ್ವರ, ಗುಂಜಾನರಸಿಂಹಸ್ವಾಮಿ ಹಾಗೂ ಭಿಕ್ಷೇಶ್ವರ ದೇವಾಲಯದ ಬಳಿ ಜಿಲ್ಲಾಡಳಿತದ ವತಿಯಿಂದ ಪುಣ್ಯಸ್ನಾನಕ್ಕೆ ಸ್ನಾನಘಟ್ಟ ವ್ಯವಸ್ಥೆ ಮಾಡಲಾಗಿತ್ತು. ಅಲ್ಲದೆ, ನದಿ ಮಧ್ಯಭಾಗಕ್ಕೆ ಹೋಗದಂತೆ ನದಿಯಲ್ಲೇ ಬ್ಯಾರಿಕೇಡ್ ಹಾಕಲಾಗಿತ್ತು. ಆದರೆ, ಇಂದು ಹೆಚ್ಚಿನ ಸಂಖ್ಯೆಯ ಭಕ್ತರು ಆಗಮಿಸಿದ್ದರಿಂದ ಪೊಲೀಸರು ಹಾಕಿದ್ದ ಬ್ಯಾರಿಕೇಡ್‌ಗಳನ್ನು ಭೇದಿಸಿ ಪುಣ್ಯಸ್ನಾನ ಮಾಡಲು ನದಿಗೆ ಇಳಿಯುವ ಮೂಲಕ ಪೊಲೀಸರಿಗೆ ತಲೆನೋವಾಗಿ ಪರಿಣಮಿಸಿದರು. ಮೂರು ಸ್ನಾನಘಟ್ಟ ಮಾತ್ರವಲ್ಲದೆ, ಮೂರು ನದಿಗಳ ಸಂಗಮ ಸ್ಥಳದಿಂದ ಉದ್ದಕ್ಕೂ ನದಿ ಪಾತ್ರದಲ್ಲಿ ಭಕ್ತರ ಗುಂಪು ಸ್ನಾನಕ್ಕೆ ನದಿಗೆ ಇಳಿಯುತ್ತಲೇ ಇತ್ತು. ತ್ರಿವೇಣಿ ಸಂಗಮ ಕ್ಷೇತ್ರದಲ್ಲಿ ಅಪಾಯದ ಸ್ಥಳದತ್ತ ಹೋಗುತ್ತಿದ್ದ ಭಕ್ತರನ್ನು ಕೂಡಲೇ ಪೊಲೀಸ್ ಹಾಗೂ ಅಗ್ನಿಶಾಮಕ ಸಿಬ್ಬಂದಿಯುಳ್ಳ ತಂಡ ಮೋಟಾರ್ ಬೋಟ್‌ನಲ್ಲಿ ತೆರಳಿ ಎಚ್ಚರಿಕೆ ನೀಡಿ ಸುರಕ್ಷಿತವಾಗಿ ದಡ ಸೇರಿಸಿ ಬರುತ್ತಿದ್ದರು.

ನದಿ ಮಧ್ಯದ ಗುಡ್ಡಕ್ಕೆ ನುಗ್ಗಿದ ಭಕ್ತರು: ಜಿಲ್ಲಾಡಳಿತ ವ್ಯವಸ್ಥೆ ಮಾಡಿದ್ದ ಸ್ನಾನಘಟ್ಟದ ಬಳಿ ನಿಗದಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ಆಗಮಿಸಿದ್ದರಿಂದ ನದಿಯ ತಳಭಾಗದ ಪಾಚಿ ಮೇಲೆ ಬಂದಿತ್ತು. ಇದರಿಂದ ಸ್ನಾನ ಮಾಡುವ ಸ್ಥಳದಲ್ಲಿ ನದಿ ನೀರು ಬೊಗಡು ನೀರಿನಂತೆ ಕಾಣುತ್ತಿತ್ತು. ಇದನ್ನು ಗಮನಿಸಿದ ಭಕ್ತರು ನದಿ ಮಧ್ಯದ ಮರಳಿನ ಗುಡ್ಡಕ್ಕೆ ಒಬ್ಬರನ್ನೊಬ್ಬರು ಕೈಹಿಡಿದು ನದಿಯಲ್ಲಿ ಸಾಗಿದರು. ಮರಳು ಗುಡ್ಡದ ಬಳಿ ನೂರಾರು ಮಂದಿ ಪುಣ್ಯಸ್ನಾನ ಮಾಡಿ ವಾಪಸ್ಸಾಗುತ್ತಿದ್ದರು. ಇದನ್ನು ತಡೆಗಟ್ಟಲು ಪೊಲೀಸರು ಎಷ್ಟೇ ಪ್ರಯತ್ನಿಸಿದರೂ ಭಕ್ತರು ಮಾತ್ರ ಯಾರ ಮಾತಿಗೂ ಕಿವಿಗೊಡದೇ ನದಿಯಲ್ಲೇ ನಡೆದು ಗುಡ್ಡ ತಲುಪಿ, ಸ್ನಾನ ಮಾಡಿ ಮತ್ತೆ ವಾಪಸ್ಸಾಗುತ್ತಿದ್ದರು.

ನೂಕು–ನುಗ್ಗಲು: ಅಗಸ್ತ್ಯೇಶ್ವರ ದೇವಾಲಯದ ಬಳಿ ನದಿ ದಡದಲ್ಲಿ ನಿರ್ಮಿಸಿರುವ ಮೆಟ್ಟಿಲುಗಳ ಮೇಲೆ ಸಾವಿರಾರು ಭಕ್ತರು ಜಮಾಯಿಸಿದ್ದರು. ಪುಣ್ಯಸ್ನಾನ ಮಾಡಲು ನದಿಗೆ ಇಳಿದಿದ್ದವರು ವಾಪಸ್ಸು ಬರಲೆಂದು ಕಾಯುತ್ತಾ ಕುಳಿತಿದ್ದ ಭಕ್ತರೊಂದಿಗೆ ಹೊಸದಾಗಿ ಬಂದ ಭಕ್ತರು ಸೇರಿ ಆಗಾಗೆ ನೂಕು–ನುಗ್ಗಲು ಉಂಟಾಗುತ್ತಿತ್ತು. ಕೂಡಲೇ ಪೊಲೀಸರು ಬ್ಯಾರಿಕೇಡ್ ಎಳೆದು ಜನರನ್ನು ನಿಯಂತ್ರಿಸುತ್ತಿದ್ದರು.

ಹರಿದು ಬಂದ ಭಕ್ತ ಸಮೂಹ; ತಿ.ನರಸೀಪುರದಲ್ಲಿ ಟ್ರಾಫಿಕ್ ಜಾಮ್



ತಿ.ನರಸೀಪುರದ ರಸ್ತೆಯಲ್ಲಿ ಟ್ರಾಫಿಕ್ ಜಾಮ್ ಉಂಟಾಗಿರುವುದು.

ತಿ.ನರಸೀಪುರ, ಫೆ.12(ಎಂಟಿವೈ,ಎಸ್‌ಕೆ)– ದಕ್ಷಿಣ ಭಾರತದ ಏಕೈಕ ಕುಂಭಮೇಳ ಎನಿಸಿರುವ ತಿ.ನರಸೀಪುರದಲ್ಲಿ ಕಳೆದ ಮೂರು ದಿನಗಳಿಂದ ನಡೆಯುತ್ತಿದ್ದ ಕುಂಭಮೇಳದ ಕೊನೆಯ ದಿನವಾದ ಇಂದು ಭಕ್ತ ಸಾಗರವೇ ಹರಿದು ಬಂದ ಹಿನ್ನೆಲೆಯಲ್ಲಿ ತಿ.ನರಸೀಪುರದಲ್ಲಿ ಟ್ರಾಫಿಕ್ ಜಾಮ್ ಉಂಟಾಗಿತ್ತು. ಕುಂಭಮೇಳದ ಕೊನೆ ದಿನವಾದ ಬುಧವಾರ ಶುದ್ಧ ವ್ಯಾಸ ಪೂರ್ಣಿಮೆ ದಿನವೂ ಆಗಿರುವುದರಿಂದ ತ್ರಿವೇಣಿ ಸಂಗಮ ಕ್ಷೇತ್ರದಲ್ಲಿ ಸ್ನಾನ ಮಾಡುವುದರಿಂದ ಪುಣ್ಯ ಪ್ರಾಪ್ತಿಯಾಗಿ, ಜೀವನದಲ್ಲಿ ಒಳ್ಳೆಯದಾಗುತ್ತದೆ ಎಂಬ ನಂಬಿಕೆ ಇರುವುದರಿಂದ ಇಂದು ಮೈಸೂರು, ಮಂಡ್ಯ, ಹಾಸನ, ಕೊಡಗು, ಬೆಂಗಳೂರು, ಚಾಮರಾಜನಗರ ಸೇರಿದಂತೆ ರಾಜ್ಯದ ವಿವಿಧೆಡೆಗಳಿಂದ ಅಪಾರ ಸಂಖ್ಯೆಯ ಭಕ್ತರು ತಿ.ನರಸೀಪುರಕ್ಕೆ ಆಗಮಿಸಿದ್ದರು. ಇದರೊಂದಿಗೆ ತಮಿಳುನಾಡು, ಕೇರಳ, ಆಂಧ್ರದಿಂದಲೂ ಹೆಚ್ಚಿನ ಸಂಖ್ಯೆಯ ಭಕ್ತರು ಖಾಸಗಿ ವಾಹನಗಳಲ್ಲಿ ತಿ.ನರಸೀಪುರಕ್ಕೆ ಆಗಮಿಸಿದ್ದರಿಂದ ಕುಂಭಮೇಳ ನಡೆಯುವ ಸ್ಥಳ ಸಂಪರ್ಕಿಸುವ ರಸ್ತೆ ಸೇರಿದಂತೆ ಪ್ರಮುಖ ರಸ್ತೆಗಳಲ್ಲಿ ಗಂಟೆಗಟ್ಟಲೆ ಟ್ರಾಫಿಕ್ ಜಾಮ್ ಉಂಟಾಗಿತ್ತು. ಮೈಸೂರು, ನಂಜನಗೂಡು, ಬನ್ನೂರು–ಮಳವಳ್ಳಿ, ಚಾಮರಾಜನಗರ, ಕೊಳ್ಳೇಗಾಲ ಸೇರಿದಂತೆ ವಿವಿಧೆಡೆಯಿಂದ ತಿ.ನರಸೀಪುರಕ್ಕೆ ಬರುವ ಎಲ್ಲಾ ರಸ್ತೆಗಳಲ್ಲೂ 2–3 ಕಿ.ಮೀ. ವಾಹನಗಳು ಟ್ರಾಫಿಕ್ ಜಾಮ್‌ನಿಂದಾಗಿ ಸಾಲುಗಟ್ಟಿ ನಿಂತಿದ್ದವು. ಇಂದು ಹೆಚ್ಚಿನ ಸಂಖ್ಯೆಯ ಭಕ್ತರು ಆಗಮಿಸಿದ್ದರಿಂದ ತ್ರಿವೇಣಿ ಸಂಗಮದ ಸ್ಥಳದಿಂದ 2 ಕಿ.ಮೀ. ದೂರದಲ್ಲಿಯೇ ವಾಹನ ನಿಲುಗಡೆ ಮಾಡಿ ಕಾಲ್ನಡಿಗೆಯಲ್ಲಿ ಬರಬೇಕಾದ ಸ್ಥಿತಿ ನಿರ್ಮಾಣವಾಗಿತ್ತು.

ಕಾವೇರಿ, ಕಪಿಲಾ ನದಿಗೆ ಅಡ್ಡಲಾಗಿ ಕಟ್ಟಿರುವ ಮೇಲ್ಸೇತುವೆ ಮೇಲೂ ವಾಹನಗಳು ಸಾಲುಗಟ್ಟಿ ನಿಲ್ಲಬೇಕಾದ ಸ್ಥಿತಿ ನಿರ್ಮಾಣವಾಗಿತ್ತು. ಈ ಹಿಂದೆ ವಾಹನ ನಿಲುಗಡೆಗೆ ಮಾಡಿದ ವ್ಯವಸ್ಥೆ ಸಾಕಾಗದ ಕಾರಣ ಗರ್ಗೇಶ್ವರಿ ಬಳಿಯಿಂದಲೇ ವಾಹನ ನಿಲ್ಲಿಸಿ ಬರುವಂತೆ ಸೂಚಿಸಲಾಗುತ್ತಿತ್ತು. ಅಲ್ಲದೆ, ಖಾಲಿ ಇದ್ದ ಹೊಲ–ಗದ್ದೆಗಳಲ್ಲಿ ತಾತ್ಕಾಲಿಕ ಪಾರ್ಕಿಂಗ್ ವ್ಯವಸ್ಥೆ ಮಾಡುವ ಮೂಲಕ ಟ್ರಾಫಿಕ್ ಜಾಮ್ ಸಮಸ್ಯೆ ನಿವಾರಿಸಲು ಪೊಲೀಸರು ಹೆಣಗಾಡಿದರು.

ಜ್ಞಾನ–ವಿಜ್ಞಾನದ ಬದಲಾವಣೆಗೆ ತಕ್ಕಂತೆ ಬದುಕು ರೂಪಿಸಿಕೊಳ್ಳಬೇಕು

ಯುವ ಸಮೂಹಕ್ಕೆ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಕಿವಿಮಾತು



ಹಿರಿಯ ಸಾಹಿತಿ ಡಾ.ಟಿ.ವಿ.ಸತ್ಯನಾರಾಯಣ ಸಂಪಾದಿತ 'ಗ್ರಹನಿಧಿ' ಕೃತಿಯನ್ನು ರಾಜವಂಶಸ್ಥೆ ಪ್ರಮೋದಾ ದೇವಿ ಒಡೆಯರ್ ಬಿಡುಗಡೆಗೊಳಿಸಿದರು. ಈ ವೇಳೆ ಆದಿಚುಂಚನಗಿರಿ ಮಠದ ಡಾ.ನಿರ್ಮಲಾನಂದನಾಥ ಸ್ವಾಮೀಜಿ, ವ್ಯಾಸರಾಜ ಮಠದ ಪೀಠಾಧ್ಯಕ್ಷರಾದ ಶ್ರೀ ವಿದ್ಯಾಶ್ರೀಶತೀರ್ಥ ಸ್ವಾಮೀಜಿ ಸೇರಿದಂತೆ ಇತರರಿದ್ದರು.

ಮೈಸೂರು,ಫೆ.12(ಎಸ್‌ಪಿಎನ್)– ಭಾರತವು ಜ್ಞಾನ–ವಿಜ್ಞಾನ ಕ್ಷೇತ್ರದಲ್ಲಿ ಶರವೇಗವಾಗಿ ಬದಲಾವಣೆಯಾಗುತ್ತಿದೆ. ಈ ಬದಲಾವಣೆಗೆ ತಕ್ಕಂತೆ ನಮ್ಮ (ಸಮಾಜದ) ಬದುಕು ರೂಪಿಸಿಕೊಳ್ಳಬೇಕು ಎಂದು ಆದಿಚುಂಚನಗಿರಿ ಮಠದ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಯುವಸಮೂಹಕ್ಕೆ ಕಿವಿಮಾತು ಹೇಳಿದರು.

ಮೈಸೂರು ವಿವಿ ಮಾನಸಗಂಗೋತ್ರಿ ಆವರಣದ ವಿಜ್ಞಾನಭವನದಲ್ಲಿ ಮೈಸೂರು ಶ್ರೀ ವ್ಯಾಸತೀರ್ಥ ಸಂಶೋಧನಾ ಕೇಂದ್ರ, ಮೈಸೂರು ವಿವಿ ಪ್ರಾಚ್ಯವಸ್ತು ಸಂಶೋಧನಾಲಯ(ಓಆರ್‌ಐ) ಹಾಗೂ ನವದೆಹಲಿ ಸಂಸ್ಕೃತ ಕೇಂದ್ರೀಯ ವಿಶ್ವವಿದ್ಯಾನಿಲಯ ಸಹಯೋಗದೊಂದಿಗೆ ಏರ್ಪಡಿಸಿದ್ದ ಮೂರು ದಿನಗಳ ಅಂತರ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಗಿಡಕ್ಕೆ ನೀರು ಹಾಕುವ ಮೂಲಕ ಉದ್ಘಾಟಿಸಿ, ಶ್ರೀಗಳು ಮಾತನಾಡಿದರು.

> ❝ ಮುಮ್ಮಡಿ ಕೃಷ್ಣರಾಜ ಒಡೆಯರ್ ರಚಿಸಿದ್ದ 'ಗ್ರಹನಿಧಿ' ಪುಸ್ತಕವನ್ನು ಹಿರಿಯ ಸಾಹಿತಿ ಡಾ.ಟಿ.ವಿ.ಸತ್ಯನಾರಾಯಣ ಸಂಪಾದಿಸಿರುವುದು ಅತ್ಯಂತ ಸಂತೋಷದ ಸಂಗತಿ. ಇಂತಹ ಅಮೂಲ್ಯ ಕೃತಿಯನ್ನು ನಮ್ಮ ಪೂರ್ವಜರು ರಚಿಸಿದ್ದಾರೆ ಎಂಬುದು ತಿಳಿದಿರಲಿಲ್ಲ. ಆದರೆ, ಪ್ರಾಚ್ಯ ವಸ್ತು ಸಂಶೋಧನಾಲಯದ ನಿರ್ದೇಶಕ ಡಾ.ಡಿ.ಪಿ.ಮಧುಸೂದನಾಚಾರ್ಯ ನೇತೃತ್ವದಲ್ಲಿ ಅನೇಕ ಅಮೂಲ್ಯ ಪುಸ್ತಕಗಳನ್ನು ಮರುಮುದ್ರಿಸಿದ್ದಾರೆ. ಇನ್ನು ಕೆಲವು ಪುಸ್ತಕಗಳನ್ನು ಸಂಪಾದಿಸಿರುವುದು ಸಂತೋಷದ ಸಂಗತಿ.
>
> – ಪ್ರಮೋದಾದೇವಿ ಒಡೆಯರ್, ರಾಜವಂಶಸ್ಥರು.

ಜ್ಞಾನ ಮತ್ತು ಶಾಸ್ತ್ರ ಪರಂಪರೆ ಕಾಲಕಾಲಕ್ಕೆ ಬದಲಾವಣೆಗೊಂಡು ನಿರಂತರವಾಗಿ ಮುಂದುವರೆಯುತ್ತದೆ. ಅದರಲ್ಲಿರುವ ಶುದ್ಧ ಚಿಂತನೆಗಳನ್ನು ಎಲ್ಲರೂ ಅಳವಡಿಸಿಕೊಂಡು ಮುಂದಿನ ಬದುಕು ರೂಪಿಸಿಕೊಳ್ಳಬೇಕಿದೆ. ಅಲ್ಲದೆ, ಮನಸ್ಸಿನ ಬೆಳವಣಿಗೆಗೆ ಪೂರಕವಾದ ಚಿಂತನೆಗಳನ್ನು ಯುವ ಸಮೂಹ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ನಮ್ಮ ವಿದ್ಯಾರ್ಥಿಗಳಿಗೆ ಭಾರತೀಯ ಸಂಸ್ಕೃತಿಯ ಜ್ಞಾನ ಪರಂಪರೆಯನ್ನು ಪರಿಚಯಿಸುವ ಕಾರ್ಯಕ್ಕೆ ದೇಶದ ಎಲ್ಲಾ ವಿಶ್ವವಿದ್ಯಾನಿಲಯ ಮತ್ತು ಶಿಕ್ಷಣ ಸಂಸ್ಥೆಗಳು ಕಾರ್ಯೋನ್ಮೋಖವಾಗಬೇಕು ಎಂದು ಸಲಹೆ ನೀಡಿದರು.

ಡಾ. ಮ್ಯಾಕ್ಸ್ ಮುಲ್ಲರ್ ಅವರು, ಲಂಡನ್ ಗ್ರಂಥಾಲಯದಲ್ಲಿ ಕುಳಿತುಕೊಂಡು ಭಾರತದ ಚರಿತ್ರೆಯನ್ನು ಅಧ್ಯಯನ ನಡೆಸಿ ಇಂಗ್ಲಿಷ್ ಭಾಷೆಗೆ ತರ್ಜುಮೆಗೊಳಿಸಿದ್ದರು. ಇದು ತಪ್ಪುತಪ್ಪಾಗಿ ತರ್ಜುಮೆ ಮಾಡಿದ್ದರ ಪರಿಣಾಮ ವಿದೇಶಗಳಲ್ಲಿ ಭಾರತೀಯ ಜ್ಞಾನ ಪರಂಪರೆಯನ್ನು ಕೀಳಾಗಿ ನೋಡಲು ಆರಂಭಿಸಿದರು. ಅಲ್ಲದೆ, ಒಂದು ಕಾಲಕ್ಕೆ ಜಗತ್ತಿನ ಬೇರೆಬೇರೆ ದೇಶದ ವಿದ್ವಾಂಸರು ಇಲ್ಲಿನ ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಯನ ನಡೆಸಲು ಉತ್ಸುಕರಾಗಿದ್ದರು. ಬ್ರಿಟಿಷರು ಭಾರತಕ್ಕೆ ಬಂದ ಮೇಲೆ ನಮ್ಮ ದೇಶದ ಶಿಕ್ಷಣ ಕ್ಷೇತ್ರ ಕಳಪೆ ಎಂದು ಇಡೀ ಜಗತ್ತಿನಲ್ಲಿ ಬಿಂಬಿಸಿದ ಪರಿಣಾಮ, ಅಂದಿನಿಂದ ನಮ್ಮ ಜ್ಞಾನ ಪರಂಪರೆಯ ಗುಣಮಟ್ಟ ಕುಸಿಯತೊಡಗಿತು ಎಂದು ತಿಳಿಸಿದರು. ಸ್ವಾಮಿ ವಿವೇಕಾನಂದರಿಗೆ ಅಮೇರಿಕಾದ ಸರ್ವಧರ್ಮ ಧಾರ್ಮಿಕ ಸಮ್ಮೇಳನದಲ್ಲಿ ಭಾಗವಹಿಸಲು ಮೈಸೂರಿನ ಹತ್ತನೇ ಚಾಮರಾಜ ಒಡೆಯರ್ ಸೇರಿದಂತೆ ಇತರರು ಅಂದು ಆರ್ಥಿಕ ನೆರವು ನೀಡಿ ಕಳುಹಿಸಿಕೊಟ್ಟಿದ್ದರು. ಸ್ವಾಮಿ ವಿವೇಕಾನಂದರು ಅಮೇರಿಕಾದ ಚಿಕಾಗೊದ ಸರ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿ ಅದ್ಭುತ ಭಾಷಣ ಮಾಡಿ, ನಮ್ಮ ಆಧ್ಯಾತ್ಮ ಕ್ಷೇತ್ರಕ್ಕೆ ಬೆಲೆ ತಂದುಕೊಟ್ಟ ಪ್ರಸಂಗವನ್ನು ಎಳೆಎಳೆಯಾಗಿ ಬಿಡಿಸಿಟ್ಟರು. ನಮಗೆ ಬೇಕೋ, ಬೇಡವೋ ಆದರೂ ಉದಾರೀಕರಣ, ಖಾಸಗೀಕರಣ, ನೂತನ ಆರ್ಥಿಕ ನೀತಿ ನಮ್ಮ ಮನೆಯೊಳಗೆ ಬಂದುಬಿಟ್ಟಿದೆ. ಇದರ ಜೊತೆಗೆ ಕೃತಕಬುದ್ಧಿ ಮತ್ತೆ (ಎಐ) ತಂತ್ರಜ್ಞಾನವೂ ಸೇರಿಕೊಂಡಿದೆ. ಈ ಆವಿಷ್ಕಾರ ಮನುಷ್ಯ ಸಂಬಂಧದಲ್ಲಿ ಮತ್ತಷ್ಟು ಬಿರುಕು ಬಾರದಂತೆ ನೋಡಿಕೊಳ್ಳಬೇಕು. ಇನ್ಮುಂದೆ ತರಗತಿಯಲ್ಲಿ ರೊಬೋಟ್‌ಗಳು ಪಾಠ ಮಾಡುತ್ತವೆ. ಕೃಷಿಯಲ್ಲಿ ರೊಬೋಟ್‌ಗಳ ಪಾತ್ರ ಇರುತ್ತದೆ. ನಮ್ಮ ಮನೆ ಮುಂದಿನ ರಸ್ತೆ ಸ್ವಚ್ಛಗೊಳಿಸಲು ರೊಬೋಟ್‌ಗಳು ಬರುತ್ತವೆ. ಇದರ ಜತೆಜತೆಗೆ ನಮ್ಮ ಬದುಕು ಸಾಗಬೇಕು. ನಮ್ಮ ಆಲೋಚನೆಗಿಂತ ರೊಬೋಟ್‌ಗಳ ಆಲೋಚನೆ ಮುಂದೆ ಹೋಗದಂತೆ ನೋಡಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ವೇದಿಕೆಯಲ್ಲಿ ಶ್ರೀ ವ್ಯಾಸರಾಜ ಮಠದ ಪೀಠಾಧ್ಯಕ್ಷರಾದ ಶ್ರೀ ವಿದ್ಯಾಶ್ರೀಶತೀರ್ಥ ಸ್ವಾಮೀಜಿ, ಮೈಸೂರು ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್, ಪ್ರಾಚ್ಯವಿದ್ಯಾ ಸಂಶೋಧನಾಲಯದ ನಿರ್ದೇಶಕ ಡಾ.ಡಿ.ಪಿ.ಮಧುಸೂದನಾಚಾರ್ಯ, ಪಿಪಿಎಸ್‌ಎಂ ನಿವೃತ್ತನಿರ್ದೇಶಕ ಡಾ.ಎ.ವಿ. ನಾಗಸಂಪಿಗೆ, ಡಾ.ಸಿ.ಪಾರ್ವತಿ, ಗೃಹನಿಧಿ ಕೃತಿಯ ಅನುವಾದಕ ಟಿ.ವಿ.ಸತ್ಯನಾರಾಯಣ ಮತ್ತಿತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಬಿಡುಗಡೆಗೊಂಡ ವಿವಿಧ ಲೇಖಕರ ಕೃತಿಗಳು

ಕಾಮವಿಲಾಸ ಭಾಣ, ಸೀತಾಕಲ್ಯಾಣ ವೀಥೀ, ಬ್ರಹ್ಮಸೂತ್ರ ವೃತ್ತಿ, ಅಣುಭಾಷ್ಯಮ್, ಸದಾಚಾರ ಸ್ಮೃತಿಃ, ರುಕ್ಮಿಣೀ ಮಾಧವಾಂಕಃ, ಸರಸ್ವತೀ ವಿಲಾಸಃ, ಮಾಧವೀಯ ಧಾತುವೃತ್ತಿಃ (3 ಸಂಪುಟ), ಪೂರ್ವ ಮೀಮಾಂಸಾದರ್ಶನಮ್(3 ಸಂಪುಟ), ಸ್ಮೃತಿ ಚಂದ್ರಿಕಾ(5 ಸಂಪುಟ) ಪುಸ್ತಕ ಹಾಗೂ ಹೊಸದಾಗಿ ಸಂಪಾದಿತ ಪುಸ್ತಕಗಳಾದ ಹಿರಿಯ ಸಾಹಿತಿ ಡಾ.ಟಿ.ವಿ.ಸತ್ಯನಾರಾಯಣ ಸಂಪಾದಿತ ಗ್ರಹನಿಧಿ(2 ಸಂಪುಟ), ಡಾ.ದಿದ್ದಿಗಿ ವಂಶಿಕೃಷ್ಣ ಸಂಪಾದಿತ ಶ್ರೀ ವಿಷ್ಣುಸಹಸ್ರ ನಾಮ ನಿರುಕ್ತಿ ಭಿಷ್ಯಮ್, ಡಾ.ಎ.ಕೃಷ್ಣ ನಾಗಸಂಪಿಗೆ ಸಂಪಾದಿತ ಮಾಧವಸ್ತವ ರಾಜ, ಕಾರಕ ಸಂಬಂಧೋದ್ಯೋತ, ಡಾ.ಡಿ.ಪಿ. ಮಧುಸೂದನಾಚಾರ್ಯ ಸಂಪಾದಿತ ವಿಷ್ಣುಸ್ತುತಿ ಟೀಕಾ, ತತ್ತ್ವ ಚಿಂತಾಮಣಿ, ಡಾ.ರೋಚನ ಬದ್ರಿನಾಥಾಚಾರ್ಯ ಸಂಪಾದಿತ ಶಬ್ದಕೌಸ್ತುಭ, ಡಾ. ಎಸ್.ಪ್ರಭುಸ್ವಾಮಿ ಸಂಪಾದಿತ ಸಂಖ್ಯಾರತ್ನಕೋಶ ಹಾಗೂ ಪ್ರಾಚ್ಯ ವಿದ್ಯಾ ತರಂಗಿಣೀಯನ್ನು (ಓಆರ್‌ಐ ಜರ್ನಲ್) ಬಿಡುಗಡೆಗೊಳಿಸಲಾಯಿತು.

ಮಹಾ ಕುಂಭಮೇಳದಲ್ಲಿ ಪುಣ್ಯಸ್ನಾನ ಮಾಡುವಾಗ ಹೃದಯಾಘಾತದಿಂದ ವ್ಯಕ್ತಿ ಸಾವು

ಪ್ರಯಾಗ್‌ರಾಜ್‌ನ ಮಹಾ ಕುಂಭಮೇಳದಲ್ಲಿ ಭಾಗಿಯಾಗಿ ಪುಣ್ಯಸ್ನಾನ ಮಾಡುತ್ತಿರುವಾಗ ಹೃದಯಾಘಾತದಿಂದ ವ್ಯಕ್ತಿಯೋರ್ವ ಸಾವನ್ನಪ್ಪಿದ್ದಾನೆ. ಮೃತ ವ್ಯಕ್ತಿಯನ್ನು ಶಿರಾ ತಾಲೂಕಿನ ಬರಗೂರು ಮೂಲದ ನಾಗರಾಜ್ (57) ಎಂದು ಗುರುತಿಸಲಾಗಿದೆ. ಎಲ್‌ಎನ್‌ಪಿ ಬ್ರಿಕ್ಸ್‌ನ ಮಾಲೀಕರಾದ ನಾಗರಾಜು ಸ್ನೇಹಿತರೊಂದಿಗೆ ಪ್ರಯಾಗ್‌ರಾಜ್‌ಗೆ ತೆರಳಿದ್ದರು. ಮಂಗಳವಾರ ಸಾಯಂಕಾಲ ತ್ರಿವೇಣಿ ಸಂಗಮದಲ್ಲಿ ಸಂಧ್ಯಾವಂದನೆ ಮಾಡಿ ಪುಣ್ಯಸ್ನಾನ ಮಾಡುತ್ತಿರುವಾಗ ಹೃದಯಾಘಾತವಾಗಿದ್ದು, ಸ್ಥಳದಲ್ಲಿಯೇ ಕೊನೆಯುಸಿರೆಳೆದಿದ್ದಾರೆ.

SAPTHAGIRI NPS UNIVERSITY
UNMATCHED EXCELLENCE, UNLIMITED POTENTIAL
BENGALURU, KARNATAKA

Walk-In Drive

Position: Faculty for Computer Science Engineering
• Assistant Professor
(Fresh M. Tech (CSE/ISE/IT) graduates including students in 4th Semester are welcome)
• Associate Professor
• Professor

LOCATION : MYSURU
16th Feb 2025
10:00 AM to 5:00 PM

Mysuru: Maya's Kings Kourt, Jhansi Rani Lakshmi Bai Rd, Devaraja Mohalla, Shivarampet, Mysuru, Karnataka - 570005

Eligibility Criteria: As per AICTE norms.
How to Apply: Interested candidates are invited to attend the walk-in interview with a copy of their updated CV, Academic Certificates & Work Experience Certificate, Research Publications, Passport Size Photos and Photo Identity Proof Document.

For more details Contact
Phone: 98862 56888 | Email: hr@snpsu.edu.in

ನಕ್ಕರೆ ಅದೇ ಸ್ವರ್ಗ

ನಿಂಗ : ನಮ್ಮ ಪಿಡಬ್ಲ್ಯುಡಿ ಆಫೀಸ್ ಕ್ಲರ್ಕ್ ಸಿಕ್ಹಾಕ್ಕೊಂಡು ಬಿಟ್ಟ

ರಂಗ : ಅದೆಂಗೆ...?

ನಿಂಗ : ಸುಳ್ಳು ಲೆಕ್ಕ ಬರೆದು...

ರಂಗ : ಏನಂತ?

ನಿಂಗ : ರೋಡ್ ರೋಲರ್ ಪಂಚರ್ ಆಗಿದೆ ಅಂತ ಬರ್ದಿದ್ದ.

ಮೈಸೂರು ಮಿತ್ರ

ಗುರುವಾರ, 13 ಫೆಬ್ರವರಿ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ನಾಲ್ಕು ಜನ ನಿನ್ನನ್ನು ನೋಡುತ್ತಾರೆ ಎಂದು ಬದುಕಬೇಡ. ನಿನ್ನನ್ನು ತಿರಸ್ಕರಿಸಿ ಬಿಟ್ಟು ಹೋದ ನಾಲ್ಕು ಜನ ತಿರುಗಿ ನೋಡುವಂತೆ ಬದುಕು.– ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದಕ್ಷಿಣೆಗಾದರೆ ಮಾತು ಹಿಡಿದಾನು, ಮಂತ್ರಕ್ಕಾದರೆ ಬೆನ್ನು ತೋರ್ಸಿಯಾನು.

ನಿಮ್ಮ ಪತ್ರಗಳು

ದೆಹಲಿ ಚುನಾವಣೆ : ರಾಜಕೀಯ ಪಕ್ಷಗಳಿಗೆ ಪಾಠ

ಮಾನ್ಯರೆ,

ಮತದಾನೋತ್ತರ ಸಮೀಕ್ಷೆಗಳಿಗೆ ಅನುಗುಣವಾಗಿಯೇ ಈ ಬಾರಿ ದೆಹಲಿಯ ಗದ್ದುಗೆ ಭಾರತೀಯ ಜನತಾ ಪಕ್ಷದ ಪಾಲಾಗಿದೆ ಒಟ್ಟು 70 ವಿಧಾನಸಭಾ ಕ್ಷೇತ್ರಗಳ ಪೈಕಿ ಬಿಜೆಪಿ 48 ಸ್ಥಾನಗಳನ್ನು ಗಳಿಸಿ, 27 ವರ್ಷಗಳ ನಂತರ ಮತ್ತೆ ದೆಹಲಿಯಲ್ಲಿ ಬಿಜೆಪಿ ಧ್ವಜ ಹಾರಿಸಲಿದೆ. ಅತ್ಯಂತ ಆತ್ಮವಿಶ್ವಾಸದಿಂದ ಬೀಗುತ್ತಿದ್ದ ಆಡಳಿತಾರೂಢ ಆಮ್ ಆದ್ಮಿ ಪಾರ್ಟಿ 22 ಸ್ಥಾನಗಳನ್ನು ಗಳಿಸಿ, ಹ್ಯಾಟ್ರಿಕ್ ಸಾಧನೆಯಿಂದ ವಂಚಿತವಾಗಿದೆ. ಸ್ವತಃ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ನವದೆಹಲಿ ಕೇಂದ್ರ ಕ್ಷೇತ್ರದಿಂದ 4,089 ಮತಗಳ ಅಂತರದಿಂದ ಬಿಜೆಪಿ ಅಭ್ಯರ್ಥಿ ಪರ್ವೇಶ್ ಸಿಂಗ್ ಸಾಹೇಬ್ ಅವರಿಂದ ಸೋಲನ್ನು ಅನುಭವಿಸಿದ್ದಾರೆ. ಮಾಜಿ ಉಪಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಸಹಾ ಪರಾಜಿತರಾಗಿದ್ದಾರೆ. ಆದರೆ ಮುಖ್ಯಮಂತ್ರಿ ಶ್ರೀಮತಿ ಅತಿಶಿ ಕಲ್ಕಾಜಿ ಕ್ಷೇತ್ರದಿಂದ ಗೆಲ್ಲುವ ಮೂಲಕ ಆಮ್ ಆದ್ಮಿ ಪಕ್ಷಕ್ಕೆ ಸ್ವಲ್ಪಮಟ್ಟಿಗೆ ಸಮಾಧಾನ ತಂದಿದ್ದಾರೆ.

ಕಳೆದ 10 ವರ್ಷಗಳಿಂದ ದೆಹಲಿಯಲ್ಲಿ ಆಡಳಿತ ನಡೆಸುತ್ತಿದ್ದ ಆಪ್ ಆದ್ಮಿ ಪಕ್ಷದ ಹಲವಾರು ನಾಯಕರು ಭ್ರಷ್ಟಾಚಾರ ಪ್ರಕರಣಗಳಲ್ಲಿ ಆರೋಪಿಗಳಾಗಿದ್ದರು. ಸ್ವತಃ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹಾಗೂ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅಕ್ರಮ ಅಬಕಾರಿ ಹಂಚಿಕೆ ಪ್ರಕರಣದಲ್ಲಿ ಜೈಲು ಪಾಲಾಗಿದ್ದರು. ಇದರಿಂದಾಗಿ ಬೇಸತ್ತಿದ್ದ ದೆಹಲಿಯ ಪ್ರಜ್ಞಾವಂತ ಮತದಾರರು ಈಗ ಮತ್ತೆ ದೆಹಲಿಯಲ್ಲಿ ಕಮಲವನ್ನು ಅರಳಿಸಿದ್ದಾರೆ. ರಾಷ್ಟ್ರೀಯ ಪಕ್ಷವೆನಿಸಿಕೊಂಡಿರುವ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಸಾಧನೆ ತೀರಾ ಕೆಳಮಟ್ಟದಲ್ಲಿದೆ. ಕೇವಲ ಒಂದೇ ಒಂದು ಸ್ಥಾನವನ್ನು ಗೆಲ್ಲಲಾಗದ ಈ ಪಕ್ಷದ ಸ್ಥಿತಿಯಂತೂ ಶೋಚನೀಯವಾಗಿದೆ.

ದೆಹಲಿ ವಿಜಯದ ಬಗ್ಗೆ ಪ್ರತಿಕ್ರಿಯಿಸಿರುವ ಪ್ರಧಾನಿ ನರೇಂದ್ರ ಮೋದಿಯವರು ಇದು ವಿಕಾಸ. ದೂರದೃಷ್ಟಿ, ವಿಶ್ವಾಸದ ಜಯ ಎಂದು ಬಣ್ಣಿಸಿದ್ದಾರೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸೋಲು, ಗೆಲುವು ಸಾಮಾನ್ಯ ಮತ್ತು ಸಹಜವಾಗಿದೆ. ಯಾವುದೇ ಪಕ್ಷಕ್ಕೂ ನಿರಂತರವಾಗಿ ಅಧಿಕಾರ ನೀಡಬಾರದು. ಹಾಗೆ ನೀಡಿದಾಗ, ಪಟ್ಟಭದ್ರ ಹಿತಾಸಕ್ತಿಗಳು ಹೆಚ್ಚಾಗಿ, ಭ್ರಷ್ಟಾಚಾರ ಮತ್ತು ದುರಾಡಳಿತಕ್ಕೆ ದಾರಿ ಮಾಡಿಕೊಡಬಹುದು. ನೆರೆಯ ಕೇರಳದಲ್ಲಿ ಎಡ ಪಕ್ಷಗಳ ನೇತೃತ್ವದ ಎಲ್‌ಡಿಎಫ್ ಹಾಗೂ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಪಕ್ಷಗಳು ಸಮಾನಾಂತರವಾಗಿ ಅಧಿಕಾರ ನಡೆಸುತ್ತಿರುವುದನ್ನು ಇಲ್ಲಿ ಗಮನಿಸಬಹುದು. ಒಟ್ಟಿನಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ತೀರ್ಪೇ ಅಂತಿಮ. ಅದನ್ನು ಗೌರವಿಸಬೇಕಾದ್ದು ಎಲ್ಲಾ ಪಕ್ಷಗಳ ಕರ್ತವ್ಯ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು.

ಕಂಟಕವಾದ ಕಾಂಕ್ರೀಟ್ ಸರಳುಗಳು



ಮಾನ್ಯರೆ,

ಹೆಚ್.ಡಿ.ಕೋಟೆ ತಾಲೂಕಿನ ಹಿರೇಹಳ್ಳಿ ಪಂಚಾಯಿತಿಗೆ ಬರುವ ಅಂಕನಾಥಪುರ ಗ್ರಾಮದಲ್ಲಿನ ಸ್ಥಿತಿ ಇದಾಗಿದೆ. ಈ ಗ್ರಾಮದ ಮೇಲೆ ಹಾದು ಹೋಗಿರುವ ತಾರಕ ಜಲಾಶಯದ ಸೇತುವೆಯ ಮೇಲೆ ಮತ್ತು ಸೇತುವೆಯ ಬದಿಯಲ್ಲಿ ಹಾಕಲಾಗಿರುವ ಕಳಪೆ ಕಾಂಕ್ರೀಟ್ ಕಳಚಿ ಸರಳುಗಳು ಮಾತ್ರ ಮೇಲೆ ಇಣುಕಿ ನೋಡುತ್ತಿದ್ದು, ಇವು ಅಪಾಯಕ್ಕೆ ದಾರಿ ಮಾಡಿಕೊಡುತ್ತಿವೆ. ಈ ನೋವಿನ ಮತ್ತು ದುರಂತಗಳ ಕುರಿತು ಹಲವು ಬಾರಿ ಈ ತಾರಕ ಜಲಾಶಯದ ಮುಖ್ಯ ಇಂಜಿನಿಯರ್ ಗಮನಕ್ಕೆ ತಂದರೂ ಸಹ ಇನ್ನೂ ಕ್ರಮವನ್ನು ಕೈಗೊಂಡಿಲ್ಲದಿರುವುದು ಇವರ ಉದಾಸೀನತೆಯನ್ನು ತೋರುತ್ತಿದೆ. ಈ ಸಮಸ್ಯೆ ಬಿಗಡಾಯಿಸಿ ಮಕ್ಕಳು ಮತ್ತು ವೃದ್ಧರು ಕಾಲುವೆ ಪಾಲಾಗುವ ಮುನ್ನ ಕ್ರಮ ಕೈಗೊಳ್ಳಲಿ ಎಂಬುದು ಗ್ರಾಮದ ಜನತೆಯ ಅಳಲಾಗಿದೆ.

–ಅಂಕನಾಥಪುರ ಗ್ರಾಮಸ್ಥರು, ಹೆಚ್.ಡಿ. ಕೋಟೆ ತಾ.

ಕಾವೇರಿ ನೀರು ಪೋಲು ತಪ್ಪಿಸಿ



ಮಾನ್ಯರೆ,

ಮೈಸೂರು ನಗರದ ವಾರ್ಡ್ ಸಂಖ್ಯೆ 27ರಲ್ಲಿರುವ ಮನೆ ಸಂಖ್ಯೆ 3674, ಬನ್ನಿಮಂಟಪದ ರಸ್ತೆ, ವೀರನಗೆರೆ, ಲಷ್ಕರ್ ಮೊಹಲ್ಲಾ, ಇದರ ಎದುರು ಇರುವ ಬಸವ ಮಂದಿರದ ಮುಂಭಾಗದಲ್ಲಿ ಕಳೆದ 3 ವಾರಗಳಿಂದ ಕಾವೇರಿ ನೀರಿನ ಪೈಪ್ ಒಡೆದು ನಿತ್ಯ ನೂರಾರು ಲೀಟರ್ ನೀರು ಪೋಲಾಗುತ್ತಿದೆ.

ಇದಕ್ಕೆ ಬಗ್ಗೆ ಸಂಬಂಧಪಟ್ಟ ವಾಣಿ ವಿಲಾಸದ ಅಧಿಕಾರಿಗಳಾದ ಶಿವಮಾದು ಎಂಬುವರಿಗೆ ಕಳೆದ ಮಂಗಳವಾರ ದೂರವಾಣಿ ಮೂಲಕ ಸಂಪರ್ಕಿಸಿ ಮಾಹಿತಿ ನೀಡಿದ್ದೆ. ಒಂದು ವಾರ ಕಳೆದರೂ ಇದರ ಬಗ್ಗೆ ಗಮನ ಹರಿಸದೆ ನಿತ್ಯ ನೂರಾರು ಲೀಟರ್ ಪೋಲಾಗುತ್ತಿದೆ. ನಗರ ಪಾಲಿಕೆ ವಲಯ–7 ಕಚೇರಿ ಕೂಗಳತೆ ದೂರದಲ್ಲಿದ್ದರೂ ನಿರ್ಲಕ್ಷಿಸಿರುವುದು ನಿವಾಸಿಗಳಿಗೆ ತುಂಬಾ ಬೇಸರ ತರಿಸಿದೆ. ಆದ ಕಾರಣ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ದುರಸ್ತಿಗೊಳಿಸಿ ನೀರು ಪೋಲಾಗುವುದನ್ನು ತಪ್ಪಿಸಬೇಕೆಂದು ಈ ಮೂಲಕ ಮನವಿ.

–ಮೂರ್ತಿ, ಲಷ್ಕರ್ ಮೊಹಲ್ಲಾ, ಮೈಸೂರು.

ಕನಕದಾಸನಗರಕ್ಕೆ ಗ್ರಂಥಾಲಯ ಬೇಕು

ಮಾನ್ಯರೆ,

ಮೈಸೂರು ಜಿಲ್ಲೆಯಲ್ಲಿ 282 ಹೊಸ ಗ್ರಂಥಾಲಯ ತೆರೆಯಲು ಮೈಸೂರು ಜಿಲ್ಲಾ ಪಂಚಾಯಿತಿ ನಿರ್ಧರಿಸಿ ಸ್ಥಳ ಗುರುತಿಸಿರುವುದು (11.2.25. ಮೈಸೂರು ಮಿತ್ರ ವರದಿ) ಸ್ವಾಗತಾರ್ಹ. ಇದರಿಂದ ಜ್ಞಾನಾರ್ಜನೆಗೆ ಹೆಚ್ಚು ಅನುಕೂಲವಾಗಲಿದೆ. ಹಾಗೆಯೇ ಒಟ್ಟು 285 ಗ್ರಂಥಾಲಯ ತೆರೆಯುವ ಗುರಿ ಇದ್ದು ಇನ್ನೂ ಹೆಚ್ಚುವರಿ ಗ್ರಂಥಾಲಯ ತೆರೆಯಲು ಅವಕಾಶವಿದೆ ಎಂದು ತಿಳಿಸಲಾಗಿದೆ. ಕನಕದಾಸನಗರ 'ಜೆ' ಬ್ಲಾಕ್‌ನಲ್ಲಿ ಸುಮಾರು 15 ವರ್ಷಗಳ ಹಿಂದೆ ಗ್ರಂಥಾಲಯ ಇತ್ತು. ಆದರೆ ಅದನ್ನು ಯಾವ ಕಾರಣದಿಂದ ರದ್ದು ಮಾಡಲಾಯಿತು ಎಂದು ತಿಳಿಯಲಿಲ್ಲ. ಈಗ ಹೊಸ ಗ್ರಂಥಾಲಯ ತೆರೆಯಲು ಅವಕಾಶವಿರುವುದರಿಂದ ಸೂಕ್ತ ಸ್ಥಳ ಗುರುತಿಸಿ ಕನಕದಾಸನಗರದಲ್ಲಿ ಗ್ರಂಥಾಲಯ ತೆರೆಯಬೇಕು ಎಂದು ಸಂಬಂಧಪಟ್ಟವರು ಮತ್ತು ಜಿಲ್ಲಾ ಪಂಚಾಯಿತಿ ಅಧಿಕಾರಿಗಳಲ್ಲಿ ಈ ಮೂಲಕ ಮನವಿ.

–ಮುಳ್ಳೂರು ಪ್ರಕಾಶ್, ಕನಕದಾಸ ನಗರ, ಮೈಸೂರು.

ಮನುಷ್ಯನ ಮಂಕೀಟ್ರಾಪ್ ಮನೋಧರ್ಮ!



ಕೆಲವು ದಿನಗಳ ಹಿಂದೆ ಹೈದರಾಬಾದ್‌ನ ಪೇಪರ್ ಒಂದರ ಒಂದು ಮೂಲೆಯಲ್ಲಿ ಒಂದು ಸಣ್ಣ ಸುದ್ದಿ ಪ್ರಕಟವಾಗಿತ್ತು.

'ಹೈದರಾಬಾದ್‌ನಲ್ಲಿ ಒಬ್ಬ ಭಿಕ್ಷುಕ ಮೃತನಾಗಿದ್ದ. ಪೋಸ್ಟ್ ಮಾರ್ಟಮ್‌ನಲ್ಲಿ ಅವನು ಹೊಟ್ಟೆಗಿಲ್ಲದೆ ಸತ್ತಿದ್ದ ಎಂದು ರಿಪೋರ್ಟ್ ಬಂದಿತ್ತು' ಆಗಿದ್ದರೆ, ಭಿಕ್ಷುಕ ಭಿಕ್ಷೆ ಸಿಗದೆಯೋ, ಬೇಡಲಿಕ್ಕಾಗದೆಯೋ ಉಪವಾಸ ಬಿದ್ದು ಸತ್ತಿರಬಹುದು. ಅದೇನು ಅಂಥಾ ರೋಚಕ ಸುದ್ದಿಯೇ ಪೇಪರ್‌ನಲ್ಲಿ ಬರುವಷ್ಟು!! ಅವನ ಸಾವು ರೋಚಕ ಸುದ್ದಿಯೇ ಅಲ್ಲ. ಹಾಗಾದರೆ, ಮತ್ತೆ ಯಾವುದು?

ಯಾವುದು ಅಂದರೆ ಅವನ ಭಿಕ್ಷೆಯ ಜೋಳಿಗೆಯಲ್ಲಿ ಒಂದು ಲಕ್ಷ ಮೂವತ್ತನಾಲ್ಕು ಸಾವಿರ ರೂಪಾಯಿಗಳ ನೋಟುಗಳಿದ್ದವು. ಅಂದರೆ ಅವನ ಬಳಿ ಲಕ್ಷಕ್ಕೂ ಹೆಚ್ಚು ಹಣ ವಿದ್ದರೂ ಒಂದು ಹೊತ್ತಿನ ಊಟ ಕೊಳ್ಳಲಾರದೇ ಉಪವಾಸದಿಂದ ಪ್ರಾಣ ಬಿಟ್ಟನೇ? ಯಾಕೆ ಅಂತಹ ಮನೋ ದೌರ್ಬಲ್ಯ ಅವನಿಗೆ ಬಂತು? ಈ ಪ್ರಶ್ನೆಗಳು ಎಲ್ಲರ ಮನಸ್ಸಿನಲ್ಲೂ ಬಂದೇ ಬಂದಿರುತ್ತವೆ.

ಆದರೆ ಮನಶ್ಶಾಸ್ತ್ರಜ್ಞರು ಹೇಳುವ ಪ್ರಕಾರ ಅಂತಹ ಮನೋದೌರ್ಬಲ್ಯ ನಮ್ಮೆಲ್ಲರಲ್ಲೂ ಇದೇ ಇರುತ್ತದಂತೆ. ಅದು ಹೇಗೆ ಅನ್ನುತ್ತೀರಾ? ಕೇಳಿ...

ಇದಕ್ಕೆ ಸಂಬಂಧಿಸಿದ ಹಾಗೆಯೇ ಇನ್ನೊಂದು ಸಂಗತಿ ಇದೆ. ಆಫ್ರಿಕಾದೇಶಗಳಲ್ಲಿ ಕೋತಿಗಳನ್ನು ಹಿಡಿಯುತ್ತಾರೆ. ಬಹುಶಃ ತಿನ್ನಲಿಕ್ಕೆ ಇರಬಹುದು. ಕೋತಿಗಳು ಬಹಳ ಬುದ್ಧಿವಂತ ಪ್ರಾಣಿಗಳು. ಅಷ್ಟು ಸುಲಭವಾಗಿ ಸಿಕ್ಕಿಹಾಕಿಕೊಳ್ಳುವುದಿಲ್ಲ. ಎತ್ತರೆತ್ತರದ ಕೊಂಬೆಗಳಲ್ಲಿ ಹಾರುತ್ತಿದ್ದರೆ ಕಾಣುವುದೂ ಇಲ್ಲ. ಅದಕ್ಕೇ ಕೋತಿ ಹಿಡಿಯುವವರು ಏನು ಮಾಡುತ್ತಾರೆ ಅಂದರೆ ಎಲ್ಲಾ ಕಡೆಯೂ ಮುಚ್ಚಿದ ಒಂದು ಮರದ ಪೆಟ್ಟಿಗೆಗೆ ಒಂದು ಕಡೆ ಮಾತ್ರ ಒಂದು ರಂಧ್ರ ಕೊರೆದಿರುತ್ತಾರೆ. ಆ ರಂಧ್ರ ಎಷ್ಟಿರುತ್ತದೆ ಅಂದರೆ ಕೋತಿಯ ಕೈ ಮಾಮೂಲಿಯಾಗಿ ತೂರಿಸಿದರೆ ತೂರುತ್ತದೆ, ಆದರೆ ಮುಷ್ಟಿ ಹಿಡಿದಾಗ ಹೋಗುವುದು ಇಲ್ಲ, ಹಿಂದಕ್ಕೆ ಬರುವುದು ಇಲ್ಲ. ಇಂತಹ ಪೆಟ್ಟಿಗೆಯಲ್ಲಿ ಕೋತಿಗೆ ಇಷ್ಟವಾಗುವ ಬಾಳೆಹಣ್ಣು ಇತ್ಯಾದಿ ತಿಂಡಿ ಹಾಕುತ್ತಾರೆ. ಕೋತಿ ಆಕರ್ಷಿತವಾಗಿ ತಾನಾಗಿಯೇ ಬಂದು ಆ ಪೆಟ್ಟಿಗೆಯಲ್ಲಿ ಕೈ ತೂರಿಸುತ್ತದೆ. ಒಳಗಿನ ಹಣ್ಣನ್ನು ಮುಷ್ಟಿಯಲ್ಲಿ ಹಿಡಿದು ಹೊರಗೆಳೆದುಕೊಳ್ಳುವ ಪ್ರಯತ್ನ ಮಾಡುತ್ತದೆ. ಆದರೆ ಆಗ ಕೈ ಹೊರಗೆ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಹಣ್ಣನ್ನು ಕೈಯಿಂದ ಬಿಟ್ಟರೆ ಸುಲಭವಾಗಿ ಕೈ ಹೊರ ತೆಗೆದು ತಪ್ಪಿಸಿಕೊಂಡು ಹೋಗಬಹುದಲ್ಲ? ಊಹೂಂ, ಮೃತ್ಯುವಿನ ಮುಖದಲ್ಲೂ ಅದು ತಾನು ಆಸೆಪಟ್ಟು ಹಿಡಿದ ಹಣ್ಣನ್ನು ಬಿಡದು. ಬೇಟೆಗಾರ ಹತ್ತಿರ ಬಂದಾಗ ಕೂಡಾ ಅದು ಹಣ್ಣನ್ನು ಬಿಡುವ ಪ್ರಯತ್ನ ಮಾಡುವುದಿಲ್ಲ. ಇದನ್ನೇ 'ಮಂಕೀ ಟ್ರಾಪ್' ಎನ್ನುವುದು.

> "ಯಕ್ಷನ ಆಮಿಷದಂತೆ ಮುಕ್ಕಾಲು ಬಂಗಾರ ತುಂಬಿದ ಕೊಡವನ್ನು ಭರ್ತಿ ಮಾಡಿ ಅಷ್ಟೂ ಬಂಗಾರವನ್ನು ತೆಗೆದುಕೊಂಡು ಹೋಗುವ ದುರಾಸೆಪಡುವುದು ಬೇಡ. ಬದಲು ಯಕ್ಷನ ಮಾತಿಗೆ ನಕ್ಕು ಎಷ್ಟಿದೆಯೋ ಅಷ್ಟನ್ನೇ ಕೊಡುವ ಹಾಗಿದ್ದರೆ ಕೊಡು, ಇಲ್ಲದಿದ್ದರೆ ನನಗೆ ಬೇಡ ಎಂದ ರಾಜನ ಮನೋಧರ್ಮವನ್ನು ಹೊಂದುವ ದಿಶೆಯಲ್ಲಿ ಸಾಗೋಣ. ಈಗಂತೂ ಹಣ ಎರಡರಷ್ಟು ಮಾಡಿಕೊಡುವ, ಒಳ್ಳೆಯ ಕೆಲಸ ಕೊಡಿಸುವ, ಫಾರಿನ್ ವರನನ್ನು ಹೊಂದಿಸುವ, ಇಂತಹ 'ಕೋತಿ ಹಿಡಿಯುವವರು' ಬಹಳವಾಗಿದ್ದಾರೆ. ಎಲ್ಲಿ 'ಕೋತಿಯ ಮನೋಧರ್ಮ'ವಿರುತ್ತದೋ ಅಲ್ಲೆಲ್ಲಾ 'ಕೋತಿ ಹಿಡಿಯುವವರು' 'ಮಂಕೀಟ್ರಾಪ್' ಇಟ್ಟೇ ಇರುತ್ತಾರೆ. ನಾವು 'ಕೋತಿ'ಗಳಾಗುವುದು ಬೇಡ. ಬೇಡ ನಮ್ಮ ಬದುಕಿನಲ್ಲಿ ಈ 'ಮಂಕೀಟ್ರಾಪ್'. ನಾವು ಅದರಿಂದ ದೂರವಿರೋಣ.

ಇದೇ ಆ ಭಿಕ್ಷುಕನ ಮನೋಧರ್ಮವೂ ಆಗಿತ್ತು. ಈ ಮನೋಧರ್ಮಕ್ಕೆ ಮಾನವನೂ ಹೊರತಲ್ಲ. ಆ ಮಂಕೀಟ್ರಾಪ್ ನಮ್ಮ ಪ್ರತಿಯೊಬ್ಬರಲ್ಲೂ ಇದೆ. ಬ್ಯಾಂಕ್‌ನಲ್ಲಿ ಹಣವನ್ನು ಕೂಡಿಸಿ ಕೂಡಿಸಿ ಇಟ್ಟು, ತಮಗೆ ಬಂದ ಕಷ್ಟಕಾಲದಲ್ಲಿ ಕೂಡಾ ತೆಗೆಯದವರು ಬಹಳ ಮಂದಿ ಇದ್ದಾರೆ. ತಮ್ಮ ಹಾಗೂ ತಮ್ಮ ಕುಟುಂಬದ ಸದಸ್ಯರು ಯಾರಾದರೂ ಖಾಯಿಲೆ ಬಿದ್ದರೂ ಆಸ್ಪತ್ರೆಗೆ ಹೋಗದೆ ತಾವೇ ಏನಾದರೂ ಔಷಧಿ ಮಾಡಿಕೊಂಡು ಕಾಲ ಹಾಕುವವರೂ ಇರುತ್ತಾರೆ. ಅವರನ್ನು ಜಿಪುಣರು ಅನ್ನಲಾರೆವು. ಅದು ಮಂಕೀಟ್ರಾಪ್ ಮನೋಧರ್ಮ ಅಷ್ಟೇ.

ಇದು ಬರೀ ಹಣದ ವಿಷಯಕ್ಕೆ ಮಾತ್ರವಲ್ಲ. ಸಂಬಂಧಗಳು, ಕೀರ್ತಿ, ಹೆಸರು, ಇಂತಹ ವಿಷಯಗಳಲ್ಲೂ 'ಮಂಕೀಟ್ರಾಪ್' ಮನೋಧರ್ಮ ಕಂಡುಬರುತ್ತದೆ. ಯಾವುದೋ ಒಂದರ ಆಸೆಗೆ ಬಿದ್ದು ಉಳಿದೆಲ್ಲವನ್ನೂ ನಿರ್ಲಕ್ಷಿಸುತ್ತಾರೆ ಅವರು.

ಕಿರಿಯ ಮಗನ ಮೇಲಿನ ವ್ಯಾಮೋಹದಲ್ಲಿ ಇಡೀ ಕುಟುಂಬವನ್ನೇ ನಿಕೃಷ್ಟ ಮಾಡುವವರಿದ್ದಾರೆ. ಹೆಂಡತಿಯ ಮೇಲಿನ ವ್ಯಾಮೋಹದಲ್ಲಿ ಹೆತ್ತ ತಂದೆ–ತಾಯಿ, ಅಕ್ಕ–ತಂಗಿಯರನ್ನು ದೂರ ಮಾಡಿಕೊಳ್ಳುವವರಿದ್ದಾರೆ.

ಹಣವಂತ ಸ್ನೇಹಿತನ ಬಲೆಗೆ ಬಿದ್ದು ಆತ್ಮೀಯ ಗೆಳೆಯರನ್ನು ದೂರ ಮಾಡುವ ವ್ಯಕ್ತಿಗಳಿದ್ದಾರೆ. ಇವರದೆಲ್ಲಾ ಅದೇ 'ಮಂಕೀಟ್ರಾಪ್' ಮನೋಧರ್ಮವೇ. ತಮಗೆ ಕೆಡುಕಾಗುವುದನ್ನು ಸಹ ಅರಿಯದೆ ಯಾವುದೋ ಆಕರ್ಷಣೆಯ ಬಲೆಯಲ್ಲಿ ಸಿಕ್ಕಿಕೊಂಡು ನರಳುವುದು ಈ ಮನೋಧರ್ಮದ ಲಕ್ಷಣ.

ಕೈಕೇಯಿ ಮೇಲಿನ ಪ್ರೀತಿಯಿಂದ ಹಾಗೂ ವಚನ ಭ್ರಷ್ಟ ನಾಗಬಾರದೆಂಬ ನಿಯಮದ ಸೆಳೆತಕ್ಕೆ ಕಟ್ಟುಬಿದ್ದು ದಶರಥ ತನ್ನ ಅತ್ಯಂತ ಪ್ರೀತಿಯ ಮಗ ರಾಮನನ್ನು ದೀರ್ಘಕಾಲ ಕಾಡಿಗೆ ಕಳಿಸಿ ತಾನೂ ಆ ಚಿಂತೆಯಲ್ಲೇ ಪ್ರಾಣಬಿಟ್ಟನಲ್ಲವೇ.

ಹಾಗೆಯೇ ರಾವಣ, ಸೀತೆಯನ್ನು ಬಿಟ್ಟುಕೊಟ್ಟಿದ್ದರೆ ಪ್ರಾಣ ತೆರಬೇಕಾಗುತ್ತಿರಲಿಲ್ಲ. ದುರ್ಯೋಧನ ಎಷ್ಟೇ ಕೆಟ್ಟವನಿದ್ದರೂ ಆ ಮಿತ್ರನಿಗಾಗಿ ಕರ್ಣ ಯಾರ ಹಿತವಚನಗಳನ್ನೂ ಕೇಳದೆ ಕಾದಾಡಿ ಕೊನೆಗೆ ಪ್ರಾಣ ತೆತ್ತ. ಅದು ಸ್ವತಃ ಕರ್ಣನಿಗೂ ಗೊತ್ತೇ ಇತ್ತು. ಆದರೂ ಮಿತ್ರಭಕ್ತಿಗಾಗಿ ಏನೆಲ್ಲ ಕಳೆದುಕೊಂಡ ಕರ್ಣ.

ನಮಗೆ ದುಃಖ ಸಂಕಟಗಳನ್ನು ತರುವ ಹಳೆಯ ನೋವಿನ ನೆನಪುಗಳು, ಬೇರೆಯವರು ಏನು ತಿಳಿದುಕೊಳ್ಳುತ್ತಾರೋ ಎನ್ನುವ ಅತಿ ಭಾವುಕತೆ, ಹೇಗೆ ಗೆಳೆಯನನ್ನು ಕೊಟ್ಟ ಸಾಲವನ್ನು ಹಿಂತಿರುಗಿಸಲು ಕೇಳುವುದು ಎನ್ನುವ ಇಬ್ಬಂದಿ, ತಪ್ಪು ಮಾಡಿದ್ದರೂ ಶಿಕ್ಷೆ ಕೊಡಲು ಮನಸ್ಸಾಗದ ವ್ಯಾಮೋಹ, ಊಟ ತಿಂಡಿ ನಿದ್ರೆಗಳನ್ನು ಲಕ್ಷಿಸದೇ ಕೆಲಸ, ಕೆಲಸ ಎಂದು ಅನಗತ್ಯ ನಿಷ್ಠೆ ತೋರಿಸಿಕೊಳ್ಳುವುದು, ಸಣ್ಣ ಪುಟ್ಟ ಬಯಕೆ ಆಸೆಗಳನ್ನು ಹತ್ತಿಕ್ಕಿಕೊಂಡೇ ಬದುಕು ಸಾಗಿಸುವುದು, ವೃತ್ತಿಯಲ್ಲಿ ಆದಷ್ಟು ಬೇಗ ಮೇಲೇರಲೇಬೇಕು ಎಂಬ ಸ್ಪರ್ಧಾ ಮನೋಭಾವಕ್ಕೆ ಬಿದ್ದು ಆರೋಗ್ಯವನ್ನೂ, ಕೌಟುಂಬಿಕ ನೆಮ್ಮದಿಯನ್ನು ಹಾಳು ಮಾಡಿ ಕೊಳ್ಳುವುದು, ಸಮಾಜದಲ್ಲಿ ಗಣ್ಯ ನೆನಿಸಿಕೊಳ್ಳಲು ಅಗತ್ಯವಾದ ಮಾರ್ಗಗಳ ಹಿಂದೆ ಓಡುತ್ತಿರುವುದು... ಇವೆಲ್ಲಾ ಒಂದಲ್ಲ ಒಂದು ರೀತಿಯಲ್ಲಿ 'ಮಂಕೀಟ್ರಾಪ್'ಗಳೇ.

ನಿಮಗೆ ಗೊತ್ತಲ್ಲ, ಯಕ್ಷನ ಬಂಗಾರದ ಕೊಡದ ಕಥೆ. ಅದೂ 'ಮಂಕೀಟ್ರಾಪ್'ಗೆ ಉತ್ತಮ ಉದಾಹರಣೆ. ನಾವು ಯಕ್ಷನ ಆಮಿಷದಂತೆ ಮುಕ್ಕಾಲು ಬಂಗಾರ ತುಂಬಿದ ಕೊಡವನ್ನು ಭರ್ತಿ ಮಾಡಿ ಅಷ್ಟೂ ಬಂಗಾರವನ್ನು ತೆಗೆದುಕೊಂಡು ಹೋಗುವ ದುರಾಸೆಪಡುವುದು ಬೇಡ. ಬದಲು ಯಕ್ಷನ ಮಾತಿಗೆ ನಕ್ಕು ಎಷ್ಟಿದೆಯೋ ಅಷ್ಟನ್ನೇ ಕೊಡುವ ಹಾಗಿದ್ದರೆ ಕೊಡು, ಇಲ್ಲದಿದ್ದರೆ ನನಗೆ ಬೇಡ ಎಂದ ರಾಜನ ಮನೋಧರ್ಮವನ್ನು ಹೊಂದುವ ದಿಶೆಯಲ್ಲಿ ಸಾಗೋಣ.

ಈಗಂತೂ ಹಣ ಎರಡಷ್ಟು ಮಾಡಿಕೊಡುವ, ಒಳ್ಳೆಯ ಕೆಲಸ ಕೊಡಿಸುವ, ಫಾರಿನ್ ವರನನ್ನು ಹೊಂದಿಸುವ ಇಂತಹ 'ಕೋತಿ ಹಿಡಿಯುವವರು' ಬಹಳವಾಗಿದ್ದಾರೆ. ಎಲ್ಲಿ 'ಕೋತಿಯ ಮನೋಧರ್ಮ'ವಿರುತ್ತದೋ ಅಲ್ಲೆಲ್ಲಾ 'ಕೋತಿ ಹಿಡಿಯುವವರು' 'ಮಂಕೀಟ್ರಾಪ್' ಇಟ್ಟೇ ಇರುತ್ತಾರೆ. ನಾವು 'ಕೋತಿ'ಗಳಾಗುವುದು ಬೇಡ. ಬೇಡ ನಮ್ಮ ಬದುಕಿನಲ್ಲಿ ಈ 'ಮಂಕೀಟ್ರಾಪ್'. ನಾವು ಅದರಿಂದ ದೂರವಿರೋಣ.

(ಸೌಜನ್ಯ: ವಾಟ್ಸಾಪ್)

ಮೇಲ್ದರ್ಜೆಗೊಂಡ ಅಶೋಕಪುರಂ ರೈಲ್ವೆ ನಿಲ್ದಾಣದಿಂದ

8 ಪ್ರಮುಖ ರೈಲುಗಳ ಸಂಚಾರ ಶೀಘ್ರ ಪ್ರಾರಂಭ

ಪ್ರತಾಪ್ ಸಿಂಹ ಸಂಸದರಾಗಿದ್ದಾಗ ಅಶೋಕಪುರಂ ರೈಲು ನಿಲ್ದಾಣ ಅಭಿವೃದ್ಧಿಗೊಂಡಿತ್ತು



ಅಭಿವೃದ್ಧಿಗೊಂಡು ಸೇವೆಗೆ ಸಜ್ಜಾಗಿರುವ ಅಶೋಕಪುರಂ ರೈಲ್ವೆ ನಿಲ್ದಾಣ.

ಅಶೋಕಪುರಂ ರೈಲ್ವೆ ನಿಲ್ದಾಣದಿಂದ ಸಂಚರಿಸುವ ರೈಲುಗಳು...

16021/16022	ಎಂಜಿಆರ್ ಚೆನ್ನೈ ಸೆಂಟ್ರಲ್–ಮೈಸೂರು ಕಾವೇರಿ ಎಕ್ಸ್‌ಪ್ರೆಸ್
20623/20624	ಮೈಸೂರು–ಕೆಎಸ್‌ಆರ್ ಬೆಂಗಳೂರು ಸಿಟಿ ಮಾಲ್ಗುಡಿ ಎಕ್ಸ್‌ಪ್ರೆಸ್
12785/12786	ಕಾಚೆಗುಡಾ–ಮೈಸೂರು ಎಕ್ಸ್‌ಪ್ರೆಸ್
12609/12610	ಎಂಜಿಆರ್ ಚೆನ್ನೈ ಸೆಂಟ್ರಲ್–ಮೈಸೂರು ಎಕ್ಸ್‌ಪ್ರೆಸ್
06525/06526	ಕೆಎಸ್‌ಆರ್ ಬೆಂಗಳೂರು–ಮೈಸೂರು ಮೆಮು
06559/06560	ಕೆಎಸ್‌ಆರ್ ಬೆಂಗಳೂರು–ಮೈಸೂರು ಮೆಮು
06255/06256	ಕೆಎಸ್‌ಆರ್ ಬೆಂಗಳೂರು–ಮೈಸೂರು ಮೆಮು
06257/06258	ಕೆಎಸ್‌ಆರ್ ಬೆಂಗಳೂರು–ಮೈಸೂರು ಮೆಮು

ಮೈಸೂರು,ಫೆ.12(ಪಿಎಂ)– ಮೇಲ್ದರ್ಜೆಗೊಂಡ ಅಶೋಕಪುರಂ ರೈಲ್ವೆ ನಿಲ್ದಾಣದಿಂದ 8 ಪ್ರಮುಖ ರೈಲುಗಳ ಸಂಚಾರ ಶೀಘ್ರದಲ್ಲಿ ಪ್ರಾರಂಭಗೊಳ್ಳಲಿದೆ.

ಮೈಸೂರು ರೈಲ್ವೆ ನಿಲ್ದಾಣದಿಂದ ಕಾರ್ಯಾಚರಿಸುತ್ತಿದ್ದ ಈ 8 ಪ್ರಮುಖ ರೈಲುಗಳು ಕೆಲವೇ ದಿನಗಳಲ್ಲಿ ಅಶೋಕಪುರಂ ರೈಲ್ವೆ ನಿಲ್ದಾಣದವರೆಗೂ ವಿಸ್ತರಣೆಗೊಳ್ಳಲಿವೆ. ಈ ಸಂಬಂಧ ನೈರುತ್ಯ ರೈಲ್ವೆ ವಿಭಾಗದ ಪ್ರಸ್ತಾವನೆಗೆ ರೈಲ್ವೆ ಸಚಿವಾಲಯ ಹಾಗೂ ರೈಲ್ವೆ ಬೋರ್ಡ್ ಅನುಮೋದನೆ ನೀಡಿವೆ.

ಅಶೋಕಪುರಂ ರೈಲ್ವೆ ನಿಲ್ದಾಣವನ್ನು ಇತ್ತೀಚೆಗಷ್ಟೇ 37.5 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿಪಡಿಸಿ ಮೇಲ್ದರ್ಜೆಗೇರಿಸಲಾಗಿದೆ. ಕೇವಲ ಮೂರು ಪ್ಲಾಟ್‌ಫಾರಂ ಹೊಂದಿದ್ದ ಈ ನಿಲ್ದಾಣದಲ್ಲಿ ಐದು ಪ್ಲಾಟ್‌ಫಾರಂಗಳನ್ನು ನಿರ್ಮಿಸಲಾಗಿದೆ. ಸ್ಟೇಬ್ಲಿಂಗ್ ಲೈನ್ ಸಹ ನಿರ್ಮಾಣ ಮಾಡಲಾಗಿದೆ. ಆ ಮೂಲಕ ರೈಲು ನಿಲುಗಡೆ ಮಾಡಲು ಅವಕಾಶ ಕಲ್ಪಿಸಲಾಗಿದೆ.

ಪ್ರತಾಪ್ ಸಿಂಹ ಸಂಸದರಾಗಿದ್ದಾಗ ಅಶೋಕಪುರಂ ರೈಲ್ವೆ ನಿಲ್ದಾಣವನ್ನು ಮೇಲ್ದರ್ಜೆಗೇರಿಸಲಾಯಿತು. ಆ ಬಳಿಕ ನವೀಕೃತ ನಿಲ್ದಾಣದ ಉದ್ಘಾಟನಾ ಸಮಾರಂಭದಲ್ಲಿ ಮುಂದಿನ ದಿನಗಳಲ್ಲಿ ಹೆಚ್ಚಿನ ರೈಲುಗಳ ಸಂಚಾರ ಇಲ್ಲಿಂದ ಆರಂಭವಾಗಲಿದೆ ಎಂಬ ಸುಳಿವನ್ನೂ ಅಂದೇ ಪ್ರತಾಪ್ ಸಿಂಹ ನೀಡಿದ್ದರು. ನವೀಕೃತಗೊಳಿಸಿದ ಅಶೋಕಪುರಂ ರೈಲ್ವೆ ಯಾರ್ಡ್‌ನ ಎರಡನೇ ಪ್ರವೇಶ ದ್ವಾರ ಹಾಗೂ ಹೊಸದಾಗಿ ನಿರ್ಮಿಸಲಾದ ಪಾದಚಾರಿ ಮೇಲ್ಸೇತುವೆ 2024ರ ಮಾ.4ರಂದು ಉದ್ಘಾಟನೆಯಾದವು.

ಪ್ರತಾಪ್ ಸಿಂಹ ಹರ್ಷ: ಅಶೋಕಪುರಂ ರೈಲ್ವೆ ನಿಲ್ದಾಣದಿಂದ 8 ರೈಲುಗಳ ಸಂಚಾರ ವಿಸ್ತರಣೆಗೆ ಅನುಮೋದನೆ ಲಭಿಸಿರುವುದಕ್ಕೆ ಮಾಜಿ ಸಂಸದ ಪ್ರತಾಪ್ ಸಿಂಹ ಸಾಮಾಜಿಕ ಜಾಲತಾಣದಲ್ಲಿ ಹರ್ಷ ವ್ಯಕ್ತಪಡಿಸಿದ್ದಾರೆ. ಮೈಸೂರಿನ ಜೆ.ಪಿ.ನಗರ, ವಿದ್ಯಾರಣ್ಯಪುರ ಮತ್ತು ಅದರ ಸುತ್ತಮುತ್ತಲಿನ ಬಡಾವಣೆಗಳ ಜನತೆ ರೈಲು ಪ್ರಯಾಣಕ್ಕಾಗಿ ಮುಖ್ಯ ರೈಲ್ವೆ ನಿಲ್ದಾಣಕ್ಕೆ ಬರಬೇಕಾದ ಅನಿವಾರ್ಯತೆ ಇತ್ತು. ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಅರ್ಧ ಭಾಗ, ಅದರಲ್ಲೂ ಜೆ.ಪಿ.ನಗರ, ವಿದ್ಯಾರಣ್ಯಪುರಂ, ಅಶೋಕಪುರಂ ಸುತ್ತಮುತ್ತಲಿನ ಜನ ರೈಲಿನಲ್ಲಿ ವಿವಿಧೆಡೆ ಪ್ರಯಾಣಿಸಲು ಮುಖ್ಯ ರೈಲು ನಿಲ್ದಾಣಕ್ಕೆ ಬರಬೇಕಾಗಿತ್ತು. ಇದೀಗ ಈ ಭಾಗದ ಜನತೆಗೆ ಅನುಕೂಲವಾಗಲಿದೆ ಎಂದು ಅವರು ಸಂತಸ ವ್ಯಕ್ತಪಡಿಸಿದ್ದಾರೆ.

ರೈಲ್ವೆ ಟಿಕೆಟ್ ಬೆಲೆಗಿಂತ ಆಟೋ ಖರ್ಚೇ ಹೆಚ್ಚಾಗುತ್ತಿತ್ತು ಇದನ್ನು ಮನಗಂಡು ಅಶೋಕಪುರಂ ರೈಲ್ವೆ ಯಾರ್ಡ್ ಅನ್ನು ಅಭಿವೃದ್ಧಿಪಡಿಸಿ ಪ್ಯಾಸೆಂಜರ್ ರೈಲುಗಳನ್ನು ಅಶೋಕಪುರಂನಿಂದಲೇ ಪ್ರಾರಂಭಿಸಬೇಕೆಂಬ ಮಹದಾಸೆಯಿಂದ ಕೇಂದ್ರ ಸರ್ಕಾರದಿಂದ ಅನುದಾನ ತಂದು 4 ವರ್ಷಗಳ ಸತತ ಪ್ರಯತ್ನದಿಂದ ಅಶೋಕಪುರಂ ರೈಲ್ವೆ ನಿಲ್ದಾಣದ ಅಭಿವೃದ್ಧಿಗೆ ನಾಂದಿ ಹಾಡಿದ್ದೆ. ಇಂದು ಅಶೋಕಪುರಂ ರೈಲ್ವೆ ನಿಲ್ದಾಣ ಅಭಿವೃದ್ಧಿಗೊಂಡಿದ್ದು, 3 ಹೆಚ್ಚುವರಿ ಹಳಿಗಳು, ಫ್ಲಾಟ್‌ಫಾರ್ಮ್‌ಗಳು ಮತ್ತು ಪಾದಚಾರಿಗಳ ಮೇಲ್ಸೇತುವೆ ನಿರ್ಮಿಸಲಾಗಿದೆ.

ಫೆ.15ರಂದು ಹಸಿರು ನಿಶಾನೆ: ನಮ್ಮ ರಾಜ್ಯದವರೇ ಆದ ಕೇಂದ್ರ ರೈಲ್ವೆ ರಾಜ್ಯ ಸಚಿವ ವಿ.ಸೋಮಣ್ಣ ಅವರ ಕಾಳಜಿ ಮತ್ತು ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರ ಮನವಿಯಿಂದ 8 ರೈಲುಗಳು ಫೆ.16ರಿಂದ ಅಶೋಕಪುರಂ ರೈಲ್ವೆ ನಿಲ್ದಾಣದಿಂದ ಸೇವೆಯನ್ನು ಆರಂಭಿಸುತ್ತಿವೆ. ಫೆ.15ರಂದು ಸಂಜೆ 5.30ಕ್ಕೆ ವಿ.ಸೋಮಣ್ಣ ಅವರೇ ರೈಲುಗಳ ಸಂಚಾರಕ್ಕೆ ಹಸಿರು ನಿಶಾನೆ ತೋರಲಿದ್ದಾರೆ. ಸಂಸದನಾಗಿದ್ದಾಗ ನಾನು ಕೈಗೊಂಡ ಅಭಿವೃದ್ಧಿ ಕಾರ್ಯ ವಿ.ಸೋಮಣ್ಣ ಅವರ ಕೃಪೆಯಿಂದ ಪರಿಪೂರ್ಣವಾಗುತ್ತಿದ್ದು, ಈಗಿನ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಸೇರಿದಂತೆ ಎಲ್ಲರಿಗೂ ಹೃತ್ಪೂರ್ವಕ ಧನ್ಯವಾದಗಳು ಎಂದು ಫೇಸ್‌ಬುಕ್‌ನಲ್ಲಿ ಪ್ರತಾಪ್ ಸಿಂಹ ಹೇಳಿಕೊಂಡಿದ್ದಾರೆ.



2024ರ ಮಾ.4ರಂದು ಅಂದಿನ ಸಂಸದ ಪ್ರತಾಪ್ ಸಿಂಹ ನವೀಕೃತ ಅಶೋಕಪುರಂ ರೈಲ್ವೆ ನಿಲ್ದಾಣವನ್ನು ಉದ್ಘಾಟನೆ ಮಾಡಿದ ಸಂದರ್ಭ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ
ಗುರುವಾರ 13 ಫೆಬ್ರವರಿ 2025

ಸ್ವಚ್ಛ ಸರ್ವೇಕ್ಷಣೆಯಲ್ಲಿ ಮೈಸೂರು ದೇಶದಲ್ಲೇ ಪ್ರಥಮ ಸ್ಥಾನಕ್ಕೇರುವ ಗುರಿ

ಅಭಿಯಾನಕ್ಕಾಗಿ ರಾಯಭಾರಿಗಳ ಆಯ್ಕೆ, ಹೃದಯಸ್ಪರ್ಶಿ ಅಭಿನಂದನೆ

- ಫೆಬ್ರವರಿ 15ರಿಂದ ಸರ್ವೆ ಆರಂಭ
- 3ನೇ ಬಾರಿ ಅಗ್ರ ಸ್ಥಾನ ಪಡೆಯುವ ವಿಶ್ವಾಸ
- ಈ ವೇಳೆ ಪೌರಕಾರ್ಮಿಕರ ಶ್ರಮ ಸ್ಮರಣೀಯ



ಮೈಸೂರು ನಗರಪಾಲಿಕೆಯ ಶ್ರೀ ಜಯಚಾಮರಾಜ ಒಡೆಯರ್ ಸಭಾಂಗಣದಲ್ಲಿ ಬುಧವಾರ ಸ್ವಚ್ಛ ಸರ್ವೇಕ್ಷಣೆಗೆ ಆಯ್ಕೆಯಾಗಿರುವ ರಾಯಭಾರಿಗಳನ್ನು ಸನ್ಮಾನಿಸಲಾಯಿತು.

ಮೈಸೂರು, ಫೆ12(ಬಿಎಲ್‌ಯು)– ಸ್ವಚ್ಛ ಸರ್ವೇಕ್ಷಣೆಯಲ್ಲಿ ದೇಶದಲ್ಲೇ ಮೈಸೂರು ಪ್ರಥಮ ಸ್ಥಾನಕ್ಕೇರುವ ವಿಶ್ವಾಸದೊಂದಿಗೆ ಮೈಸೂರು ನಗರಪಾಲಿಕೆ ಜನರಲ್ಲಿ ಪರಿಣಾಮಕಾರಿ ಅರಿವು ಮೂಡಿಸಲು ರಾಯಭಾರಿಗಳ ನೇಮಕ ಮಾಡಿ, ಅವರನ್ನು ಅಭಿನಂದಿಸಲಾಯಿತು.

ಮೈಸೂರು ನಗರಪಾಲಿಕೆಯ ಶ್ರೀ ಜಯಚಾಮರಾಜ ಒಡೆಯರ್ ಸಭಾಂಗಣದಲ್ಲಿ ಇಂದು ನಡೆದ ಕಾರ್ಯಕ್ರಮದಲ್ಲಿ ಕಂದಾಯಾಧಿಕಾರಿ ಸೋಮಶೇಖರ್, ಈ ಬಾರಿಯ ಸ್ವಚ್ಛ ಸರ್ವೇಕ್ಷಣೆಯ ರಾಯಭಾರಿಗಳನ್ನು ಘೋಷಣೆ ಮಾಡಿದರು.

ಚಿತ್ರನಟಿ ಅಮೃತಾ ಅಯ್ಯಂಗಾರ್, ಪರ್ವತಾರೋಹಿ ಡಾ.ಉಷಾ ಹೆಗ್ಡೆ ಸಾಮಾಜಿಕ ಮಾಧ್ಯಮ ಪ್ರಭಾವಿ ಧರ್ಮೇಂದ್ರ ಹಾಗೂ ಖೋ ಖೋ ವಿಶ್ವಕಪ್ ಆಟಗಾರ್ತಿ ಬಿ.ಚೈತ್ರ ಅವರನ್ನು ಈ ಬಾರಿಯ ರಾಯಭಾರಿಗಳೆಂದು ಘೋಷಿಸಿ, ಅವರನ್ನು ಸನ್ಮಾನಿಸಲಾಯಿತು.

ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ಪ್ರತಿ ವರ್ಷ ದೇಶದಲ್ಲಿ ಸ್ವಚ್ಛ ಸರ್ವೇಕ್ಷಣೆ ನಡೆಸುತ್ತದೆ. ಉತ್ತಮ ಪರಿಸರ, ಸ್ವಚ್ಛತೆ ಸೇರಿದಂತೆ ಹಲವು ಮಾನದಂಡಗಳನ್ನು ಆಧರಿಸಿ ಕೇಂದ್ರ ಸರ್ಕಾರ ಸ್ವಚ್ಛ ಸರ್ವೇಕ್ಷಣೆಯಲ್ಲಿ ಉತ್ತಮ ಶ್ರೇಯಾಂಕ ಗಳಿಸುವ ನಗರಗಳನ್ನು ಘೋಷಣೆ ಮಾಡಲಿದೆ.

ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯ ಮೊದಲ ಬಾರಿಗೆ ಆರಂಭಿಸಿದ ಸ್ವಚ್ಛ ಸರ್ವೇಕ್ಷಣೆ ಸರ್ವೆಯಲ್ಲಿ ಸಾಂಸ್ಕೃತಿಕ ನಗರಿ ಮೈಸೂರು ನಗರ 2 ಬಾರಿ (2015 ಮತ್ತು 2016) ಪ್ರಥಮ ಸ್ಥಾನ ಪಡೆದಿತ್ತು. ಆದರೆ ಹ್ಯಾಟ್ರಿಕ್ ಸಾಧಿಸುವ ಯತ್ನ ಕೈಗೂಡಿರಲಿಲ್ಲ. ಮಧ್ಯಪ್ರದೇಶದ ಇಂದೋರ್, ಮೈಸೂರಿಗೆ ತೀವ್ರ ಪೈಪೋಟಿ ನೀಡಿ, ನಿರಂತರವಾಗಿ ಮೊದಲ ಸ್ಥಾನ ಗಳಿಸುತ್ತಾ ಬಂದಿದೆ.

ತರುವಾಯ ಮೈಸೂರು ಸ್ವಚ್ಛ ಸರ್ವೇಕ್ಷಣೆಯಲ್ಲಿ ನಿಗದಿತ ಗುರಿ ಸಾಧಿಸಲು ಸಾಧ್ಯವಾಗಲಿಲ್ಲ. 2017ರಲ್ಲಿ 5ನೇ ಸ್ಥಾನ ಹಾಗೂ 2021ರಲ್ಲಿ 11ನೇ ಸ್ಥಾನ ಪಡೆಯಿತು. 2023ರ ಸ್ವಚ್ಛ ಸರ್ವೇಕ್ಷಣೆಯಲ್ಲಿ 23ನೇ ಸ್ಥಾನ ಗಳಿಸಿತು. ಆದರೆ, ಈ ಬಾರಿ ಮೈಸೂರು, ಇಂದೋರ್‌ಗೆ ಪೈಪೋಟಿ ನೀಡಿ ಮೊದಲ ಸ್ಥಾನ ಪಡೆಯಲು ಹಲವು ಕಾರ್ಯ ಯೋಜನೆ ರೂಪಿಸಿದೆ.

ನಗರದಲ್ಲಿ ಸ್ವಚ್ಛ ವಾತಾವರಣ, ಸಮರ್ಪಕ ಕಸ ಸಂಗ್ರಹ, ಸಂಸ್ಕರಣೆ, ಹಸಿ ಕಸ ಮತ್ತು ಒಣ ಕಸ ಬೇರ್ಪಡಿಸುವುದು, ಅಂತಿಮವಾಗಿ ಕಸದ ಮರು ಬಳಕೆ ಸೇರಿದಂತೆ ಹಲವು ನಿಯಮಗಳನ್ನು ಪಾಲಿಸಲಾಗುತ್ತಿದೆ. ಫೆ.15ರಂದು ದೇಶಾದ್ಯಂತ ಸರ್ವೇಕಾರ್ಯ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯದಲ್ಲಿ ಮೈಸೂರು ಉತ್ತಮ ಶ್ರೇಯಾಂಕ ಗಳಿಸುವುದಕ್ಕೆ ಅನುವಾಗುವಂತೆ ನಗರಪಾಲಿಕೆ ಕಾರ್ಯ ಯೋಜನೆ ರೂಪಿಸಿದೆ. ಪೌರಕಾರ್ಮಿಕರು ಬೆಳಿಗ್ಗೆಯಿಂದ ಮಧ್ಯಾಹ್ನದ ತನಕ ನಿರಂತರವಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಕ್ಯೂ ಆರ್ ಕೋಡ್ ಬಳಸಿ ಆನ್‌ಲೈನ್ ಮೂಲಕ ಮತ ಚಲಾಯಿಸುವ ಪೋಸ್ಟರ್ ಅನ್ನು ಬಿಡುಗಡೆ ಮಾಡಲಾಯಿತು.

ರಾಘವನ್ ಸೇರಿ 7 ಸ್ವಚ್ಛತಾ ಚಾಂಪಿಯನ್‌ಗಳಿಗೆ ಸನ್ಮಾನ

ಮೈಸೂರು ಹಸಿರೀಕರಣಕ್ಕೆ ಹಲವು ವರ್ಷದಿಂದ ಅವಿರತ ಶ್ರಮಿಸುತ್ತಿರುವ ಮೈಸೂರಿನ ರಘುಲಾಲ್ ಅಂಡ್ ಕಂಪನಿ ಮಾಲೀಕರಾದ ಎನ್.ರಾಘವನ್ ಸೇರಿದಂತೆ ಏಳು ಸ್ವಚ್ಛತಾ ಚಾಂಪಿಯನ್‌ಗಳನ್ನು ಇದೇ ವೇಳೆ ಸನ್ಮಾನಿಸಲಾಯಿತು.

ರಾಘವನ್ ಅವರು 2010ರಿಂದ ಗಿಡ ನೆಡುವುದನ್ನು ಆರಂಭಿಸಿದರು. 2010ರಿಂದ ಇಲ್ಲಿಯ ತನಕ 1,07,384 ಗಿಡ ನೆಟ್ಟಿದ್ದು, ಅವುಗಳ ಸಂರಕ್ಷಣೆಗೆ 1,36,400 ಕಬ್ಬಿಣ, ಬಿದಿರಿನ ಕವಚ ಒದಗಿಸಿದ್ದಾರೆ. ಗಿಡ ನೆಡುವುದರ ಜೊತೆಗೆ ಬೇಸಿಗೆಯಲ್ಲಿ ಅವುಗಳ ರಕ್ಷಣೆಗೆ ನೀರು ಹಾಕುವ ವ್ಯವಸ್ಥೆಯನ್ನೂ ರಾಘವನ್ ಮಾಡಿದ್ದಾರೆ.

ಇನ್ನಿತರ ಸ್ವಚ್ಛತಾ ಚಾಂಪಿಯನ್‌ಗಳಾದ ಲೀಲಾ ವೆಂಕಟೇಶ್, ಡಾ.ಪಿ.ಎಸ್. ಮಧುಸೂದನ್, ಡಾ.ಅಜಯ್‌ಕುಮಾರ್ ಜೈನ್, ಡಾ.ಸ್ವಪ್ನ, ಸೈಯದ್ ಅಬ್ದುಲ್ ಅಜೀಜ್ ಹಾಗೂ ಅಮೂಲ್ಯ ಅವರನ್ನು ಇದೇ ವೇಳೆ ಸನ್ಮಾನ ಮಾಡಲಾಯಿತು.

ಕಸ ಎಸೆಯಬೇಡಿ, ಸ್ವಚ್ಛತೆ ಕಾಪಾಡಿ

ಸ್ವಚ್ಛ ಸರ್ವೇಕ್ಷಣೆ ಹಿನ್ನೆಲೆಯಲ್ಲಿ ಜನರು ಸಿಕ್ಕಸಿಕ್ಕ ಕಡೆ ಕಸ ಎಸೆಯದೆ ಸ್ವಚ್ಛತೆ ಕಾಪಾಡಬೇಕು ಎಂದು ಮೈಸೂರು ನಗರಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸೀಫ್ ಮನವಿ ಮಾಡಿದರು. ತುರ್ತು ಕಾರ್ಯದ ನಿಮಿತ್ತ ಬೆಂಗಳೂರಿಗೆ ಹೋಗಿದ್ದ ಅವರು ಕಾರ್ಯಕ್ರಮದಲ್ಲಿ ವಿಡಿಯೋ ಕಾನ್ಫರೆನ್ಸ್ ಮೂಲಕ ಮಾತನಾಡಿದರು.

ಸ್ವಚ್ಛತೆಯಲ್ಲಿ ಮೈಸೂರು, ಎರಡು ಬಾರಿ ದೇಶದಲ್ಲಿ ಮೊದಲ ಸ್ಥಾನ ಪಡೆದಿದೆ. ಆದರೆ ತದ ನಂತರ ಮೊದಲ ಸ್ಥಾನ ಪಡೆಯಲು ಸಾಧ್ಯವಾಗಲಿಲ್ಲ.

ಜನರು ಕಸವನ್ನು ಸಿಕ್ಕ ಕಡೆಯೆಲ್ಲಾ ಬಿಸಾಡಬಾರದು. ಕಸ ಸಂಗ್ರಹಕ್ಕೆ ಮನೆ ಬಳಿ ಬರುವ ಪೌರಕಾರ್ಮಿಕರಿಗೆ ಹಸಿ, ಒಣ ಕಸ ಬೇರ್ಪಡಿಸಿ ನೀಡಬೇಕು. ನಿಮ್ಮ ನಿಮ್ಮ ಸುತ್ತಮುತ್ತ ಉತ್ತಮ ಪರಿಸರ ಕಾಪಾಡಿಕೊಳ್ಳಿ. ಹಾಗಾದಾಗ ಮಾತ್ರ ಪ್ರಥಮ ಸ್ಥಾನದ ಗುರಿ ಮುಟ್ಟಲು ಸಾಧ್ಯ ಎಂದು ಶೇಕ್ ತನ್ವೀರ್ ಆಸೀಫ್ ಸಲಹೆ ನೀಡಿದರು. ಇದೇ ವೇಳೆ ಮಾತನಾಡಿದ ಪಾಲಿಕೆ ಕಂದಾಯಾಧಿಕಾರಿ ಸೋಮಶೇಖರ್, ಈ ಬಾರಿ ಸ್ವಚ್ಛತೆಯಲ್ಲಿ ಮೊದಲ ಸ್ಥಾನ ಪಡೆಯಲು ಗಂಭೀರ ಪ್ರಯತ್ನ ಮಾಡಲಾಗುತ್ತಿದೆ. ಇದಕ್ಕಾಗಿ ಪೌರಕಾರ್ಮಿಕರು ಶ್ರಮ ವಹಿಸಿ ದುಡಿಯುತ್ತಿದ್ದಾರೆ. ಕರ್ತವ್ಯನಿರತ ಪೌರಕಾರ್ಮಿಕರ ಜೊತೆ ಸಮನ್ವಯತೆ ಸಾಧಿಸಲು ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಈ ಮೂಲಕ ಮೊದಲ ಸ್ಥಾನ ಪಡೆಯುವ ನಮ್ಮ ಗುರಿ ಸಾಧಿಸುತ್ತೇವೆ ಎಂದು ಸೋಮಶೇಖರ್ ವಿಶ್ವಾಸ ವ್ಯಕ್ತಪಡಿಸಿದರು.

ಡಿಸಿಎಂ ಡಿ.ಕೆ.ಶಿವಕುಮಾರ್, ಕೈಗಾರಿಕಾ ಸಚಿವ ಎಂ.ಬಿ.ಪಾಟೀಲರಿಂದ

ಫ್ಯೂಚರ್ ಆಫ್ ಇನ್ನೋವೇಶನ್ ಎಕ್ಸ್‌–ಪೋಗೆ ಚಾಲನೆ

ಅತ್ಯಾಧುನಿಕ ತಂತ್ರಜ್ಞಾನ ಒಳಗೊಂಡ 40ಕ್ಕೂ ಅಧಿಕ ಕಂಪನಿಗಳು ಭಾಗಿ



'ಫ್ಯೂಚರ್ ಆಫ್ ಇನ್ನೋವೇಶನ್' ಎಕ್ಸ್‌–ಪೋಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಬುಧವಾರ ಚಾಲನೆ ನೀಡಿದರು. ಬಳಿಕ ಕರ್ನಾಟಕ ಪೆವಿಲಿಯನ್, ಟೊಯೋಟಾ, ಎಂಬೆಸಿ ಗ್ರೂಪ್, ರಾಜ್ಯ ಪ್ರವಾಸೋದ್ಯಮ, ಡ್ರೋನ್ ತಂತ್ರಜ್ಞಾನದ ವೈಶಿಷ್ಟ್ಯಪೂರ್ಣ ಹಂತಗಳನ್ನು ಕುತೂಹಲದಿಂದ ವೀಕ್ಷಿಸಿದರು.

> “ಸೆಮಿಕಂಡಕ್ಟರ್ ಕ್ಷೇತ್ರದ ಚಿಪ್ ವಿನ್ಯಾಸದಲ್ಲಿ ಭಾರತದ ಪಾಲು ಶೇ.25ರಷ್ಟಿದೆ. ಉತ್ಪಾದನೆಯಲ್ಲಿ ಹಿಂದಿದ್ದೇವೆ, ಮುಂದಿನ 5–10 ವರ್ಷಗಳಲ್ಲಿ ಕೃತಕ ಬುದ್ಧಿಮತ್ತೆ ಎಲ್ಲ ಕ್ಷೇತ್ರಗಳನ್ನೂ ಆವರಿಸಲಿದೆ. ಆಗ 15–20 ಮಿಲಿಯನ್ ಡಾಲರ್ ಹೂಡಿಕೆಯಲ್ಲಿ 'ಪರ್ಸನಲ್ ಡಿಸೈನ್' ಪರಿಣತಿ ಮುನ್ನೆಲೆಗೆ ಬರಲಿದೆ. ಜಗತ್ತಿನ ದೊಡ್ಡ ದೊಡ್ಡ ಆರ್ಥಿಕತೆಗಳೆಲ್ಲವೂ ಸೆಮಿಕಂಡಕ್ಟರ್ ಕ್ಷೇತ್ರವನ್ನೇ ನೆಚ್ಚಿಕೊಂಡಿವೆ. ತೈವಾನ್ ಮತ್ತು ಜಪಾನಿನಲ್ಲಿ ಸೆಮಿಕಂಡಕ್ಟರ್ ಚಿಪ್ ಉತ್ಪಾದನೆ ಸಮೃದ್ಧವಾಗಿದೆ. ನಮ್ಮಲ್ಲಿ ಸೆಮಿಕಂಡಕ್ಟರ್ ವಲಯಕ್ಕೆ ಇಂಬು ಕೊಡುವಂತಹ ಕಾರ್ಯ ಪರಿಸರ ಪೂರ್ಣ ಪ್ರಮಾಣದಲ್ಲಿ ಸೃಷ್ಟಿಯಾಗಿಲ್ಲ.
> –ಎಂ.ಬಿ.ಪಾಟೀಲ್, ಸಚಿವ.

ಬೆಂಗಳೂರು, ಫೆ.12(ಕೆಎಂಶಿ)– 'ಫ್ಯೂಚರ್ ಆಫ್ ಇನ್ನೋವೇಶನ್' ಎಕ್ಸ್–ಪೋಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ್ ಇಂದು ಚಾಲನೆ ನೀಡಿದರು.

ಕರ್ನಾಟಕ ಪೆವಿಲಿಯನ್, ಟೊಯೋಟಾ, ಎಂಬೆಸಿ ಗ್ರೂಪ್, ರಾಜ್ಯ ಪ್ರವಾಸೋದ್ಯಮ, ಡ್ರೋನ್ ತಂತ್ರಜ್ಞಾನದ ವೈಶಿಷ್ಟ್ಯಪೂರ್ಣ ಹಂತಗಳನ್ನು ವೀಕ್ಷಿಸಿದರಲ್ಲದೆ, ಕೃಷಿ ಕ್ಷೇತ್ರದಲ್ಲಿ ಮಹತ್ತರ ಬದಲಾವಣೆಯ ಆಶಾಕಿರಣವಾಗಿರುವ ಅಗ್ರಿ–ಟೆಕ್ ಮತ್ತು ವೈದ್ಯಕೀಯ ಕ್ಷೇತ್ರದ ರೋಗಪತ್ತೆ ಮತ್ತು ಚಿಕಿತ್ಸೆಗಳಲ್ಲಿನ ಆರೋಗ್ಯಸೇವೆ ತಂತ್ರಜ್ಞಾನಗಳ ಬಗ್ಗೆಯೂ ಮಾಹಿತಿ ಪಡೆದರು.

ನಂತರ ಮಾತನಾಡಿದ ಸಚಿವ ಎಂ.ಬಿ. ಪಾಟೀಲ್, ಜಾಗತಿಕ ಮಟ್ಟದ ಕಂಪನಿಗಳು ಮತ್ತು ಪ್ರವರ್ಧಮಾನಕ್ಕೆ ಬರುತ್ತಿರುವ ನವೋದ್ಯಮಗಳೂ ಸೇರಿದಂತೆ 40ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಿದ್ದು, ಡ್ರೋನ್, ಬಾಹ್ಯಾಕಾಶ, ಕೃಷಿ, ಆರೋಗ್ಯ, ಉತ್ಪಾದನಾ ವಲಯ, ವೈಮಾಂತರಿಕ್ಷ, ರಕ್ಷಣೆ ಮುಂತಾದ ಕ್ಷೇತ್ರಗಳಲ್ಲಿನ ಆಧುನಿಕ ತಂತ್ರಜ್ಞಾನ ಧಾರೆಗಳನ್ನು ಕಾಣಬಹುದಾಗಿದೆ ಎಂದರು.

ಮರುಬಳಕೆ ಇಂಧನ, ಸೆಮಿಕಂಡಕ್ಟರ್, ವಿದ್ಯುಚ್ಚಾಲಿತ ವಾಹನಗಳು ಮತ್ತು ಸುಸ್ಥಿರ ಉತ್ಪಾದನೆಯಲ್ಲಿ ಹೆಸರು ಮಾಡಿರುವ ಕಂಪನಿಗಳು ಪಾಲ್ಗೊಂಡಿವೆ, ರಾಜ್ಯದ ಸಾಧನೆ ಬಿಂಬಿಸುವ ಪ್ರತ್ಯೇಕ 'ಕರ್ನಾಟಕ ಪೆವಿಲಿಯನ್'ನಲ್ಲಿ ಕ್ವಿನ್ ಸಿಟಿ, ಫ್ಲೈಯಿಂಗ್ ವೆಡ್ಜ್, ಬೆಲ್ಲಾ ಟ್ರಿಕ್ಸ್, ಸ್ಕೀಸರ್ವ್, ಫ್ಲಕ್ಸ್ ಆಟೋ ಮುಂತಾದ ಉದ್ಯಮಗಳಿವೆ. ಜಾಗತಿಕ ಮಟ್ಟದ ಜಿ.ಇ. ಹೆಲ್ತ್‌ಕೇರ್, ಹೀರೋ ಫ್ಯೂಚರ್ ಎನರ್ಜೀಸ್, ರಿವರ್ ಮೊಬಿಲಿಟಿ, ಸರಳಾ ಏವಿಯೇಶನ್, ಗೆಲಾಕ್ಸಿ ಸ್ಪೇಸ್, ಲ್ಯಾಮ್ ರೀಸರ್ಚ್ ಪ್ರಮುಖ ಕಂಪನಿಗಳಾಗಿವೆ ಎಂದು ಹೇಳಿದರು.

ಸಮಾವೇಶದಲ್ಲಿ ಹಲವು ಗೋಷ್ಠಿಗಳನ್ನು ಆಯೋಜಿಸಲಾಗಿದ್ದು, 'ಸೆಮಿಕಂಡಕ್ಟರ್ ಕ್ರಾಂತಿಯಲ್ಲಿ ಭಾರತದ ನಾಯಕತ್ವದ ಸರದಿ' ವಿಷಯ ಕುರಿತು ಮಾತನಾಡಿದ ಕ್ಷೇತ್ರದ ದಿಗ್ಗಜ ಉದ್ಯಮಪತಿಗಳು, ಸೆಮಿಕಂಡಕ್ಟರ್ ಕ್ಷೇತ್ರಸಹಿತ ಎಲ್ಲಾ ಕೈಗಾರಿಕೆಗಳಿಗೆ ಬಂಡವಾಳ ಆಕರ್ಷಿಸುವ ಜೊತೆಗೆ ಪ್ರತಿಭೆ ಮತ್ತು ಸಾಮರ್ಥ್ಯ ಎರಡನ್ನೂ ಸೃಷ್ಟಿಸಲು ಸಾಧ್ಯವಾದರೆ ಹೂಡಿಕೆ ತಾನಾಗೇ ಹರಿದು ಬರುತ್ತದೆ ಎಂಬ ಅಭಿಮತ ವ್ಯಕ್ತಪಡಿಸಿದರು.

ಸೆಮಿಕಂಡಕ್ಟರ್ ಕ್ಷೇತ್ರದಲ್ಲಿ ಮುಂದಿನ ಹತ್ತು ವರ್ಷ ಭಾರತದ್ದಾಗಿದೆ, ಕ್ಷೇತ್ರದ ಈಗಿನ 40 ಬಿಲಿಯನ್ ಡಾಲರ್ ವಹಿವಾಟು 400 ಬಿಲಿಯನ್ ಡಾಲರ್ ಮೀರಲಿದೆ, ಆದರೆ, ಶಿಕ್ಷಣ ರಂಗದಲ್ಲಿ ಗುಣಮಟ್ಟದ ಬೋಧಕರು, ಸಂಶೋಧನೆ ಮತ್ತು ಪ್ರಾಯೋಗಿಕ ಕಲಿಕೆ ಕಡೆಗೂ ಆದ್ಯ ಗಮನ ನೀಡಬೇಕಿದೆ. ಶಿಕ್ಷಣ ಸಂಸ್ಥೆಗಳಲ್ಲಿ ಸರ್ಕಾರ ರಾಷ್ಟ್ರೀಯ ಸಮಸ್ಯೆಗಳಿಗೆ ದಕ್ಷ ಪರಿಹಾರ ಕಂಡುಹಿಡಿಯುವ ಸಂಶೋಧನಾ ಚಟುವಟಿಕೆಗಳನ್ನು ಪ್ರೋತ್ಸಾಹಿಸುವ ಅಗತ್ಯವಿದೆ.

ಭಾರತವನ್ನು ಕೆಲವೇ ವರ್ಷಗಳಲ್ಲಿ 5 ಟ್ರಿಲಿಯನ್ ಡಾಲರ್ ಆರ್ಥಿಕತೆಯಾಗಿ ಬೆಳೆಸುವ ಗುರಿ ಇದೆ, ಇದರಲ್ಲಿ 3 ಟ್ರಿಲಿಯನ್ ಡಾಲರ್ ಇಎಸ್‌ಡಿಎಂ ಕೊಡುಗೆಯೇ ಇರಲಿದೆ, ಅವಕಾಶಗಳು ಕೇವಲ ಭಾರತಕ್ಕೆ ಮಾತ್ರ ಇರುವುದಿಲ್ಲ, ಎಲ್ಲ ದೇಶಗಳಿಗೂ ಲಭ್ಯವಿರುತ್ತವೆ, ಅವುಗಳ ಲಾಭ ಪಡೆಯಲು ಗುಣಮಟ್ಟದ ಶಿಕ್ಷಣ ವ್ಯವಸ್ಥೆ ಕಡೆಗೆ ಗಮನ ಕೊಡಬೇಕಿದೆ ಎಂದರು.

ಇಪ್ಪತ್ತು ವರ್ಷಗಳ ಹಿಂದೆ ಎನ್‌ಎಫ್‌ಸಿ (ನಿಯರ್ ಫೀಲ್ಡ್ ಕಮ್ಯುನಿಕೇಶನ್) ತಂತ್ರಜ್ಞಾನ ಬಂದಾಗ ಬಳಕೆದಾರರೇ ಇರಲಿಲ್ಲ, ಇದಕ್ಕಾಗಿ ಹತ್ತು ವರ್ಷ ಕಾಯಬೇಕಾಯಿತು, ಈಗ ಬೆಂಗಳೂರಿನಲ್ಲೇ ನ್ಯಾನೊ ಮೀಟರ್ ಲೆಕ್ಕದಲ್ಲಿ ಚಿಪ್ ವಿನ್ಯಾಸಗಳು ಸಿದ್ಧವಾಗುತ್ತಿದ್ದು, ಇದೇ ತಂತ್ರಜ್ಞಾನದ ಶಕ್ತಿಯಾಗಿದೆ. ಕರ್ನಾಟಕದ ವಿಶ್ವವಿದ್ಯಾಲಯಗಳು, ಕಾಲೇಜು ಮತ್ತು ನವೋದ್ಯಮಗಳಲ್ಲಿ ಸೆಮಿಕಂಡಕ್ಟರ್ ಕ್ಷೇತ್ರದ ಬೆಳವಣಿಗೆಗೆ ಅಪಾರ ಅವಕಾಶಗಳಿವೆ. ಭಾರತ, ಅದರಲ್ಲೂ ಕರ್ನಾಟಕ ಸಾಫ್ಟ್‌ವೇರ್ ಆಡುಂಬೊಲಗಳಾಗಿವೆ, ಬೆಂಗಳೂರಿನ ಎಲೆಕ್ಟ್ರಾನಿಕ್ಸ್ ವಲಯದಲ್ಲಿ ತುಂಬಾ ಸಂಶೋಧನೆಗಳು ನಡೆಯುತ್ತಿವೆ, ಇವುಗಳಿಗೆ ತಕ್ಕ ಮಾರುಕಟ್ಟೆ ಸೃಷ್ಟಿಸುವ ಅನ್ವಯಿಕತೆ ಕೊರತೆ ನಮ್ಮಲ್ಲಿ ಕಾಣುತ್ತಿದೆ, ಇದರೊಂದಿಗೆ ಹೆಚ್ಚು ಹೆಚ್ಚು ಸಹಭಾಗಿತ್ವಕ್ಕೆ ಉತ್ತೇಜನ ಸಿಗುವಂತಾಗಬೇಕು, ಇಲ್ಲವಾದರೆ, ಉದ್ಯಮದ ಬೆಳವಣಿಗೆ ಕುಂಟುತ್ತ ಸಾಗುತ್ತದೆ ಎಂಬ ಕಳವಳ ವ್ಯಕ್ತಪಡಿಸಿದರು.

ಉದ್ಯಮ ಪರಿಣತರಾದ ಟೆಕ್ಸಾಸ್ ಇನ್ಸ್ಟ್ರುಮೆಂಟ್ಸ್ ಸಿಇಒ ಸಂತೋಷಕುಮಾರ್, ಎನ್‌ಎಕ್ಸ್‌ಪಿ ಸೆಮಿಕಂಡಕ್ಟರ್ಸ್ ಉಪಾಧ್ಯಕ್ಷ ಹಿತೇಂದ್ರ ಗಾರ್ಗ್ ಮತ್ತು ಗ್ಲೋಬಲ್ ಫ್ಯಾಬ್ ಎಂಜಿನಿಯರಿಂಗ್ ಸೊಲ್ಯೂಷನ್ಸ್ ಕಂಪನಿ ವ್ಯವಸ್ಥಾಪಕ ನಿರ್ದೇಶಕ ಜಿತೇಂದ್ರ ಛಡ್ಡಾ ಮತ್ತಿತರರು ಗೋಷ್ಠಿಯಲ್ಲಿ ಪಾಲ್ಗೊಂಡರು. ವಿವಿಧ ಕ್ಷೇತ್ರಗಳಲ್ಲಿ ನಿರ್ಣಾಯಕ ಪಾತ್ರ ವಹಿಸಲಿರುವ ನಾವೀನ್ಯತೆ, ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಯುವಜನರ ಗಮನ ಸೆಳೆಯುತ್ತಿದೆ.

ಚಾಮುಂಡಿಬೆಟ್ಟದ ನವೀಕೃತ ಹಿರೇಕೆರೆ ಲೋಕಾರ್ಪಣೆ



ಜೆ.ಕೆ.ಟೈರ್ಸ್ ಮತ್ತು ಇಂಡಸ್ಟ್ರೀಯಲ್ಸ್ ಸಂಸ್ಥೆಯ ಸಿಎಸ್‌ಆರ್ ಯೋಜನೆಯಡಿ ಪುನಶ್ಚೇತನಗೊಂಡ ಚಾಮುಂಡಿಬೆಟ್ಟ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಿರೇಕೆರೆಯನ್ನು ಶಾಸಕ ಜಿ.ಟಿ.ದೇವೇಗೌಡರು ಬುಧವಾರ ಲೋಕಾರ್ಪಣೆಗೊಳಿಸಿದರು. ಈ ಸಂದರ್ಭದಲ್ಲಿ ಜಿಪಂ ಸಿಇಓ ಕೆ.ಎಂ.ಗಾಯತ್ರಿ, ತಾಪಂ ಕಾರ್ಯನಿರ್ವಾಹಕ ಸಿ.ಕೃಷ್ಣ, ಗ್ರಾಪಂ ಮಾಜಿ ಅಧ್ಯಕ್ಷ ಕೆ.ಭರತ್, ಉಪಾಧ್ಯಕ್ಷ ವೈ.ಎಸ್.ರವಿಕುಮಾರ್, ಸಿ.ಮಂಜುನಾಥ್ ಮತ್ತಿತರರು ಉಪಸ್ಥಿತರಿದ್ದರು.

ಟಿವಿಎಸ್ ಮೋಟಾರ್ ಕಂಪನಿಯಿಂದ ಮೈಸೂರಿನಲ್ಲಿ ಉತ್ಪಾದನೆ, ಎಂಜಿನಿಯರಿಂಗ್ ಕಾರ್ಯಾಚರಣೆ ವಿಸ್ತರಣೆ; ರಾಜ್ಯದಲ್ಲಿ ಇನ್ನೂ 2 ಸಾವಿರ ಕೋಟಿ ರೂ. ಹೂಡಿಕೆ

ಬೆಂಗಳೂರು, ಫೆ.12– ಮೈಸೂರಿನಲ್ಲಿ ತನ್ನ ಉತ್ಪಾದನೆ ಮತ್ತು ಎಂಜಿನಿಯರಿಂಗ್ ಕಾರ್ಯಾಚರಣೆಗಳನ್ನು ವಿಸ್ತರಿಸುವುದರ ಜೊತೆಗೆ ಕರ್ನಾಟಕದಲ್ಲಿ ಜಾಗತಿಕ ಸಾಮರ್ಥ್ಯ ಕೇಂದ್ರವನ್ನು ಸ್ಥಾಪಿಸುವುದಾಗಿ ಟಿವಿಎಸ್ ಮೋಟಾರ್ ಕಂಪನಿ ಹೇಳಿದೆ.

ಕಂಪನಿಯು ರಾಜ್ಯದಲ್ಲಿ ಪರೀಕ್ಷಾ ಟ್ರ್ಯಾಕ್ ಅನ್ನು ನಿರ್ಮಿಸುತ್ತದೆ ಮತ್ತು ರಾಜ್ಯದಲ್ಲಿ ಹೊಸ ಕೇಂದ್ರಗಳನ್ನು ಆರಂಭಿಸಲು ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಲಿದೆ ಎಂದು ಟಿವಿಎಸ್ ಕಂಪನಿ ಹೇಳಿದೆ.

ಬೆಂಗಳೂರಿನಲ್ಲಿ ನಡೆಯುತ್ತಿರುವ ಜಾಗತಿಕ ಹೂಡಿಕೆದಾರರ ಸಮಾವೇಶ (ಜಿಐಎಂ) ಇನ್ವೆಸ್ಟ್ ಕರ್ನಾಟಕ 2025 ಉದ್ಘಾಟನಾ ಸಮಾರಂಭದಲ್ಲಿ ಟಿವಿಎಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಸುದರ್ಶನ್ ವೇಣು ಕಂಪನಿಯ ಯೋಜನೆಯನ್ನು ವಿವರಿಸಿದರು. ಮುಂದಿನ 5 ವರ್ಷಗಳಲ್ಲಿ ರಾಜ್ಯದಲ್ಲಿ 2,000 ಕೋಟಿ ರೂ. ಹೂಡಿಕೆ ಮಾಡಲು ಟಿವಿಎಸ್ ಮಂಗಳವಾರ ಕರ್ನಾಟಕ ಸರ್ಕಾರದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದೆ ಎಂದು ಕಂಪನಿ ಪ್ರಕಟಣೆ ತಿಳಿಸಿದೆ. ಮುಂದಿನ ತಲೆಮಾರಿನ ಬೈಕ್‌ಗಳ ಜನ್ಮಸ್ಥಳವಾಗಲು ಉನ್ನತ ಪ್ರತಿಭೆಗಳು ಮತ್ತು ಉತ್ತಮ ವಿಚಾರಗಳನ್ನು ಸೆಳೆಯುವ ಮತ್ತು ಸಂಶೋಧನಾ ಸೌಲಭ್ಯವನ್ನು ಹೊಂದಿರುವ ಸಾಮರ್ಥ್ಯ ಕೇಂದ್ರವನ್ನು ನಾವು ಕಲ್ಪಿಸಿಕೊಳ್ಳುತ್ತೇವೆ ಎಂದು ಸುದರ್ಶನ್ ವೇಣು ಹೇಳಿದ್ದಾರೆ.

ಟಿವಿಎಸ್ ಮೋಟಾರ್ ಕಂಪನಿ ಜಾಗತಿಕವಾಗಿ 58 ಮಿಲಿಯನ್ ಬಳಕೆದಾರರನ್ನು ಹೊಂದಿರುವ ವಿಶ್ವದ 4ನೇ ಅತಿದೊಡ್ಡ ದ್ವಿಚಕ್ರ ವಾಹನ ಕಂಪನಿಯಾಗಿ ಹೊರಹೊಮ್ಮಿದೆ ಎಂದು ತಿಳಿಸಿದ್ದಾರೆ. ಕಂಪನಿ ಪ್ರಕಾರ, ಟಿವಿಎಸ್ ಮೋಟಾರ್‌ನ ಉತ್ಪಾದನಾ ಘಟಕ ಮೈಸೂರಿನಲ್ಲಿದ್ದು, ವಾರ್ಷಿಕ 1.5 ಮಿಲಿಯನ್ ವಾಹನಗಳನ್ನು ತಯಾರಿಸುವ ಸಾಮರ್ಥ್ಯ ಹೊಂದಿದೆ ಮತ್ತು 3,500ಕ್ಕೂ ಹೆಚ್ಚು ಸಿಬ್ಬಂದಿಯನ್ನು ನೇಮಕ ಮಾಡಿಕೊಂಡಿದೆ.

60 ವರ್ಷ ತುಂಬಿದ ರೈತರಿಗೆ ಪಿಂಚಣಿ ನೀಡಿ

ಮೈಸೂರು, ಫೆ.12(ಬಿಎಲ್‌ಯು)– 60 ವರ್ಷ ತುಂಬಿದ ರೈತರಿಗೆ ಪಿಂಚಣಿ ನೀಡುವುದು ಸೇರಿದಂತೆ ಹಲವು ಬೇಡಿಕೆ ಈಡೇರಿಸಬೇಕು ಎಂದು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಆಗ್ರಹಿಸಿದ್ದಾರೆ.

ಕಳೆದ ವರ್ಷ 13ರಂದು ರೈತರು ದೆಹಲಿಗೆ ಟ್ರ್ಯಾಕ್ಟರ್ ರ್‍ಯಾಲಿಯಲ್ಲಿ ಹೋಗುವಾಗ ಪೊಲೀಸರು ಹರಿಯಾಣದಲ್ಲಿ ರಸ್ತೆ ಮಧ್ಯೆ ತಡೆದರು. ಈಗಲೂ ಅಲ್ಲಿ ಚಳುವಳಿ ಮುಂದುವರೆಯುತ್ತಿದ್ದು, ಒಂದು ವರ್ಷವಾಗಿರುವ ಹಿನ್ನೆಲೆಯಲ್ಲಿ ರ್‍ಯಾಲಿ ಉದ್ದೇಶಿಸಿ ಸಂಯುಕ್ತ ಕಿಸಾನ್ ಮೋರ್ಚಾ ದಕ್ಷಿಣ ಭಾರತ ರಾಜ್ಯಗಳ ಸಂಚಾಲಕ ಕುರುಬೂರು ಶಾಂತಕುಮಾರ್ ಮಾತನಾಡಿದರು.



ಕುರುಬೂರು ಶಾಂತಕುಮಾರ್

ಹವಾಮಾನ ವೈಪರೀತ್ಯ ರೈತನನ್ನು ಸಂಕಷ್ಟಕ್ಕೆ ತಳ್ಳುತ್ತಿದೆ. ಆದರೆ ರೈತರಿಂದ ಆಯ್ಕೆಯಾದ ಕೇಂದ್ರ ಸರ್ಕಾರ ರೈತರ ಸಮಸ್ಯೆಗಳ ಬಗ್ಗೆ ನಿರ್ಲಕ್ಷ್ಯ ತೋರುತ್ತಿದೆ. ಕೇವಲ ಶೇಕಡ 2ರಷ್ಟಿರುವ ಸರ್ಕಾರಿ ನೌಕರರ ವೇತನವನ್ನು ಹೆಚ್ಚಳ ಮಾಡುತ್ತದೆ. ಆದರೆ ಶೇಕಡ 70 ರಷ್ಟಿರುವ ರೈತರ ಬೇಡಿಕೆ ಈಡೇರಿಕೆಗೆ ಸರ್ಕಾರ ನಿರ್ಲಕ್ಷ್ಯ ತೋರುತ್ತದೆ ಎಂದು ಆರೋಪಿಸಿದರು. ರೈತರಿಂದ ಆಯ್ಕೆಯಾಗಿರುವ ಜನಪ್ರತಿನಿಧಿಗಳು ಅನ್ನದಾತರ ಪರವಾಗಿ ಹೋರಾಟ ಮಾಡುತ್ತಿಲ್ಲ. ನಿದ್ರೆ ಮಾಡುವಂತೆ ನಾಟಕವಾಡುತ್ತಿದ್ದಾರೆ. ಬ್ಯಾಂಕ್‌ಗಳು ಆರ್ಥಿಕ ಸಂಕಷ್ಟದಲ್ಲಿರುವ ರೈತರ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುತ್ತಿದ್ದು, ಸಾಲ ಮರು ಪಾವತಿಗೆ ಸಮಯಾವಕಾಶ ಕೂಡ ನೀಡುತ್ತಿಲ್ಲ ಎಂದು ಕುರುಬೂರು ಶಾಂತಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

ಶಾರ್ಟ್‌ಸರ್ಕ್ಯೂಟ್‌ನಿಂದ ಕ್ಯಾಂಟರ್ ಬೆಂಕಿಗಾಹುತಿ

ಹೂಟಗಳ್ಳಿ ಸಿಗ್ನಲ್ ಬಳಿ ನಡೆದ ಘಟನೆ



ಬೆಂಕಿ ಹೊತ್ತಿ ಉರಿಯುತ್ತಿರುವ ಕ್ಯಾಂಟರ್ ಅನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಫೆ.12(ಪಿಎಂ)– ಶಾರ್ಟ್ ಸರ್ಕ್ಯೂಟ್‌ನಿಂದ ತರಕಾರಿ ಸಾಗಿಸುತ್ತಿದ್ದ ಕ್ಯಾಂಟರ್‌ವೊಂದು ಬೆಂಕಿಗಾಹುತಿಯಾದ ಘಟನೆ ಬುಧವಾರ ಸಂಜೆ ಮೈಸೂರಿನ ಹುಣಸೂರು ರಸ್ತೆಯ ಹೂಟಗಳ್ಳಿ ಸಿಗ್ನಲ್ ಬಳಿ ಸಂಭವಿಸಿದೆ.

ಮೈಸೂರಿನಿಂದ ಉಡುಪಿ ಕಡೆಗೆ ತರಕಾರಿ ತುಂಬಿಕೊಂಡು ಹೋಗುತ್ತಿದ್ದ ಈ ಕ್ಯಾಂಟರ್‌ನಲ್ಲಿ (ಕೆಎ–14, ಎಎ–3101) ಇದ್ದಕ್ಕಿದ್ದಂತೆ ಬೆಂಕಿ ಕಾಣಿಸಿಕೊಂಡಿದೆ. ತಕ್ಷಣ ಇದನ್ನು ಗಮನಿಸಿದ ಚಾಲಕ ಹಾಗೂ ಸಹಾಯಕ ಕ್ಯಾಂಟರ್‌ನಿಂದ ಕೆಳಗಿಳಿದು ಪಾರಾಗಿದ್ದಾರೆ. ಅದೃಷ್ಟವಶಾತ್ ಯಾವುದೇ ಪ್ರಾಣಾಪಾಯವಾಗಿಲ್ಲ. ವೇಗವಾಗಿ ಬೆಂಕಿ ವ್ಯಾಪಿಸಿದ ಕಾರಣ ವಾಹನ ಬಹುತೇಕ ಬೆಂಕಿಗಾಹುತಿಯಾಗಿದೆ. ವಿಷಯ ತಿಳಿದು ಕೂಡಲೇ ಸ್ಥಳಕ್ಕಾಗಮಿಸಿದ ಸರಸ್ವತಿಪುರಂ ಅಗ್ನಿಶಾಮಕ ಠಾಣೆಯ ಅಧಿಕಾರಿ ಮತ್ತು ಸಿಬ್ಬಂದಿ ಗಂಟೆಗೂ ಹೆಚ್ಚು ಕಾಲ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು. ಕಾರ್ಯಾಚರಣೆಯಲ್ಲಿ ಸರಸ್ವತಿಪುರಂ ಅಗ್ನಿಶಾಮಕ ಠಾಣಾಧಿಕಾರಿ ನಾಗರಾಜ ಅರಸ್, ಸಹಾಯಕ ಅಗ್ನಿಶಾಮಕ ಠಾಣಾಧಿಕಾರಿ ಡಿ.ಎಂ.ಗಿರೀಶ್, ಸಿಬ್ಬಂದಿಯಾದ ರವಿ, ಕಿರಣ್, ವೆಂಕಟೇಶ್, ದ್ರುವ್‌ರಾಜ್ ಪಾಲ್ಗೊಂಡಿದ್ದರು.

ಇಂಗ್ಲೆಂಡ್ ವಿರುದ್ಧ 3ನೇ ಏಕದಿನ ಪಂದ್ಯದಲ್ಲಿ ಭಾರತಕ್ಕೆ ಭರ್ಜರಿ ಜಯ

3–0 ಅಂತರದಿಂದ ಸರಣಿ ಸ್ವೀಪ್



ಅಹಮದಾಬಾದ್, ಫೆ.12– ಆರಂಭ ಆಟಗಾರ ಶುಭಮನ್ ಗಿಲ್ ಅವರ ಆಕರ್ಷಕ ಶತಕ ಸೇರಿದಂತೆ ಬ್ಯಾಟರ್‌ಗಳ ಉತ್ತಮ ಪ್ರದರ್ಶನದ ನೆರವಿನಿಂದ ಭಾರತ ತಂಡ ಮೂರನೇ ಹಾಗೂ ಅಂತಿಮ ಏಕದಿನ ಪಂದ್ಯದಲ್ಲಿ ಬುಧವಾರ ಇಂಗ್ಲೆಂಡ್ ತಂಡವನ್ನು 142 ರನ್‌ಗಳಿಂದ ಮಣಿಸಿತು.

ಭಾರತ ಎಲ್ಲ ವಿಭಾಗಗಳಲ್ಲಿ ವಿಜೃಂಭಿಸಿತು. ಸರಣಿಯಲ್ಲಿ ಎರಡು ಅರ್ಧ ಶತಕಗಳಗಳನ್ನು ಗಳಿಸಿ ಮಿಂಚಿದ್ದ ಉಪನಾಯಕ ಗಿಲ್ (112) ಅವರು ಏಕದಿನ ಮಾದರಿಯಲ್ಲಿ ಏಳನೇ ಶತಕ ದಾಖಲಿಸಿದರು. ಪ್ರಮುಖ ಬ್ಯಾಟರ್ ವಿರಾಟ್ ಕೊಹ್ಲಿ (52) ಲಗುಬಗನೇ ಅರ್ಧ ಶತಕ ಬಾರಿಸಿದರೆ, ಶ್ರೇಯಸ್ ಅಯ್ಯರ್ (78, 64ಎ) ಮತ್ತೊಮ್ಮೆ ಮಿಂಚಿನ ಆಟವಾಡಿದರು. ಮೊದಲು ಬ್ಯಾಟಿಂಗ್ ಮಾಡಿದ ಭಾರತ 356 ರನ್‌ಗಳ ದೊಡ್ಡ ಮೊತ್ತಕ್ಕೆ ಆಲೌಟ್ ಆಯಿತು.

ಬೌಲರ್‌ಗಳು ನಂತರ ಸಾಂಘಿಕ ಪ್ರದರ್ಶನ ನೀಡಿ ಪ್ರವಾಸಿ ತಂಡವನ್ನು 34.2 ಓವರುಗಳಲ್ಲಿ 214 ರನ್‌ಗಳಿಗೆ ಉರುಳಿಸಿ ಅಧಿಕಾರಯುತವಾಗಿ ಸರಣಿ ಗೆದ್ದರು. ರನ್‌ಗಳ ಆಧಾರದಲ್ಲಿ ಇದು ಇಂಗ್ಲೆಂಡ್ ವಿರುದ್ಧ ಎರಡನೇ ಅತಿ ದೊಡ್ಡ ಜಯ.

ಇಂಗ್ಲೆಂಡ್ ಕಥೆ ಇಲ್ಲೂ ಭಿನ್ನವಾಗಿರಲಿಲ್ಲ. ಬೆನ್ ಡಕೆಟ್ (34) ಮತ್ತು ಫಿಲ್ ಸಾಲ್ಟ್ (24) ಅವರಿಂದ ಪ್ರವಾಸಿ ತಂಡ ಬಿರುಸಿನ ಆರಂಭ ಪಡೆಯಿತು. 6.2 ಓವರುಗಳಲ್ಲಿ 60 ರನ್‌ಗಳು ಹರಿದುಬಂದಿದ್ದವು. ಆದರೆ ನಂತರ ನಿಯಮಿತವಾಗಿ ವಿಕೆಟ್‌ಗಳು ಪತನಗೊಂಡವು. ಪಂದ್ಯ ಮುಂದುವರಿದಂತೆ ಸ್ಟ್ರೋಕ್‌ಗಳನ್ನು ಆಡುವುದೂ ಸುಲಭವಾಗಿರಲಿಲ್ಲ. ಭಾರತದ ಎದುರು ಮೊದಲ ಪಂದ್ಯ ಆಡಿದ ಟಾಮ್ ಬ್ಯಾಂಟನ್ 41 ಎಸೆತಗಳಲ್ಲಿ 38 ರನ್ ಗಳಿಸಿದರು. 10 ಓವರುಗಳಲ್ಲಿ 2 ವಿಕೆಟ್‌ಗೆ 84 ರನ್ ಗಳಿಸಿದ್ದ ಇಂಗ್ಲೆಂಡ್ ತಂಡದ ಹೋರಾಟ ನಂತರ ಕ್ಷೀಣಿಸತೊಡಗಿತು.

ಎಡಗೈ ವೇಗಿ ಅರ್ಷದೀಪ್ ಸಿಂಗ್ (33ಕ್ಕೆ3) ಆರಂಭ ಆಟಗಾರರ ವಿಕೆಟ್ ಪಡೆದರು. ಹರ್ಷಿತ್ ರಾಣಾ, ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್ ತಲಾ ಎರಡು ವಿಕೆಟ್ ಪಡೆದರು.

ಉತ್ತಮ ಲಯದಲ್ಲಿರುವ ಗಿಲ್, ಇದಕ್ಕೆ ಮೊದಲು ಭಾರತ ತಂಡದ ಇನಿಂಗ್ಸ್‌ಗೆ ಬಲ ತುಂಬಿದರು. ಅವರಿಗೆ ಕೊಹ್ಲಿ ಮತ್ತು ಅಯ್ಯರ್ ಬೆಂಬಲ ನೀಡಿದರು. ಕೊಹ್ಲಿ ಮತ್ತು ಅಯ್ಯರ್ ಜೊತೆ ಅವರು ಎರಡು ಶತಕದ ಜೊತೆಯಾಟದಲ್ಲಿ ಭಾಗಿಯಾದರು.

ಕೊಹ್ಲಿ ಬೇರೂರಲು ಕೊಂಚ ಸಮಯ ತೆಗೆದುಕೊಂಡ ನಂತರ ಸರಾಗವಾಗಿ ಆಡತೊಡಗಿದರು. 73ನೇ ಅರ್ಧಶತಕದ ಹಾದಿಯಲ್ಲಿ ಆಕರ್ಷಕ ಡ್ರೈವ್‌ಗಳನ್ನು ಪ್ರದರ್ಶಿಸಿದರು. ಅದಿಲ್ ರಶೀದ್ ಅವರ ಲೆಗ್‌ಬ್ರೇಕ್ ಎಸೆತದಲ್ಲಿ ಕೊಹ್ಲಿ ವಿಕೆಟ್‌ಕೀಪರ್‌ಗೆ ಕ್ಯಾಚ್ ನೀಡಿದರು. ಅವರು ಏಕದಿನ ಪಂದ್ಯಗಳಲ್ಲಿ ಕೊಹ್ಲಿ ಅವರ ವಿಕೆಟ್ ಅನ್ನು ಐದನೇ ಬಾರಿ ಪಡೆದಂತಾಯಿತು.

ಕೊಹ್ಲಿ ನಿರ್ಗಮನದ ನಂತರ ಶ್ರೇಯಸ್ ಅಯ್ಯರ್ ರನ್ ವೇಗ ಕುಗ್ಗದಂತೆ ನೋಡಿ ಕೊಂಡರು. ಈ ಹಿಂದಿನ ಪಂದ್ಯದಲ್ಲಿ ಶತಕ ಬಾರಿಸಿದ್ದ ನಾಯಕ ರೋಹಿತ್ ಶರ್ಮಾ ಇಲ್ಲಿ ಬೇಗನೇ ನಿರ್ಗಮಿಸಿದರು.

ಮೈಸೂರು ವಿವಿಯೊಂದಿಗೆ ಮಂಡ್ಯ ವಿವಿ ವಿಲೀನಕ್ಕೆ ಜಿಲ್ಲೆಯ ಒಕ್ಕೊರಲ ವಿರೋಧವಿದೆ



ಮಂಡ್ಯದಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಮುಖಂಡರುಗಳು

ಮಂಡ್ಯ, ಫೆ.12– ಮಂಡ್ಯ ವಿಶ್ವವಿದ್ಯಾನಿಲಯವನ್ನು ಮೈಸೂರು ವಿಶ್ವವಿದ್ಯಾನಿಲಯದ ಜೊತೆಗೆ ವಿಲೀನ ಮಾಡಲು ರಾಜ್ಯ ಸರ್ಕಾರ ಸಂಪುಟ ಸಭೆಯಲ್ಲಿ ನಿರ್ಣಯ ತೆಗೆದುಕೊಳ್ಳಲು ಚಿಂತನೆ ನಡೆಸುತ್ತಿದ್ದು, ಇದು ಅವೈಜ್ಞಾನಿಕವಾಗಿದ್ದು, ಈ ನಿರ್ಧಾರಕ್ಕೆ ಮಂಡ್ಯ ಜಿಲ್ಲೆಯ ಒಕ್ಕೊರಲ ವಿರೋಧವಿದೆ ಎಂದು ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ ಹೇಳಿದರು.

ಬುಧವಾರ ನಗರದ ಕರ್ನಾಟಕ ಸಂಘದಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಒಂದು ಜಿಲ್ಲೆಗೆ ಒಂದು ವಿಶ್ವವಿದ್ಯಾನಿಲಯ ಎಂಬಂತೆ ಕಳೆದ ಹಲವು ವರ್ಷಗಳ ಹಿಂದೆ ಮೈಸೂರು ವಿವಿಯಿಂದ ಬೇರ್ಪಡಿಸಿ ಮಂಡ್ಯ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಲಾಗಿತ್ತು. ಮಂಡ್ಯ ಜೊತೆಗೆ ಹಾಸನ ಮತ್ತು ಚಾಮರಾಜನಗರದಲ್ಲೂ ಪ್ರತ್ಯೇಕ ವಿವಿ ಸ್ಥಾಪಿಸಲಾಗಿತ್ತು ಎರಡು ಜಿಲ್ಲೆಗಿಂತ ಯಶಸ್ವಿಯಾಗಿ ಅಭಿವೃದ್ಧಿ ಹಾದಿಯಲ್ಲಿರುವ ವಿಶ್ವವಿದ್ಯಾನಿಲಯವನ್ನು ವಿಲೀನಗೊಳಿಸುವುದೇಕೆ ಎಂದು ಪ್ರಶ್ನಿಸಿದರು.

ಮಂಡ್ಯ ವಿವಿ ವ್ಯಾಪ್ತಿಗೆ 47 ಕಾಲೇಜು ಬರಲಿದ್ದು, ನಾಲ್ಕು ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಎಂಸಿಎ, ಎಂಬಿಎ ಸೇರಿದಂತೆ ಹಲವು ಕೋರ್ಸ್‌ಗಳನ್ನು ತೆರೆಯಲಾಗಿದೆ. ಮೈಸೂರಿನ ಹಲವು ಶೈಕ್ಷಣಿಕ ಹಲವು ಕಟ್ಟಡಗಳು ಮಂಡ್ಯ ವಿವಿ ಸುಪರ್ದಿಗೆ ಬರಲಿವೆ. ಹೀಗೆ ವಿಸ್ತಾರವಾಗಿ ಮಂಡ್ಯ ವಿವಿ ಬೆಳವಣಿಗೆ ಕಾಣುತ್ತಿದ್ದು, ಮಂಡ್ಯ ಜಿಲ್ಲೆಯ ವಿದ್ಯಾರ್ಥಿಗಳಿಗೆ ಮನೆ ಬಾಗಿಲಿನಲ್ಲಿ ಪ್ರತ್ಯೇಕವಾಗಿ ಶಿಕ್ಷಣ ಸಿಗುವ ಸಂಸ್ಥೆಯನ್ನು ಮತ್ತೊಂದು ವಿವಿ ಜೊತೆಗೆ ವಿಲೀನಗೊಳಿಸುವುದು ಅವೈಜ್ಞಾನಿಕ ಎಂದು ಕಿಡಿಕಾರಿದರು.

ಈಗಾಗಲೇ ಬೆಂಗಳೂರಿನ ಜಿಕೆವಿಕೆ ಸುಪರ್ದಿಯಲ್ಲಿದ್ದ ಮಂಡ್ಯ ಜಿಲ್ಲೆಯ ಕೃಷಿ ಕಾಲೇಜನ್ನು ಕೃಷಿ ವಿಶ್ವವಿದ್ಯಾನಿಲಯ ಮಾಡುತ್ತಿರುವುದು ಸ್ವಾಗತಾರ್ಹ. ಆದರೆ, ಮಂಡ್ಯ ವಿವಿಯನ್ನು ಉಳಿಸಿಕೊಂಡು ಶೈಕ್ಷಣಿಕವಾಗಿ ಮಂಡ್ಯ ಜಿಲ್ಲೆಯನ್ನು ಮೇಲೆತ್ತಬೇಕೆಂದು ಸರ್ಕಾರವನ್ನು ಆಗ್ರಹಿಸಿದರು.

ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶ್‌ಗೌಡ ಮಾತನಾಡಿ, ಮಂಡ್ಯ ಜಿಲ್ಲೆಗೊಂದು ವಿಶ್ವವಿದ್ಯಾನಿಲಯ ಬೇಕೆಂಬುದು ನಿತ್ಯ ಸಚಿವ ಕೆ.ವಿ.ಶಂಕರಗೌಡರ ಕನಸಾಗಿತ್ತು. ಅದರಂತೆ ನಮ್ಮ ಕಾಲದಲ್ಲಿ ವಿವಿಯೊಂದು ತೆರೆದಿದೆ. ಜೊತೆಗೆ ಕೃಷಿ ವಿವಿ ಸಹ ಬರುತ್ತಿದೆ. ಇಂತಹ ಸಂದರ್ಭದಲ್ಲಿ ಗುರುವಾರ ನಡೆಯುವ ಡಿ.ಕೆ.ಶಿವಕುಮಾರ್ ನೇತೃತ್ವದ ಕ್ಯಾಬಿನೆಟ್ ಸಭೆಯಲ್ಲಿ ಮಂಡ್ಯ ವಿವಿಯನ್ನು ಮೈಸೂರು ವಿವಿ ಜೊತೆಗೆ ವಿಲೀನಗೊಳಿಸುವ ಚಿಂತನೆ ಬಗ್ಗೆ ಚರ್ಚೆ ನಡೆಯಲಿದೆ ಎಂದು ಜಿಲ್ಲೆಯ ಶಾಸಕರುಗಳಿಂದಲೇ ನಮಗೆ ಮಾಹಿತಿ ಬಂದಿದ್ದು, ಇದು ನಿಜಕ್ಕೂ ದುರಂತದ ವಿಚಾರ. ಯಾವುದೇ ಕಾರಣಕ್ಕೂ ಮಂಡ್ಯ ವಿವಿ ವಿಲೀನವಾಗಬಾರದೆಂದು ಆಗ್ರಹಿಸಿದರು.

ಗೋಷ್ಠಿಯಲ್ಲಿ ಮುಖಂಡರಾದ ಸುನಂದಾ ಜಯರಾಂ, ಬೋರಯ್ಯ, ಕನ್ನಡಸೇನೆ ಮಂಜು, ಪ್ರಾಧ್ಯಾಪಕರಾದ ಡಾ.ಶಂಕರೇಗೌಡ, ಅನಿಲ್, ಕಸಾಪ ಮಾಜಿ ಅಧ್ಯಕ್ಷರಾದ ಡಿ.ಪಿ.ಸ್ವಾಮಿ, ಮೀರಾ ಶಿವಲಿಂಗಯ್ಯ ಇನ್ನಿತರರು ಉಪಸ್ಥಿತರಿದ್ದರು.

ಎಲೆಕ್ಟ್ರಿಕ್ ಸ್ಕೂಟರ್‌ಗೆ ಕಾರು ಡಿಕ್ಕಿ: ವ್ಯಕ್ತಿ ಸಾವು



ಭಾರತೀನಗರ, ಫೆ.12– ಇಲ್ಲಿಗೆ ಸಮೀಪದ ಹಾಗಲಹಳ್ಳಿ ಗೇಟ್ ಬಳಿ ಕಾರೊಂದು ಎಲೆಕ್ಟ್ರಿಕ್ ಸ್ಕೂಟರ್‌ಗೆ ಡಿಕ್ಕಿ ಹೊಡೆದ ಪರಿಣಾಮ ವ್ಯಕ್ತಿ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಜರುಗಿದೆ.

ಚನ್ನಪಟ್ಟಣ ತಾಲೂಕಿನ ಸೋಗಾಲಪಾಳ್ಯ ಗ್ರಾಮದ ಟಿ.ಪುಟ್ಟಸ್ವಾಮೀಗೌಡ (63) ಎಂಬುವರೇ ಅಪಘಾತದಲ್ಲಿ ಸಾವನ್ನಪ್ಪಿದ ದುರ್ದೈವಿ.

ತೊರೆಬೊಮ್ಮನಹಳ್ಳಿ ಗ್ರಾಮದ ಮಹದೇವ್ @ ಕೌಶಿಕ್ ಎಂಬುವರು ತಮ್ಮ ಕಾರಿನಲ್ಲಿ ಹಲಗೂರು ಕಡೆಯಿಂದ ತಮ್ಮ ಗ್ರಾಮಕ್ಕೆ ಬರುತ್ತಿದ್ದಾಗ ಸ್ಕೂಟರ್ ಸವಾರನಿಗೆ ಡಿಕ್ಕಿ ಹೊಡೆದಿದೆ. ಡಿಕ್ಕಿಹೊಡೆದ ರಭಸಕ್ಕೆ ಟಿ.ಪುಟ್ಟಸ್ವಾಮೀಗೌಡ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ತಕ್ಷಣ ಅಕ್ಕಪಕ್ಕದವರು ಪೊಲೀಸರಿಗೆ ದೂರು ಮುಟ್ಟಿಸಿದ್ದಾರೆ. ದೂರಿನ ಮೇರೆಗೆ ಕೆ.ಎಂ.ದೊಡ್ಡಿ ಪೊಲೀಸರು ಸ್ಥಳಕ್ಕೆ ಭೇಟಿನೀಡಿ ಪರಿಶೀಲನೆ ನಡೆಸಿ ಶವವನ್ನು ಕೆ.ಎಂ.ದೊಡ್ಡಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ರವಾನಿಸಿ ನಂತರ ಪಂಚನಾಮೆ ನಡೆಸಿ ಬುಧವಾರ ಸಂಜೆ 3.30 ರಲ್ಲಿ ವಾರಸುದಾರರಿಗೆ ಒಪ್ಪಿಸಿದ್ದಾರೆ. ಈ ಸಂಬಂಧ ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮಕೈಗೊಂಡಿದ್ದಾರೆ.

ಬೈಕ್‌ನಿಂದ ಬಿದ್ದು ಓರ್ವ ಸಾವು, ಮತ್ತೋರ್ವನಿಗೆ ಗಂಭೀರ ಗಾಯ



ಭಾರತೀನಗರ, ಫೆ.12– ಇಲ್ಲಿಗೆ ಸಮೀಪದ ಮುಟ್ಟನಹಳ್ಳಿ ಗೇಟ್ ಬಳಿ ಬೈಕ್‌ನಿಂದ ಬಿದ್ದು ಓರ್ವ ಸಾವನ್ನಪ್ಪಿ ಮತ್ತೋರ್ವ ಗಂಭೀರವಾಗಿ ಗಾಯಗೊಂಡಿರುವ ಘಟನೆ ಜರುಗಿದೆ. ಕುರಿಕೆಂಪನದೊಡ್ಡಿ ಗ್ರಾಮದ ಪ್ರೇಮ್‌ಸಾಗರ್ (27) ಎಂಬುವವರೇ ಬೈಕ್‌ನಿಂದ ಬಿದ್ದು ಮೃತಪಟ್ಟಿರುವ ಯುವಕ ಹಾಗೂ ವೈರಮುಡಿ (28) ಎಂಬುವವರೇ ಗಂಭೀರವಾಗಿ ಗಾಯಗೊಂಡವರಾಗಿದ್ದಾರೆ. ಮುಟ್ಟನಹಳ್ಳಿ ಗೇಟ್‌ಬಳಿ ಬೈಕ್‌ನಿಂದ ಬಿದ್ದು ಗಂಭೀರವಾಗಿ ಗಾಯಗೊಂಡವರನ್ನು ತಕ್ಷಣವೇ ಅಕ್ಕಪಕ್ಕದವರು ಕೆ.ಎಂ.ದೊಡ್ಡಿ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಿದ್ದಾರೆ. ಹೆಚ್ಚಿನ ಚಿಕಿತ್ಸೆಗಾಗಿ ಆಸ್ಟರ್ ಜಿ.ಮಾದೇಗೌಡ ಆಸ್ಪತ್ರೆಗೆ ದಾಖಲುಪಡಿಸಿದ್ದಾರೆ. ಚಿಕಿತ್ಸೆ ಫಲಕಾರಿಯಾಗದೆ ಪ್ರೇಮ್‌ಸಾಗರ್ ಮೃತಪಟ್ಟಿದ್ದಾರೆ. ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗ್ರಾಮ ಆಡಳಿತ ಅಧಿಕಾರಿಗಳ ಅನಿರ್ದಿಷ್ಟಾವಧಿ ಮುಷ್ಕರ



ಶ್ರೀರಂಗಪಟ್ಟಣ, ಫೆ.12– ಶ್ರೀರಂಗಪಟ್ಟಣ ಗ್ರಾಮ ಆಡಳಿತ ಅಧಿಕಾರಿಗಳ ಸಮಸ್ಯೆಗಳನ್ನು ಬಗೆಹರಿಸಿ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಗ್ರಾಮ ಆಡಳಿತ ಅಧಿಕಾರಿಗಳ ಸಂಘದ ವತಿಯಿಂದ ಕಪ್ಪುಪಟ್ಟಿ ಧರಿಸಿ, 2ನೇ ಹಂತದ ಅನಿರ್ದಿಷ್ಟಾವಧಿ ಮೌನ ಮುಷ್ಕರ ನಡೆಸಲಾಯಿತು.

ಪಟ್ಟಣದ ತಾಲೂಕು ಕಚೇರಿ ಎದುರು ರಾಜ್ಯ ಸಂಘದ ಕಾರ್ಯಕಾರಿಣಿ ಸಭೆಯ ನಿರ್ಣಯದಂತೆ ತಾಲೂಕು ಅಧ್ಯಕ್ಷ ರಮೇಶ್ ಅವರ ನೇತೃತ್ವದಲ್ಲಿ ಗ್ರಾಮ ಲೆಕ್ಕಾಧಿಕಾರಿಗಳು ಅನಿರ್ದಿಷ್ಟಾವಧಿ ಮುಷ್ಕರ ನಡೆಸಿದರು.

ಕಂದಾಯ ಇಲಾಖೆಯಿಂದ ನಿರಂತರವಾಗಿ ಕೆಲಸಗಳ ಜವಾಬ್ದಾರಿಯನ್ನು ವಹಿಸುತ್ತಿರುವುದರಿಂದ ಗ್ರಾಮ ಆಡಳಿತ ಅಧಿಕಾರಿಗಳ ಹುದ್ದೆಯನ್ನು ತಾಂತ್ರಿಕ ಹುದ್ದೆಗಳಿಗೆ ನೀಡುವ ವೇತನ ಶ್ರೇಣಿಯನ್ನು ನೀಡಬೇಕು. ಜೊತೆಗೆ ಕೇಂದ್ರ ಸ್ಥಾನಗಳಲ್ಲಿ ಗ್ರಾಮ ಆಡಳಿತ ಅಧಿಕಾರಿಗಳಿಗೆ ಸುಸಜ್ಜಿತವಾದ ಕಚೇರಿ, ಟೇಬಲ್, ಕುರ್ಚಿ, ಅಲ್ಮೆರಾ, ಅತ್ಯುತ್ತಮ ಗುಣಮಟ್ಟದ ಮೊಬೈಲ್ ಫೋನ್, ಗೂಗಲ್ ಕ್ರೋಮ್ ಬುಕ್ ಅಥವಾ ಲ್ಯಾಪ್‌ಟಾಪ್, ಪ್ರಿಂಟರ್ ಮತ್ತು ಸ್ಕ್ಯಾನರ್‌ಗಳ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಒತ್ತಾಯಿಸಿದರು.

ಈ ವೇಳೆ ಸಂಘದ ಕಾರ್ಯದರ್ಶಿ ಮಹೇಂದ್ರ, ಜಿಲ್ಲಾ ಪ್ರತಿನಿಧಿ ರಘು ಎ ಗೌಡ, ನಿರ್ದೇಶಕರುಗಳಾದ ಎಂ.ಎನ್ ಶ್ರೀಧರ್, ನಬೀಸಾಬ್ ಅತ್ತಾರ್, ಶಂಕರೇಗೌಡ, ದೇವರಾಜು, ಲಕ್ಕಪ್ಪ, ಸುಹಾಸ್, ದಿವ್ಯಶ್ರೀ, ಸೀಮಾ, ಜೇಮ್ಸ್, ಸೌಮ್ಯ ಉಮೇಶ್ ಸೇರಿದಂತೆ ತಾಲೂಕಿನ ಎಲ್ಲಾ ಗ್ರಾಮ ಆಡಳಿತಾಧಿಕಾರಿಗಳು ಹಾಜರಿದ್ದರು.

ರೈತರ ಭೂಮಿಗೆ ಬಂಗಾರದ ಬೆಲೆ ಬರುತ್ತೆ, ಮಾರಬೇಡಿ



ಕೆ.ಆರ್.ಪೇಟೆ, ಫೆ.12– ರೈತರ ಭೂಮಿಗೆ ಇನ್ನು ಕೆಲವೇ ವರ್ಷಗಳಲ್ಲಿ ಬಂಗಾರದ ಬೆಲೆ ಬರಲಿದೆ. ರೈತರಿಗೆ ಸರ್ಕಾರಿ ನೌಕರರಿಗಿಂತಲೂ ಹೆಚ್ಚಿನ ಗೌರವ ಸಿಗಲಿದೆ. ಹಾಗಾಗಿ ರೈತರು ಯಾರೂ ಸಹ ತಮ್ಮ ಭೂಮಿಯನ್ನು ಕಡಿಮೆ ಬೆಲೆಗೆ ಮಾರಾಟ ಮಾಡಬಾರದು ಎಂದು ಬೆಂಗಳೂರಿನ ಕೆಂಗೇರಿಯ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಶ್ರೀ ಡಾ.ನಿಶ್ಚಲಾನಂದನಾಥ ಸ್ವಾಮೀಜಿ ರೈತರಿಗೆ ಸಲಹೆ ನೀಡಿದರು.

ಪಟ್ಟಣದ ಸುಲೋಚನಮ್ಮ–ರಾಮದಾಸ್ ಸಭಾಂಗಣದಲ್ಲಿ ತಾಲೂಕು ಮಾಜಿ ಸ್ಪೀಕರ್ ದಿ.ಕೆ.ಆರ್.ಪೇಟೆ ಕೃಷ್ಣ ಪ್ರತಿಷ್ಠಾನ ವತಿಯಿಂದ ಆಯೋಜಿಸಿದ್ದ ಪ್ರಸ್ತುತ ಕೃಷಿ ಬಿಕ್ಕಟ್ಟುಗಳು ಹಾಗೂ ಪರಿಹಾರಗಳು ಕುರಿತಾದ ವಿಚಾರ ಸಂಕಿರಣವನ್ನು ಉದ್ಘಾಟಿಸಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಮಾತನಾಡಿದರು.

ಇಂದು ರೈತರು ಭೂಮಿಯಲ್ಲಿ ಶೇ.48 ರಷ್ಟು ಮಾತ್ರ ಕೃಷಿಯಲ್ಲಿ ನಿರತರಾ ಗಿದ್ದು, ಉಳಿದ ಶೇ.52ರಷ್ಟು ಮಂದಿಗೆ ಆಹಾರವನ್ನು ನೀಡುತ್ತಿದ್ದಾರೆ. ಇದರಿಂದ ಆಹಾರದ ಸಮಸ್ಯೆ ಕಾಡುತ್ತಿಲ್ಲ. ಈ ಅನುಪಾತದಲ್ಲಿ ವ್ಯತ್ಯಾಸವಾದಲ್ಲಿ ಕೃಷಿ ಮಾಡುವವರು ಕಡಿಮೆ ಆದರೆ ಆಹಾರಕ್ಕೆ ಹಾಹಾಕಾರ ಉಂಟಾಗಲಿದೆ. ಆದ್ದರಿಂದ ರೈತರು ಕೃಷಿಯನ್ನು ಮರೆಯಬಾರದು. ತಮ್ಮ ಭೂಮಿಯನ್ನು ಎಷ್ಟೇ ಕಷ್ಟವಾದರೂ ಸರಿಯೇ ಮಾರಾಟ ಮಾಡದೇ ಉಳಿಸಿಕೊಳ್ಳಬೇಕು. ಮುಂದಿನ ದಿನಗಳಲ್ಲಿ ರೈತರಿಗೆ ಸರ್ಕಾರಿ ನೌಕರರಷ್ಟೇ ಬೆಲೆ ಬರಲಿದೆ. ರೈತರನ್ನು ಹುಡುಕಿಕೊಂಡು ಟೌನಿನ ನಿವಾಸಿಗಳು ಬರಲಿದ್ದಾರೆ. ನಗರ ಪ್ರದೇಶದಲ್ಲಿ ಕಲುಷಿತಗೊಂಡಿರುವ ವಾತಾವರಣದಿಂದಾಗಿ ಆರೋಗ್ಯ ಇಲ್ಲದಂತಾಗಿದೆ. ಹಾಗಾಗಿ ಆರೋಗ್ಯವನ್ನು ಅರಸಿ ಗ್ರಾಮೀಣ ಪ್ರದೇಶಕ್ಕೆ ಬರಲಿದ್ದಾರೆ. ಇನ್ನು 10–15 ವರ್ಷಗಳಲ್ಲಿ ಇಂತಹ ವಾತಾವರಣ ಸೃಷ್ಟಿಯಾಗಲಿದೆ ಎಂದು ಶ್ರೀಗಳು ಭವಿಷ್ಯ ನುಡಿದರು.

ನಿವೃತ್ತ ಪ್ರಾಂಶುಪಾಲರು ಹಾಗೂ ಸಹಜ ಕೃಷಿಕ ಬಾಳೆಕಾಯಿ ಶಿವನಂಜಯ್ಯ ಪ್ರಸ್ತುತ ಕೃಷಿ ಬಿಕ್ಕಟ್ಟುಗಳು ಹಾಗೂ ಪರಿಹಾರಗಳನ್ನು ಕುರಿತು ಉಪನ್ಯಾಸ ನೀಡಿದರು. ಸಾವಯವ ಕೃಷಿಕರಾದ ಸಿ.ಪಿ.ಕೃಷ್ಣ ನೀರಾವರಿ ಪ್ರದೇಶದಲ್ಲಿ ಸಾವಯವ ಕೃಷಿ ಕುರಿತು ಭಾಷಣ ಮಾಡಿದರು.

ಶ್ರೀರಂಗಪಟ್ಟಣದ ಅಧಿಕಾರಿಗೆ ಪಿಹೆಚ್.ಡಿ ಪದವಿ



ಶ್ರೀರಂಗಪಟ್ಟಣ: ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿಶ್ವವಿದ್ಯಾಲಯದ ಸಂಶೋಧನಾ ವಿದ್ಯಾರ್ಥಿ ಬಿಇಮೇಘ ಪ್ರೊಪ್ರೈಟೀಸ್ ಆಫ್ ಮೆಕಾನಿಕಲ್ ಪ್ರಾಪರ್ಟೀಸ್ ಆಫ್ ಬನಾನಾ–ಜೂಟ್ ಫೈಬರ್ ಹೈಬ್ರಿಡ್ ಪಾಲಿಸ್ಟರ್ ಕಂಪೋಸಿಟ್ ಆಸ್ ಆಲ್ಟರ್ನೇಟಿವ್ ಬಿಲ್ಡಿಂಗ್ ಮೆಟೀರಿಯಲ್ ವಿಷಯದ ಕುರಿತು ಸಂಶೋಧನೆ ನಡೆಸಿ ಮಂಡಿಸಿದ ಮಹಾಪ್ರಬಂಧವನ್ನು ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿ.ವಿ ಪಿಹೆಚ್.ಡಿ ಪದವಿಗೆ ಅಂಗೀಕರಿಸಿದೆ.

ಮೂಡಬಿದ್ರೆ MITE ಸಂಶೋಧನಾ ಕೇಂದ್ರದ ಡಾ.ಜಿ.ಎಲ್.ಈಶ್ವರ ಪ್ರಸಾದ್ ಮತ್ತು ಡಾ.ಕೀರ್ತಿ ಗೌಡ ಬಿ.ಎಸ್ ಅವರ ಸಹ ಮಾರ್ಗದರ್ಶನದಲ್ಲಿ ಈ ಪ್ರಬಂಧ ಮಂಡಿಸಿದ್ದಾರೆ. ಪ್ರಸ್ತುತ ಮೇಘ ಅವರು ಶ್ರೀರಂಗಪಟ್ಟಣದ ಭೂದಾಖಲೆಗಳ ಸಹಾಯಕ ನಿರ್ದೇಶಕ ಕಚೇರಿಯಲ್ಲಿ ADLR ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ವೃದ್ಧನ ಮೇಲೆ ಹಲ್ಲೆ ನಡೆಸಿದ ಮಾನಸಿಕ ಅಸ್ವಸ್ಥ



ಗುರುಸ್ವಾಮಿ

ಭಾರತೀನಗರ, ಫೆ.12– ಇಲ್ಲಿನ ಜಿ.ಮಾದೇಗೌಡ ಬಡಾವಣೆಯಲ್ಲಿ ಮಾನಸಿಕ ಅಸ್ವಸ್ಥ ಬಾಲಕನೊಬ್ಬ ವೃದ್ಧರೊಬ್ಬರ ಮನೆಗೆ ನುಗ್ಗಿ ಕಳ್ಳತನ ಮಾಡಲು ಯತ್ನಿಸಿ ಮನೆಯಲ್ಲಿದ್ದ ವೃದ್ಧನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿರುವ ಘಟನೆ ಜರುಗಿದೆ.

ಮದ್ದೂರು ತಾಲೂಕು ದೊಡ್ಡರಸಿನಕೆರೆ ಗ್ರಾಮದ ಗುರುಸ್ವಾಮಿ(72) ಎಂಬುವವರೇ ಹಲ್ಲೆಗೊಳಗಾದವರಾಗಿದ್ದಾರೆ.

ಜಿ.ಮಾದೇಗೌಡ ಬಡಾವಣೆಯ ಶಿಕ್ಷಕ ಆರಾಧ್ಯ ಅವರ ಮನೆಯಲ್ಲಿ ವಾಸವಿದ್ದ ಕೆ.ಪಿ.ದೊಡ್ಡಿ ಗ್ರಾಮದ ಲೇ॥ ಶ್ರೀನಿವಾಸ್ ಎಂಬುವವರ ಪುತ್ರ ಭರತ್ ಪಕ್ಕದ ಮನೆಯಲ್ಲಿದ್ದ ಗುರುಸ್ವಾಮಿ ಅವರ ಮನೆಗೆ ಎರಡು ದಿನ ಹೋಗಿ ಊಟ ಮಾಡಿ ಬಂದಿದ್ದು, ನಂತರ ಮೂರನೇಯ ದಿನ ಗುರುಸ್ವಾಮಿ ಮನೆಗೆ ತೆರಳಿದ್ದಾನೆ. ಈ ಸಮಯದಲ್ಲಿ ಅವರ ಪತ್ನಿ ಮನೆಯ ಮೇಲೆ ಬಟ್ಟೆ ಒಣಗಿ ಹಾಕಲು ತೆರಳಿದ್ದರು. ಆಗ ಭರತ್, ಗುರುಸ್ವಾಮಿ ಅವರನ್ನು ಹಣ, ಚಿನ್ನಾಭರಣ ನೀಡುವಂತೆ ಹೆದರಿಸಿದ್ದಾನೆ.

ಅವರು ಹಣ, ಚಿನ್ನಾಭರಣದ ವಿಷಯದ ಬಗ್ಗೆ ಮಾತನಾಡದೆ ಮನೆಯಿಂದ ಹೊರಗೆ ಹೋಗುವಂತೆ ಭರತ್‌ಗೆ ತಿಳಿಸಿದ್ದು, ತಕ್ಷಣವೇ ಬಾಲಕ ಭರತ್ ದೊಣ್ಣೆಯಿಂದ ಗುರುಸ್ವಾಮಿ ಅವರ ತಲೆಗೆ ಬಲವಾಗಿ ಹೊಡೆದಿದ್ದಾನೆ. ಇದರಿಂದ ಗುರುಸ್ವಾಮಿ ಅವರು ರಕ್ತಸ್ರಾವಗೊಂಡು ಚೀರಾಡುತ್ತಿದ್ದರು. ಚೀರಾಟ ಕೇಳಿದ ಪತ್ನಿ ಮಹಡಿಯ ಮೇಲಿಂದ ಕೆಳಗೆ ಬಂದು ತನ್ನ ಪತಿ ನೋಡಿ ಗಾಬರಿಗೊಂಡು ಅಕ್ಕಪಕ್ಕದ ಮನೆಯವರನ್ನು ಕೂಗಿ ಕರೆದಿದ್ದಾರೆ. ತಕ್ಷಣ ಅವರನ್ನು ಆಸ್ಟರ್ ಜಿ.ಮಾದೇಗೌಡ ಆಸ್ಪತ್ರೆಗೆ ಚಿಕಿತ್ಸೆಗಾಗಿ ದಾಖಲು ಮಾಡಲಾಗಿದೆ.

ಈ ಸಂಬಂಧ ಕೆಎಂದೊಡ್ಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದ್ದು, ಬಾಲಕನನ್ನು ಬಂಧಿಸಿರುವ ಪೊಲೀಸರು, ನ್ಯಾಯಾಲಯಕ್ಕೆ ಒಪ್ಪಿಸಿದ್ದಾರೆ.

ಒಂದನೇ ಪುಟದಿಂದ

ರಾಜ್ಯಪಾಲರ ಅಂಕಿತ

ಆರ್ಥಿಕವಾಗಿ ದುರ್ಬಲ ಗುಂಪುಗಳು ಮತ್ತು ವ್ಯಕ್ತಿಗಳು ಅಧಿಕ ಬಡ್ಡಿಯ ಅನಗತ್ಯ ಕಷ್ಟಗಳಿಂದ ಪಾರು ಮಾಡಲು ಈ ಸುಗ್ರೀವಾಜ್ಞೆ ನೆರವಾಗಲಿದ್ದು, ಮುಂದಿನ ಆರು ತಿಂಗಳುಗಳವರೆಗೆ ರಾಜ್ಯದಲ್ಲಿ ಈ ಸುಗ್ರೀವಾಜ್ಞೆ ಜಾರಿಯಲ್ಲಿರಲಿದೆ ಎಂದು ರಾಜ್ಯಪಾಲರು ಸ್ಪಷ್ಟಪಡಿಸಿದ್ದಾರೆ.

ಸುಗ್ರೀವಾಜ್ಞೆಯು ಅತ್ಯುತ್ತಮ ಉದ್ದೇಶಗಳನ್ನು ಹೊಂದಿದ್ದರೂ ಕಾನೂನು ಮತ್ತು ಸುಗ್ರೀವಾಜ್ಞೆಯ ಸಾಮಾಜಿಕ ಪ್ರಭಾವವನ್ನು ವಿವರವಾಗಿ ಚರ್ಚಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ ಜಾರಿಗೆ ತರಲು ಬಯಸಿರುವ ಸುಗ್ರೀವಾಜ್ಞೆಗೆ ಕೆಲವು ಅಗತ್ಯ ಬದಲಾವಣೆ ತರಲು ನಾನು ಬಯಸುತ್ತೇನೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಹೇಳಿದ್ದಾರೆ. ಈ ಕುರಿತು ಮಾಹಿತಿ ನೀಡಿರುವ ಮುಖ್ಯಮಂತ್ರಿ ಕಚೇರಿ, ಕರ್ನಾಟಕ ಸರ್ಕಾರವು ಸಚಿವ ಸಂಪುಟ ಸಭೆಯ ಮೂಲಕ ನಿರ್ಧರಿಸಿದ ಕಿರು ಬಂಡವಾಳ ನಿಯಮಗಳಿಗೆ ಸಂಬಂಧಿಸಿದಂತೆ ರಾಜಭವನಕ್ಕೆ ಕಳುಹಿಸಲಾದ ಸುಗ್ರೀವಾಜ್ಞೆಗೆ ಕರ್ನಾಟಕ ರಾಜ್ಯಪಾಲರು ಸಹಿ ಹಾಕಿದ್ದಾರೆ ಎಂದು ಸ್ಪಷ್ಟಪಡಿಸಿದೆ.

ಇದಕ್ಕೂ ಮುನ್ನ ರಾಜ್ಯಪಾಲರು ಸುಗ್ರೀವಾಜ್ಞೆಯನ್ನು ಹಿಂದಕ್ಕೆ ಕಳುಹಿಸಿದ್ದು, ಅದರಲ್ಲಿ ಕೆಲವು ಪ್ರಮುಖ ವಿಷಯಗಳ ಬಗ್ಗೆ ಗಮನಹರಿಸಬೇಕಿದೆ ಎಂದು ಹೇಳಿದ್ದರು. ಕರ್ನಾಟಕ ಸರ್ಕಾರವು ರಾಜಭವನದಿಂದ ಕೇಳಿದ ಅಗತ್ಯ ಪ್ರಶ್ನೆಗಳಿಗೆ ಉತ್ತರಿಸುವ ಮೂಲಕ, ಸುಗ್ರೀವಾಜ್ಞೆಯನ್ನು ಮತ್ತೆ ಕಳುಹಿಸಿ ಕೊಟ್ಟಿತ್ತು. ಅದರಂತೆ ಇಂದು (ಫೆ.12) ಕರ್ನಾಟಕ ರಾಜ್ಯಪಾಲರು ಕರ್ನಾಟಕದಲ್ಲಿ ಮೈಕ್ರೊ ಫೈನಾನ್ಸ್ ಸಂಬಂಧಿತ ಸಮಸ್ಯೆಗಳನ್ನು ನಿಗ್ರಹಿಸಲು ಸುಗ್ರೀವಾಜ್ಞೆಗೆ ಸಹಿ ಹಾಕಿದ್ದಾರೆ ಎಂದು ಮುಖ್ಯಮಂತ್ರಿ ಕಚೇರಿ ಸ್ಪಷ್ಟಪಡಿಸಿದೆ.

ದರೋಡೆ; ನಾಲ್ವರ ಬಂಧನ

ಹಾಗೂ 17 ವರ್ಷದ ಅಪ್ರಾಪ್ತ ಬಂಧಿತರಾಗಿದ್ದಾರೆ. ಫೆ.10ರಂದು ರಾತ್ರಿ 9 ಗಂಟೆಯಲ್ಲಿ ಮಂಡ್ಯ ಜಿಲ್ಲೆ ಮಳವಳ್ಳಿ ತಾಲೂಕು ಟಿ.ಕಾಗೇಪುರ ಗ್ರಾಮದ ನಾಗೇಶ್ ಎಂಬುವರ ಮಗ 26 ವರ್ಷದ ಕೆ.ಎನ್.ಚಂದನ್, ಮೈಸೂರು ರೈಲು ನಿಲ್ದಾಣದಿಂದ ಬೆಂಗಳೂರಿಗೆ ಪ್ಲಾಟ್ ಫಾರಂ ನಂ.1ರಲ್ಲಿ ನಿಂತಿದ್ದ ಮೈಸೂರು–ಎಸ್‌ಎಂವಿಟಿ ರೈಲು ಹತ್ತಿದ್ದಾರೆ. ರೈಲು ರಾತ್ರಿ 10.40 ಗಂಟೆಗೆ ಪ್ರಯಾಣ ಆರಂಭಿಸಿದೆ. ರಾತ್ರಿ ಸುಮಾರು 11.30 ಗಂಟೆಯಲ್ಲಿ ಮದ್ದೂರು ನಿಲ್ದಾಣ ಬಿಟ್ಟು ಚನ್ನಪಟ್ಟಣದತ್ತ ರೈಲು ಚಲಿಸುತ್ತಿದ್ದಾಗ ಸುಮಾರು 20ರಿಂದ 25 ವಯಸ್ಸಿನ ಯುವಕರ ತಂಡವೊಂದು ಬಂದು ಮಲಗಿದ್ದ ಚಂದನ್‌ನ ಮುಖಕ್ಕೆ ಕಾಲಿನಿಂದ ಒದ್ದು ಎಚ್ಚರಿಸಿದೆ. ಕಣ್ಬಿಟ್ಟು ನೋಡಿದಾಗ ಇಬ್ಬರು ತಲ್ವಾರ್, ಒಬ್ಬ ಬಟನ್ ಚಾಕು ತೋರಿಸಿ ಹಣ ಕೊಡು, ಇಲ್ಲವಾದರೆ ಕೊಲೆ ಮಾಡುತ್ತೇವೆ ಎಂದು ಹೆದರಿಸಿದ್ದಾರೆ.

ಹೆದರಿದ ಚಂದನ್, ತನ್ನ ಬಳಿಯಿದ್ದ ಮೋಟೊರೋಲಾ ಕಂಪನಿಯ 26 ಸಾವಿರ ರೂ. ಮೌಲ್ಯದ ಮೊಬೈಲ್ ಅನ್ನು ಆ ಯುವಕರಿಗೆ ಕೊಟ್ಟಿದ್ದಾನೆ. ನಂತರ ಅವರು ಬೋಗಿಯಲ್ಲಿದ್ದ ಇತರ ಪ್ರಯಾಣಿಕರಾದ ಗಗನ್ ನಾಯಕ್, ಶಿವಾನಂದ, ವಿವಿ ಸುರೇಂದ್ರನ್ ಮತ್ತು ರಾಜು ಎಂಬುವವರಿಗೂ ಮಾರಕಾಸ್ತ್ರ ತೋರಿಸಿ ಹಣ, ಮೊಬೈಲ್‌ಗಳನ್ನು ದೋಚಿ ರೈಲು ಚನ್ನಪಟ್ಟಣ ನಿಲ್ದಾಣದಲ್ಲಿ ನಿಂತಾಗ ಇಳಿದು ಪರಾರಿಯಾಗಿದ್ದಾರೆ.

ಈ ಸಂಬಂಧ ಚಂದನ್, ಮೈಸೂರು ರೈಲ್ವೆ ಪೊಲೀಸ್ ಠಾಣೆಗೆ ದೂರು ನೀಡಿದ ಹಿನ್ನೆಲೆಯಲ್ಲಿ ರೈಲ್ವೆ ಪೊಲೀಸ್ ವಿಭಾಗದ ಎಸ್‌ಪಿ ಡಾ.ಎಸ್.ಕೆ. ಸೌಮ್ಯಲತಾ, ಡಿವೈಎಸ್‌ಪಿ ಸತೀಶ್ ಕುಮಾರ್ ಮಾರ್ಗದರ್ಶನದಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದ ಮೈಸೂರು ರೈಲ್ವೆ ಪೊಲೀಸ್ ಸರ್ಕಲ್ ಇನ್‌ಸ್ಪೆಕ್ಟರ್ ವಿ.ಚೇತನ್, ಪತ್ತೆ ಕಾರ್ಯಾಚರಣೆ ನಡೆಸಿ, ಘಟನೆ ನಡೆದ 24 ಗಂಟೆಯಲ್ಲಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಪತ್ತೆ ಕಾರ್ಯದಲ್ಲಿ ಸಬ್ ಇನ್‌ಸ್ಪೆಕ್ಟರ್‌ಗಳಾದ ಬಿ.ಪಿ.ರಮೇಶ್, ಸಿ.ಜಿ.ಮಹೇಶ್, ಸಿಬ್ಬಂದಿಗಳಾದ ಪಿ.ಶ್ರೀನಿವಾಸ್, ಎಂ.ಶ್ರೀನಿವಾಸಮೂರ್ತಿ, ರಂಗೇಗೌಡ, ಜಗದೀಶ್, ಆರ್.ಪ್ರಶಾಂತ್, ಆರ್.ಶ್ವೇತ, ಮೋಹನ್, ರಘು, ಟಿ.ಆರ್.ಮಂಜು, ಯೋಗಾನಂದ, ಬಸವರಾಜು, ಜಿ.ಚೈತ್ರ, ಸುಮಿತ್ರಾ ಅವರು ಪಾಲ್ಗೊಂಡಿದ್ದರು.

ಎಂಟು ಮಂದಿ ಬಂಧನ

ವಿಚಾರಣೆ ನಡೆಸುತ್ತಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆಯಾದರೂ, ಅಧಿಕಾರಿಗಳು ಖಚಿತಪಡಿಸಿಲ್ಲ.

ಸಾಮಾಜಿಕ ಜಾಲತಾಣದಲ್ಲಿ ಅವಹೇಳನಕಾರಿ ಪೋಸ್ಟರ್ ಹರಿಯಬಿಟ್ಟು ವಿವಾದ ಸೃಷ್ಟಿಸಿದ್ದಾರೆಂಬ ಕಾರಣಕ್ಕಾಗಿ ಸೋಮವಾರ ರಾತ್ರಿಯೇ ಸುರೇಶ್ ಪಾಂಡುರಂಗ ಎಂಬುವರನ್ನು ಬಂಧಿಸಿದ್ದ ಪೊಲೀಸರು, ನ್ಯಾಯಾಧೀಶರ ನಿವಾಸದಲ್ಲಿ ಹಾಜರುಪಡಿಸಲಾಗಿ, ಅವರನ್ನು ಮಂಗಳವಾರ ಮುಂಜಾನೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಯಿತು.

ಘಟನೆ ಹಿನ್ನೆಲೆಯಲ್ಲಿ ಪ್ರಕ್ಷುಬ್ಧಗೊಂಡಿದ್ದ ಉದಯಗಿರಿ ಠಾಣೆ ವ್ಯಾಪ್ತಿ ಪ್ರದೇಶದ ಪರಿಸ್ಥಿತಿ ಶಾಂತಿಯುತವಾಗಿದ್ದು, ಮುಂಜಾಗ್ರತಾ ಕ್ರಮವಾಗಿ ಹೆಚ್ಚುವರಿ ಭದ್ರತೆ ಸಿಬ್ಬಂದಿಗಳನ್ನು ನಿಯೋಜಿಸಿ, ಕಟ್ಟೆಚ್ಚರ ವಹಿಸಲಾಗಿದೆ.

ಲಕ್ಷಾಂತರ ಜನರಿಂದ ಪುಣ್ಯಸ್ನಾನ

ಸಂಖ್ಯೆಯಲ್ಲಿ ಸ್ನಾನ ಮಾಡಿದರು. ಬೆ. 11ರಿಂದ 11.30ರ ನಡು ವಿನ ಮೇಘ ಲಗ್ನ ಹಾಗೂ ಮಧ್ಯಾಹ್ನ 1.30 ರಿಂದ 2 ಗಂಟೆ ವರೆಗಿನ ವೃಷಭ ಲಗ್ನ ಮುಹೂರ್ತದಲ್ಲಿ ಭಕ್ತ ಗಣ ನೆರೆ ದಿತ್ತು. ಗುರು–ಪುಷ್ಯಯೋಗ ಮಹೂರ್ತವಾದ ಕಾರಣ ಈ ಸಂದರ್ಭದಲ್ಲಿ ಸ್ನಾನ ಮಾಡಲು ಭಕ್ತರು ಮುಗಿಬಿದ್ದರು.

ದೇವಾಲಯಗಳಲ್ಲಿ ವಿಶೇಷ ಪೂಜೆ: ಮಾಘ ಶುದ್ಧ ವ್ಯಾಸ ಪೂರ್ಣಿಮಾ ಅಂಗವಾಗಿ ಬೆಳಗ್ಗೆ 5.30ರಿಂದಲೇ ತಿರುಮ ಕೂಡಲುವಿನ ನದಿ ದಂಡೆಯಲ್ಲಿರುವ ಅಗಸ್ತ್ಯೇಶ್ವರ ದೇವಸ್ಥಾನ, ಗುಂಜಾ ನರಸಿಂಹ ಸ್ವಾಮಿ, ಭಿಕ್ಷೇಶ್ವರ ಹಾಗೂ ತ್ರಿವೇಣಿ ಸಂಗಮ ವಾಗುವ ನಡುಹೊಳೆ ಬಸಪ್ಪನ ಕಂಬದ ಬಳಿ ವಿಶೇಷ ಪೂಜಾ ವಿಧಿವಿಧಾನಗಳು ಜರುಗಿದವು. ಆಶ್ಲೇಷಾ ನಕ್ಷತ್ರ ಪುಣ್ಯಾಹ, ಸಪ್ತ ನದಿತೀರ್ಥ ವಿರುವ ಕಲಶ ಪೂಜೆ, ಹೋಮನಾದಿಗಳು ಜರುಗಿದವು. ಇದಲ್ಲದೇ ಮುಂಜಾನೆ 5ರಿಂದ 11ರವರೆಗಿನ ಕುಂಭ ಲಗ್ನದಲ್ಲಿ ಪೂರ್ಣಾಹುತಿ ನಡೆಯಿತು. ತ್ರಿವೇಣಿ ಸಂಗಮದಲ್ಲಿ ಕಲಶತೀರ್ಥ ಸಂಯೋ ಜನೆ ಆಚರಣೆ ವಿಜೃಂಭಣೆಯಿಂದ ಜರುಗಿತು.

ಪುಣ್ಯಸ್ನಾನ ಮಾಡಿದ ಧಾರ್ಮಿಕ ಗುರುಗಳು: ಶುದ್ಧ ವ್ಯಾಸ ಪೂರ್ಣಿಮೆ ಅಂಗವಾಗಿ ತ್ರಿವೇಣಿ ಸಂಗಮದಲ್ಲಿ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂದನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಕಾಗಿನೆಲೆ ಮಠದ ಶ್ರೀ ಶಿವಾ ನಂದ ಪುರಿ ಸ್ವಾಮೀಜಿ, ಕೈಲಾಶಾಶ್ರಮದ ಶ್ರೀ ಜಯೇಂದ್ರ ತೀರ್ಥ ಸ್ವಾಮೀಜಿ, ಗಣಪತಿ ಸಚ್ಚಿದಾನಂದ ಆಶ್ರಮದ ಕಿರಿಯ ಸ್ವಾಮೀಜಿ ಶ್ರೀ ದತ್ತವಿಜಯಾನಂದ ತೀರ್ಥ ಸ್ವಾಮೀಜಿ, ಶ್ರೀಕ್ಷೇತ್ರ ಹರಿಹರಪುರ ಆದಿಶಂಕರಾಚಾರ್ಯ ಶ್ರೀ ಶಾರದಾ ಲಕ್ಷ್ಮೀನರಸಿಂಹ ಪೀಠದದ ಸ್ವಯಂಪ್ರಕಾಶ ಸಚ್ಚಿದಾನಂದ ಸರಸ್ವತಿ ಸ್ವಾಮೀಜಿ, ರಾಮಕೃಷ್ಣ ಆಶ್ರಮದ ಮುಕ್ತಿದಾನಂದಜೀ ಸ್ವಾಮೀಜಿ, ಬೆಂಗಳೂರಿನ ಓಂಕಾರಾಶ್ರಮದ ಮಧುಸೂದನಾನಂದ ಪುರಿ ಸ್ವಾಮೀಜಿ, ಮೈಸೂರಿನ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಲಕ್ಷ್ಮೀಜೀ ಅವರು ಕುಂಭಮೇಳದ ಧಾರ್ಮಿಕ ಆಚರಣೆಗಳಲ್ಲಿ ಪಾಲ್ಗೊಂಡರು. ಇವರಲ್ಲಿ ಬಹುತೇಕರು ಪುಣ್ಯಸ್ನಾನ ಮಾಡಿದರು.

ಅಲ್ಲದೆ, ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ, ಮಾಜಿ ಸಂಸದ ಪ್ರತಾಪಸಿಂಹ, ಕಾಂಗ್ರೆಸ್ ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಸೇರಿದಂತೆ ವಿವಿಧ ಪಕ್ಷಗಳ ಮುಖಂಡರು ಪುಣ್ಯಸ್ನಾನ ಮಾಡಿದರು.

ಕುಂಭಮೇಳದ ಅಂಗವಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ವತಿಯಿಂದ ಮೂರು ದಿನ ಸುಗಮ ಸಂಗೀತ, ಜಾನಪದ ಗೀತೆಗಳು, ನೃತ್ಯರೂಪಕ ಮತ್ತು ಸ್ಥಳೀಯ ಕಲಾ ತಂಡಗಳಿಂದ ಪೌರಾಣಿಕ ನಾಟಕ ಪ್ರದರ್ಶನ ನಡೆಯಿತು.

ಕುಂಭಮೇಳಕ್ಕೆ ತೆರೆ

ಭಕ್ತರು ಪುಣ್ಯಸ್ನಾನ ಮಾಡಿದರು. ಕುಂಭಮೇಳದ ಯಶಸ್ಸಿಗೆ ಜಿಲ್ಲಾಡಳಿತ ವ್ಯವಸ್ಥಿತ ಕ್ರಮ ಕೈಗೊಂಡಿತ್ತು. ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಕುಂಭಮೇಳದ ಯಶಸ್ಸಿಗೆ ಅಧಿಕಾರಿಗಳೊಂದಿಗೆ ಸಭೆ ಕೈಗೊಂಡು ವಿವಿಧ ಜವಾಬ್ದಾರಿಯನ್ನು ಹಂಚಿಕೆ ಮಾಡಿದ್ದರು. ಜಿಲ್ಲಾಧಿಕಾರಿಗಳೊಂದಿಗೆ ಜಿ.ಪಂ ಸಿಇಓ ಕೆ.ಎಂ.ಗಾಯತ್ರಿ, ಎಸ್ಪಿ ವಿಷ್ಣುವರ್ಧನ್ ಪ್ರಮುಖ ವಹಿಸಿದ್ದರೆ, ಕುಂಭಮೇಳದ ಉಸ್ತುವಾರಿಗೆ ಮೈಸೂರು ಉಪವಿಭಾಗಾಧಿಕಾರಿ ರಕ್ಷಿತ್ ಅವರನ್ನು ನಿಯೋಜಿಸಲಾಗಿತ್ತು. ಇದರೊಂದಿಗೆ ದಸರಾ ವಸ್ತುಪ್ರದರ್ಶನದ ಸಿಇಓ ರುದ್ರೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸುದರ್ಶನ್ ಸೇರಿದಂತೆ ಇನ್ನಿತರರು ವಿವಿಧ ಜವಾಬ್ದಾರಿಯನ್ನು ನಿಭಾಯಿಸಿದ್ದರೆ, ಅಗ್ನಿಶಾಮಕಾಧಿಕಾರಿ ಚಂದನ್ ಹಾಗೂ ಗುರುರಾಜ್, ಪುಣ್ಯಸ್ನಾನ ಮಾಡುವವರ ಸುರಕ್ಷತೆ ಹೊಣೆ ಹೊತ್ತಿದ್ದರು. ಅರಣ್ಯ ಇಲಾಖೆ ರಂಗನತಿಟ್ಟು ಪಕ್ಷಿಧಾಮದಿಂದ 5 ಬೋಟ್ ಹಾಗೂ ಸಿಬ್ಬಂದಿಗಳ ತಂಡವನ್ನು ಕಳುಹಿಸಿಕೊಟ್ಟಿತ್ತು. ಡಿಹೆಚ್‌ಓ ಡಾ.ಪಿ.ಸಿ.ಕುಮಾರಸ್ವಾಮಿ ನೇತೃತ್ವದಲ್ಲಿ ಆರೋಗ್ಯ ಇಲಾಖೆ ವೈದ್ಯರು ಹಾಗೂ ಆರೋಗ್ಯ ಸಿಬ್ಬಂದಿ ತಂಡವನ್ನು ಕುಂಭಮೇಳಕ್ಕೆ ಕಳುಹಿಸಿಕೊಟ್ಟಿತ್ತು.

ವ್ಯಾಪಾರ ಕಳೆಕಟ್ಟಿತ್ತು: ಕುಂಭಮೇಳದಲ್ಲಿ ಕಳೆದ ಮೂರು ದಿನಗಳಿಂದ ತಿ.ನರಸೀಪುರಕ್ಕೆ ಅಪಾರ ಸಂಖ್ಯೆಯಲ್ಲಿ ಭಕ್ತರು ಆಗಮಿಸಿದ್ದರಿಂದ ತಿ.ನರಸೀಪುರದ ಹೋಟೆಲ್‌ಗಳು, ವಿವಿಧ ಅಂಗಡಿಗಳು ಸೇರಿದಂತೆ ಬಹುತೇಕ ವ್ಯಾಪಾರಿಗಳಿಗೆ ಭರ್ಜರಿ ವ್ಯಾಪಾರ ನಡೆದಿದೆ. ಅದರಲ್ಲೂ ತ್ರಿವೇಣಿ ಸಂಗಮದ ಸ್ಥಳಕ್ಕೆ ಹೋಗುವ ದಾರಿಯಲ್ಲಿ ತಲೆ ಎತ್ತಿದ್ದ ತಾತ್ಕಾಲಿಕ ಫಾಸ್ಟ್‌ಫುಡ್‌ಗಳು, ವಿವಿಧ ವಸ್ತುಗಳ ಮಾರಾಟ ಮಳಿಗೆಗಳು, ಆಟಿಕೆ ಮಾರಾಟ ಮಳಿಗೆಗಳಲ್ಲೂ ವ್ಯಾಪಾರ ಹೆಚ್ಚಾಗಿ ನಡೆದಿತ್ತು.

ಖಾಸಗಿ ಬಸ್‌ಗಳಲ್ಲೂ ಪ್ರಯಾಣಿಕರು: ಕುಂಭಮೇಳಕ್ಕೆ ಆಗಮಿಸುವ ಪ್ರಯಾಣಿಕರಿಗೆ ಮೈಸೂರು ಸೇರಿದಂತೆ ವಿವಿಧೆಡೆಯಿಂದ ಹೆಚ್ಚುವರಿ ಬಸ್ ಸೌಲಭ್ಯ ಕಲ್ಪಿಸಲಾಗಿತ್ತು. ಸಾರಿಗೆ ಸಂಸ್ಥೆಯ ಬಸ್‌ಗಳಲ್ಲದೆ, ಖಾಸಗಿ ಬಸ್‌ಗಳ ಸಂಖ್ಯೆಯೂ ಹೆಚ್ಚಾಗಿದ್ದರಿಂದ ಕಳೆದ ನಾಲ್ಕೈದು ದಿನಗಳಿಂದ ವಿವಿಧೆಡೆಯಿಂದ ತಿ.ನರಸೀಪುರಕ್ಕೆ ಬರುವ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದ್ದರಿಂದ ಖಾಸಗಿ ಬಸ್‌ಗಳಿಗೂ ಹೆಚ್ಚಿನ ಮೊತ್ತ ಸಂಗ್ರಹವಾಗಿದೆ.

ಎಸ್ಪಿ ಉದೇಶ್

ಚರ್ಚೆ ನಡೆಸಿ, ನಂತರ ತನಿಖಾ ವರದಿ ಆಧರಿಸಿ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ದಾವೆ ಹೂಡಬೇಕೇ, ಇಲ್ಲ ಇಲಾಖಾ ತನಿಖೆ ನಡೆಸಲು ಶಿಫಾರಸು ಮಾಡಬೇಕೇ ಎಂಬ ಬಗ್ಗೆ ತಜ್ಞರು ನೀಡುವ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಿದ್ದಾರೆ.

ಉದೇಶ್ ಅವರು, ತಾವು ನಡೆಸಿರುವ ತನಿಖೆ, ಅದಕ್ಕೆ ಸಂಬಂಧಿಸಿದ ದಾಖಲೆ, ಮುಡಾ ನಿವೇಶನಗಳ ಹಂಚಿಕೆಯಲ್ಲಿ ಎಲ್ಲೆಲ್ಲಿ ಲೋಪ ಆಗಿದೆ, ನಿವೇಶನಗಳನ್ನು ಯಾವ ರೀತಿ ಹಂಚಿಕೆ ಮಾಡಿದೆ ಹಾಗೂ ನೋಂದಣಿಗೆ ಸಂಬಂಧಿಸಿದ ದಾಖಲೆಗಳನ್ನು ಒದಗಿಸಿದ್ದಾರೆ. ಅವರು ಕಂದಾಯ ಮತ್ತು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಹಾಗೂ ಭೂ ಮಾಲೀಕರಿಂದ ಪಡೆದಿರುವ ಮಾಹಿತಿ, ದಾಖಲೆಗಳನ್ನು ವರದಿಯಲ್ಲಿ ಸಲ್ಲಿಸಿದ್ದಾರೆ.


ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ದೂರಿನ ಮೇರೆಗೆ ರಾಜ್ಯಪಾಲರು, ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದರು. ಇದನ್ನು ಪ್ರಶ್ನಿಸಿ, ಮುಖ್ಯಮಂತ್ರಿ ನ್ಯಾಯಾಲಯದ ಮೊರೆ ಹೋಗಿದ್ದರು, ರಾಜ್ಯ ಹೈಕೋರ್ಟ್ ಪ್ರಕರಣದ ವಾದ–ಪ್ರತಿವಾದ ಆಲಿಸಿದ ನಂತರ ರಾಜ್ಯಪಾಲರ ನಿರ್ಧಾರವನ್ನು ಎತ್ತಿಹಿಡಿದಿತ್ತು. ಆ ನಂತರ ಜನಪ್ರತಿನಿಧಿಗಳ ನ್ಯಾಯಾಲಯ ಲೋಕಾಯುಕ್ತ ತನಿಖೆಗೆ ಆದೇಶ ನೀಡಿದ್ದಲ್ಲದೆ, ವರದಿಯನ್ನು ನಿಗದಿತ ಸಮಯದೊಳಗೆ ನೀಡುವಂತೆ ಗಡುವು ವಿಧಿಸಿತ್ತು.

ರಾಜಕೀಯ ನಿರ್ಧಾರ

ಹೇಳುತ್ತೀರಿ ಎಂಬ ರಂಗನಾಥ್‌ರ ಪ್ರಶ್ನೆಗೆ, ಜನರ ಆಶೀರ್ವಾದ ಇಲ್ಲದಿದ್ದರೆ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ. ಆಮೇಲೆ ಮುಖ್ಯಮಂತ್ರಿ, ಮಂತ್ರಿಯಾಗುವುದಕ್ಕೆ ಹೈಕಮಾಂಡ್ ಮತ್ತು ಶಾಸಕರ ಆಶೀರ್ವಾದ ಬೇಕಾಗುತ್ತದೆ. 2ನೇ ಅವಧಿಗೂ ನಾನು ಮುಖ್ಯಮಂತ್ರಿಯಾಗಿ ಮುಂದುವರಿಯಲು ಸಂತಸವಾಗುತ್ತಿದೆ ಎಂದರು.

ನಿಮಗೆ ದಾಖಲೆಗಳಲ್ಲಿ ನಂಬಿಕೆ ಇದೆಯಾ ಎಂಬ ಮತ್ತೊಂದು ಪ್ರಶ್ನೆಗೆ ನಾನು ದಾಖಲೆಗಳಲ್ಲಿ ನಂಬಿಕೆ ಇಟ್ಟು ಕೊಂಡಿದ್ದೇನೆ. ನಾಲ್ಕು ದಶಕಗಳಿಗೂ ಹೆಚ್ಚು ಕಾಲ ರಾಜಕೀಯ ಮಾಡಿದ್ದೀನಿ. ದಾಖಲೆ ಮಾಡುವ ನಂಬಿಕೆ, ವಿಶ್ವಾಸ ನನಗೆ ಇದೆ. ಮುಡಾ ಕೇಸ್‌ನಲ್ಲಿ ನನ್ನ ವಿರುದ್ಧ ಸುಳ್ಳು ಆರೋಪ ಮಾಡಿದರು. ಬೇಕು ಅಂತಲೇ ರಾಜಕೀಯವಾಗಿ ಮಾಡಿದ್ದರು. ಯಾವಾಗಲೂ ಸತ್ಯಕ್ಕೆ ಜಯ ಸಿಗುತ್ತೆ ಎಂದು ತಮ್ಮ ನಿಲುವು ಸಮರ್ಥಿಸಿಕೊಂಡರು. ಮಂಡಿ ನೋವು ಹೇಗಿದೆ ಈಗ ಎಂಬ ಕುಶಲೋಪರಿಗೆ ಪ್ರತಿಕ್ರಿಯಿಸಿ, ಸ್ವಲ್ಪ ಕಡಿಮೆಯಾಗುತ್ತಿದೆ. ಒತ್ತಡ ಬಿದ್ದಿರುವುದರಿಂದ ಸ್ವಲ್ಪ ಸಮಯ ತೆಗೆದುಕೊಳ್ಳುತ್ತದೆ. ಸ್ವಲ್ಪ ತೂಕ ಜಾಸ್ತಿಯೂ ಆಗಿದೆ ಬಜೆಟ್‌ಗೆ ಎಲ್ಲಾ ಸಿದ್ಧತೆ ನಡೆಯುತ್ತಿದೆ. ಸ್ವಲ್ಪ ಮಂಡಿ ನೋವು ಇರುವುದರಿಂದ ಮುಖ್ಯಮಂತ್ರಿಗಳ ಅಧಿಕೃತ ನಿವಾಸದಲ್ಲೇ ಸಭೆಗಳನ್ನು ಮಾಡುತ್ತಿದ್ದೇವೆ. ಈ ಬಾರಿ ಮಂಡಿಸುವುದು 16ನೇ ಬಜೆಟ್ ಎಂದರು.

ನಾವು ಪರಾವಲಂಬಿಗಳ ವರ್ಗವನ್ನು ಸೃಷ್ಟಿಸುತ್ತಿಲ್ಲವೇ?; ಉಚಿತ ಕೊಡುಗೆಗಳ ಬಗ್ಗೆ ಸುಪ್ರೀಂಕೋರ್ಟ್ ಕಿಡಿ



ನವದೆಹಲಿಫೆ.12– ಚುನಾವಣೆಗೆ ಮುನ್ನ ರಾಜಕೀಯ ಪಕ್ಷಗಳು ಉಚಿತ ಕೊಡುಗೆಗಳನ್ನು ನೀಡುವ ಭರವಸೆ ನೀಡುತ್ತಿರುವುದಕ್ಕೆ ಅಸಮ್ಮತಿ ಸೂಚಿಸಿದ ಸುಪ್ರೀಂ ಕೋರ್ಟ್ ಬುಧವಾರ ರಾಷ್ಟ್ರದ ಅಭಿವೃದ್ಧಿಗಾಗಿ ಜನರನ್ನು ಮುಖ್ಯವಾಹಿನಿಗೆ ಕರೆತರುವ ಬದಲು 'ನಾವು ಪರಾವಲಂಬಿಗಳ ವರ್ಗವನ್ನು ಸೃಷ್ಟಿಸುತ್ತಿಲ್ಲವೇ?' ಎಂದು ಪ್ರಶ್ನಿಸಿದೆ. ನ್ಯಾಯಮೂರ್ತಿಗಳಾದ ಬಿಆರ್ ಗವಾಯಿ ಮತ್ತು ಅಗಸ್ಟಿನ್ ಜಾರ್ಜ್ ಮಸಿಹ್ ಅವರಿದ್ದ ಪೀಠವು, ಜನರನ್ನು ಸಮಾಜದ ಮುಖ್ಯವಾಹಿನಿಯ ಭಾಗವಾಗಿ ಮಾಡುವುದು ಮತ್ತು ರಾಷ್ಟ್ರದ ಅಭಿವೃದ್ಧಿಗೆ ಕೊಡುಗೆ ನೀಡುವಂತೆ ಅವಕಾಶ ನೀಡುವುದು ಉತ್ತಮ ಎಂದು ಹೇಳಿದರು. ಸಮಾಜದ ಮುಖ್ಯವಾಹಿನಿಯ ಭಾಗ ವನ್ನಾಗಿ ಮಾಡಿ, ರಾಷ್ಟ್ರದ ಅಭಿವೃದ್ಧಿಗೆ ಕೊಡುಗೆ ನೀಡುವಂತೆ ಅವರನ್ನು ಉತ್ತೇಜಿಸುವ ಬದಲು ನಾವು ಪರಾವಲಂಬಿಗಳ ವರ್ಗವನ್ನು ಸೃಷ್ಟಿಸುತ್ತಿಲ್ಲವೇ? ದುರದೃಷ್ಟವಶಾತ್ ಚುನಾವಣೆಯ ಹಿನ್ನೆಲೆಯಲ್ಲಿ ಘೋಷಿಸಲಾದ 'ಲಡ್ಕಿ ಬಹಿನ್' ಮತ್ತು ಇತರ ಯೋಜನೆಗಳಂತಹ ಈ ಉಚಿತ ಕೊಡುಗೆಗಳಿಂದಾಗಿ ಜನರು ಕೆಲಸ ಮಾಡಲು ಸಿದ್ಧರಿಲ್ಲ ಎಂದು ನ್ಯಾಯಮೂರ್ತಿ ಗವಾಯಿ ಹೇಳಿದರು. ನಗರ ಪ್ರದೇಶಗಳಲ್ಲಿನ ನಿರಾಶ್ರಿತರಿಗೆ ಆಶ್ರಯ ಕಲ್ಪಿಸುವ ಹಕ್ಕಿಗೆ ಸಂಬಂಧಿಸಿದ ಅರ್ಜಿ ವಿಚಾರಣೆ ನಡೆಸಿದ ಕೋರ್ಟ್, ಜನರು ಕೆಲಸ ಮಾಡದೆಯೇ ಉಚಿತ ಪಡಿತರ ಮತ್ತು ಹಣವನ್ನು ಪಡೆಯುತ್ತಾರೆ. ಅವರ ಬಗ್ಗೆ ನಿಮ್ಮ ಕಾಳಜಿ ನಮಗೆ ಅರ್ಥವಾಗುತ್ತದೆ ಮತ್ತು ನಾವು ಅದನ್ನು ಪ್ರಶಂಸಿಸುತ್ತೇವೆ. ಆದರೆ, ಅವರನ್ನು ಸಮಾಜದ ಮುಖ್ಯವಾಹಿನಿಗೆ ಕರೆತರುವುದು ಮತ್ತು ರಾಷ್ಟ್ರದ ಅಭಿವೃದ್ಧಿಗೆ ಕೊಡುಗೆ ನೀಡಲು ಅವಕಾಶ ನೀಡುವುದು ಉತ್ತಮವಲ್ಲವೇ? ಎಂದು ಪೀಠ ಪ್ರಶ್ನಿಸಿತು. ಅರ್ಜಿದಾರರೊಬ್ಬರ ಪರ ವಾದ ಮಂಡಿಸಿದ ವಕೀಲ ಪ್ರಶಾಂತ್ ಭೂಷಣ್, 'ಕೆಲಸವಿದ್ದರೆ ಕೆಲಸ ಮಾಡಲು ಇಷ್ಟಪಡದವರು ದೇಶದಲ್ಲಿ ಯಾರೂ ಇಲ್ಲ' ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಾಧೀಶರು, ನೀವು ಕೇವಲ ಒಂದು ಕಡೆಯ ಜ್ಞಾನವನ್ನು ಹೊಂದಿರುವಿರಿ. ನಾನು ಕೃಷಿ ಕುಟುಂಬದಿಂದ ಬಂದಿದ್ದೇನೆ. ಮಹಾರಾಷ್ಟ್ರದಲ್ಲಿ ಚುನಾವಣೆಗೆ ಮುನ್ನ ಅವರು ಘೋಷಿಸಿದ ಉಚಿತ ಕೊಡುಗೆಗಳಿಂದಾಗಿ, ಕೃಷಿಕರಿಗೆ ಕಾರ್ಮಿಕರು ಸಿಗುತ್ತಿಲ್ಲ. ಆದರೆ, ನ್ಯಾಯಾಲಯ ಈ ವಿಚಾರದ ಚರ್ಚೆಯನ್ನು ಬಯಸುವುದಿಲ್ಲ ಎಂದರು. ಅಟಾರ್ನಿ ಜನರಲ್ ಆರ್.ವೆಂಕಟರಮಣಿ ಸೇರಿದಂತೆ ಎಲ್ಲರೂ ನಿರಾಶ್ರಿತರಿಗೆ ಆಶ್ರಯ ಕಲ್ಪಿಸುವ ಬಗ್ಗೆ ಒಂದೇ ರೀತಿಯ ಗಮನಹರಿಸಿದ್ದಾರೆ. ಆದರೆ ಅದೇ ಸಮಯದಲ್ಲಿ, ಅದನ್ನು ಸಮತೋಲನಗೊಳಿಸಲು ಸಾಧ್ಯವಿಲ್ಲವೇ? ಎಂದು ಪೀಠ ಕೇಳಿತು. ನಗರ ಪ್ರದೇಶದ ವಸತಿ ರಹಿತರಿಗೆ ಸೂರು ಕಲ್ಪಿಸುವುದು ಸೇರಿದಂತೆ ವಿವಿಧ ಸಮಸ್ಯೆಗಳನ್ನು ಪರಿಹರಿಸಲು ನಗರ ಬಡತನ ನಿರ್ಮೂಲನಾ ಮಿಷನ್ ಅನ್ನು ಕೇಂದ್ರ ಸರ್ಕಾರವು ಅಂತಿಮಗೊಳಿಸುವ ಪ್ರಕ್ರಿಯೆಯಲ್ಲಿದೆ ಎಂದು ಅಟಾರ್ನಿ ಜನರಲ್ ವೆಂಕಟರಮಣಿ ಹೇಳಿದರು.

ಗ್ಯಾರೆಂಟಿಗಳಿಂದಾಗಿ ಭಾರತದ ಕಾರ್ಮಿಕರು ಉದ್ಯೋಗದ ಮನಸ್ಥಿತಿ ಕಳೆದುಕೊಳ್ಳುತ್ತಿದ್ದಾರೆ

ಚೆನ್ನೈ, ಫೆ.12– ಎಲ್&ಟಿ ಅಧ್ಯಕ್ಷ ಎಸ್.ಎನ್.ಸುಬ್ರಹ್ಮಣ್ಯನ್ ಮತ್ತೊಂದು ವಿವಾದದ ಕೇಂದ್ರದಲ್ಲಿದ್ದಾರೆ. ಈ ಬಾರಿ ಸರ್ಕಾರದ ಉಚಿತ ಯೋಜನೆಗಳ ಬಗ್ಗೆ ಮಾತನಾಡಿರುವ ಸುಬ್ರಹ್ಮಣ್ಯನ್, ಉಚಿತ ಯೋಜನೆಗಳ ಲಭ್ಯತೆಯಿಂದಾಗಿ ಕಾರ್ಮಿಕರು ಕೆಲಸ ಮಾಡಲು ಬೇರೆ ಸ್ಥಳಗಳಿಗೆ ಹೋಗಲು ಹಿಂಜರಿಯುತ್ತಿದ್ದಾರೆ ಎಂದು ಹೇಳಿದ್ದಾರೆ. ಮಂಗಳ ವಾರ ಚೆನ್ನೈನಲ್ಲಿ ನಡೆದ ಮಿಸ್ಟಿಕ್ ಸೌತ್ ಗ್ಲೋಬಲ್ ಲಿಂಕೇಜಸ್ ಶೃಂಗಸಭೆ 2025ರಲ್ಲಿ ಮಾತನಾಡಿದ ಅವರು, ಎಂಜಿಎನ್ ಆರ್‌ಇಜಿಎ, ನೇರ ಪ್ರಯೋಜನ ವರ್ಗಾವಣೆ ಮತ್ತು ಜನಧನ್ ಖಾತೆಗಳಂತಹ ಯೋಜನೆಗಳಿಂದಾಗಿ ಕಾರ್ಮಿಕರು ಆರಾಮದಾಯಕ ವಾತಾವರಣವನ್ನು ಬಿಟ್ಟು ಹೊರ ಬರಲು ಬಯಸುತ್ತಿಲ್ಲ, ಇದರ ನೇರ ಪರಿಣಾಮ ಕಾರ್ಮಿಕರನ್ನು ಒಗ್ಗೂಡಿಸಲು ಕಷ್ಟವಾಗುತ್ತಿದ್ದು, ಕಟ್ಟಡ ನಿರ್ಮಾಣ ಕಾಮಗಾರಿಗಳು ಸವಾಲಾಗಿ ಪರಿಣಮಿಸಿದೆ ಎಂದು ಹೇಳಿದ್ದಾರೆ. ಸೌಕರ್ಯಕ್ಕಾಗಿ ಆದ್ಯತೆ ನೀಡುವ ಕಾರಣದಿಂದಾಗಿ ಕಟ್ಟಡ ನಿರ್ಮಾಣ ಉದ್ಯಮದಲ್ಲಿರುವವರು ತಮ್ಮ ಊರಿಂದ ಬೇರೆಡೆಗೆ ಪ್ರಯಾಣಿಸಲು ಹಿಂಜರಿಯುತ್ತಿದ್ದಾರೆ. ಕಾರ್ಮಿಕರನ್ನು ಪಡೆಯುವುದು ಕಷ್ಟವಾಗುತ್ತಿದೆ ಎಂದು ಸುಬ್ರಹ್ಮಣ್ಯನ್ ಹೇಳಿದ್ದಾರೆ.

ಇಂದಿನಿಂದ ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್‌ನಲ್ಲಿ 'ಮುಕ್ತ ದಿನ' ಕಾರ್ಯಕ್ರಮ

ಪಾಲಿಟೆಕ್ನಿಕ್‌ನಲ್ಲಿ ಇರುವ ಸೌಲಭ್ಯಗಳ ಬಗ್ಗೆ ಮಾಹಿತಿ ಲಭ್ಯ

ಮೈಸೂರು, ಫೆ.12(ಜಿಎ)–ಮೈಸೂರಿನ ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಮುಚ್ಚಯದ ಆವರಣದಲ್ಲಿರುವ ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್‌ನಲ್ಲಿ ಫೆ.13, 14ರಂದು 'ಮುಕ್ತ ದಿನ' ಆಯೋಜಿಸುತ್ತಿದ್ದು, ಆಸಕ್ತರು ಭೇಟಿ ನೀಡಿ ಅಲ್ಲಿನ ಕಾರ್ಯವೈಖರಿ ತಿಳಿಯಬಹುದಾಗಿದೆ.

ಪ್ರಾಚಾರ್ಯರಾದ ಬಿ.ಇಳಂಗೋವನ್ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿ, ಪಾಲಿಟೆಕ್ನಿಕ್‌ನಲ್ಲಿ ಲಭ್ಯವಿರುವ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡುವುದು, ಇಲ್ಲಿನ ವಿದ್ಯಾರ್ಥಿಗಳು ಹೊಂದಿರುವ ಗಮನಾರ್ಹ ಪ್ರತಿಭೆ, ಅಂತಿಮ ವರ್ಷದ ವಿದ್ಯಾರ್ಥಿಗಳು ತಯಾರಿಸಿದ ಪ್ರಾಜೆಕ್ಟ್ ಮಾದರಿ ಪ್ರದರ್ಶನ, ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

ವಿದ್ಯಾರ್ಥಿಗಳ ಪೋಷಕರು, ಇನ್ನಿತರರು ಭೇಟಿ ನೀಡಿ ವೀಕ್ಷಿಸಬಹುದಾಗಿದೆ. ಮೈಸೂರು ಹಾಗೂ ಇತರೆ ಜಿಲ್ಲೆಯ ವಿಶೇಷಚೇತನ ವಿದ್ಯಾರ್ಥಿಗಳು ಇಲ್ಲಿಗೆ ಆಗಮಿಸಿದಲ್ಲಿ ಇಲ್ಲಿ ದೊರಕುವ ಸೌಲಭ್ಯ, ಶಿಕ್ಷಣ ಇನ್ನಿತರ ವಿಷಯ ಮಾಹಿತಿ ಪಡೆದು ಪ್ರವೇಶ ಪಡೆಯಲು ಅನುಕೂಲವಾಗಲಿದೆ. ಇಲ್ಲಿ ಕಲಿತವರಿಗೆ ಶೇ.80 ರಷ್ಟು ಉದ್ಯೋಗಾವಕಾಶ ದೊರಕುತ್ತಿದೆ. ಫೆ.13ರ ಬೆಳಗ್ಗೆ 10ಗಂಟೆಗೆ ಮುಕ್ತ ದಿನ ಉದ್ಘಾಟನೆಗೊಳ್ಳಲಿದ್ದು, ಎಂಎಲ್‌ಸಿ ಡಾ.ಯತೀಂದ್ರ ಸಿದ್ದರಾಮಯ್ಯ ಹಾಗೂ ಇನ್ನಿತರ ಗಣ್ಯರು ವೇದಿಕೆಯಲ್ಲಿರುವರು. ಎರಡೂ ದಿನ ಬೆಳಗ್ಗೆ 10ಗಂಟೆಗೆ ಮುಕ್ತ ದಿನ ಆರಂಭವಾಗಿ ಸಂಜೆ 5 ಗಂಟೆವರೆಗೆ ನಡೆಯಲಿದ್ದು, ಬಳಿಕ ಸಂಸ್ಥೆಯ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಎನ್.ಎಂ.ಶಿವಕುಮಾರಸ್ವಾಮಿ, ಕೆ.ಕುಶಾಲ್, ಎಚ್.ಪಿ.ಬಸವರಾಜ್, ಪಳನಿಸ್ವಾಮಿ ಉಪಸ್ಥಿತರಿದ್ದರು.

ಪ್ರೊ.ಮಹದೇವಮೂರ್ತಿ ಯುವರಾಜ ಕಾಲೇಜು ನೂತನ ಪ್ರಾಂಶುಪಾಲ



ಯುವರಾಜ ಕಾಲೇಜು ನೂತನ ಪ್ರಾಂಶುಪಾಲ ಪ್ರೊ.ಎಸ್.ಮಹದೇವಮೂರ್ತಿ ಅವರನ್ನು ಕನ್ನಡ ವಿಭಾಗದ ವತಿಯಿಂದ ಅಭಿನಂದಿಸಲಾಯಿತು.

ಮೈಸೂರು,ಫೆ12–ಮೈಸೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲೊಂದಾದ ಯುವರಾಜ ಕಾಲೇಜಿನ ನೂತನ ಪ್ರಾಂಶುಪಾಲರಾಗಿ ಪ್ರೊ.ಎಸ್.ಮಹದೇವಮೂರ್ತಿ ನೇಮಕಗೊಂಡಿದ್ದಾರೆ.

ಇವರು ಈವರೆಗೆ ವಿಶ್ವವಿದ್ಯಾನಿಲಯ ಸಂಜೆ ಕಾಲೇಜಿನ ಪ್ರಾಂಶುಪಾಲರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಅದಕ್ಕೂ ಮೊದಲು ಯುವರಾಜ ಕಾಲೇಜು ಸೂಕ್ಷ್ಮಜೀವಾಣುಶಾಸ್ತ್ರ ವಿಭಾಗದ ಅಧ್ಯಾಪಕರಾಗಿ, ಸಹಪ್ರಾಧ್ಯಾಪಕರಾಗಿ, ಪ್ರಾಧ್ಯಾಪಕರಾಗಿ, ವಿಭಾಗದ ಮುಖ್ಯಸ್ಥರಾಗಿ ಹಾಗೂ ಮೈಸೂರು ವಿಶ್ವವಿದ್ಯಾನಿಲಯ ಪರಿಶಿಷ್ಟಜಾತಿ ಮತ್ತು ಪರಿಶಿಷ್ಟಪಂಗಡದ ವಿಶೇಷ ಘಟಕದ ಉಪಕುಲಸಚಿವರಾಗಿ ಹೀಗೆ ಮೂವತ್ತನಾಲ್ಕು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದಾರೆ.

ನೂತನ ಪ್ರಾಂಶುಪಾಲ ಪ್ರೊ.ಎಸ್.ಮಹದೇವಮೂರ್ತಿ ಅವರನ್ನು ಕನ್ನಡ ವಿಭಾಗದ ವತಿಯಿಂದ ಅಭಿನಂದಿಸಲಾಯಿತು. ವಿಭಾಗದ ಮುಖ್ಯಸ್ಥ ಡಾ.ಸಿ.ಡಿ.ಪರಶುರಾಮ, ಪ್ರಾಧ್ಯಾಪಕರಾದ ಡಾ.ಎಂ.ಎಸ್.ವಸಂತ, ಡಾ.ಜಿ.ಶ್ರೀನಿವಾಸ್, ಡಾ.ಕೋಕಿಲ, ಡಾ.ಎಂ.ಪಿ.ರೇಖಾ, ಅಧ್ಯಾಪಕರಾದ ಡಾ.ಪಿ.ಮಾದಪ್ಪ, ಡಾ.ಹೆಚ್.ಆನಂದ್‌ಕುಮಾರ್, ಡಾ.ಜಗದೀಶ್, ಡಾ.ಅಶ್ವಿನಿ ಹಾಗೂ ಸಂಶೋಧನಾ ವಿದ್ಯಾರ್ಥಿಗಳು ಹಾಜರಿದ್ದರು.

ಕಬಡ್ಡಿಯಲ್ಲಿ ವಿದ್ಯಾವರ್ಧಕ ಕಾಲೇಜು ರನ್ನರ್ ಅಪ್



ಮೈಸೂರು ವಿವಿ ಅಂತರ ಕಾಲೇಜು ಚಾಮುಂಡಿ ವಲಯದ 2024–25ರ ಕಬಡ್ಡಿ ಪಂದ್ಯದಲ್ಲಿ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು ರನ್ನರ್ ಅಪ್ ಆಗಿ ಹೊರಹೊಮ್ಮಿದೆ. ಕಾಲೇಜಿನ ಆಡಳಿತ ಮಂಡಳಿ, ಪ್ರಾಂಶುಪಾಲ ಡಾ.ಮರಿಗೌಡ, ದೈಹಿಕ ಶಿಕ್ಷಣ ನಿರ್ದೇಶಕ ಡಾ.ಹರಿಪ್ರಸಾದ್ ಹಾಗೂ ಕಾಲೇಜಿನ ಸಿಬ್ಬಂದಿ ವಿಜೇತರಿಗೆ ಶುಭ ಹಾರೈಸಿದರು.

ಮೈಸೂರಿನ ಆರ್.ಕೆ.ನಾರಾಯಣ ಸಂಗ್ರಹಾಲಯ ವೀಕ್ಷಿಸಿದ ರಾಣಿ ಚೆನ್ನಮ್ಮ ವಿವಿ ವಿದ್ಯಾರ್ಥಿಗಳು




ಮೈಸೂರಿನ ಯಾದವಗಿರಿಯಲ್ಲಿರುವ ಖ್ಯಾತ ಕಾದಂಬರಿಗಾರ ಆರ್.ಕೆ.ನಾರಾಯಣ್ ಅವರ ಸಂಗ್ರಹಾಲಯಕ್ಕೆ ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯದ ಇಂಗ್ಲೀಷ್ ವಿಭಾಗದ 50 ಮಂದಿ ವಿದ್ಯಾರ್ಥಿಗಳು ಇಂದು ಭೇಟಿ ನೀಡಿ ವೀಕ್ಷಿಸಿದರು.

ಮೈಸೂರು, ಫೆ.12(ಆರ್‌ಕೆ)–ಮೈಸೂರಿನ ಯಾದವಗಿರಿಯಲ್ಲಿರುವ ಖ್ಯಾತ ಕಾದಂಬರಿಗಾರ ಆರ್.ಕೆ.ನಾರಾಯಣ್ ಅವರ ಸಂಗ್ರಹಾಲಯಕ್ಕೆ ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯದ ಇಂಗ್ಲಿಷ್ ವಿಭಾಗದ 50 ಮಂದಿ ವಿದ್ಯಾರ್ಥಿಗಳು ಭೇಟಿ ನೀಡಿ ವೀಕ್ಷಿಸಿದರು.

ವಿಭಾಗದ ಮುಖ್ಯಸ್ಥರಾದ ಡಾ. ಕವಿತಾ ಕುಸುಗಲ್ ಅವರ ನೇತೃತ್ವದಲ್ಲಿ ಮೈಸೂರಿಗೆ ಆಗಮಿಸಿದ್ದ ವಿದ್ಯಾರ್ಥಿಗಳನ್ನು ಜೆಎಸ್‌ಎಸ್ ವಿದ್ಯಾ ಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ.ಬೆಟಸೂರ್ ಮಠ್ (ಈ ಹಿಂದೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಕಮಿಷ್ನರ್ ಆಗಿದ್ದಾಗ ಡಾ.ಬೆಟಸೂರ ಮಠ್ ಅವರು ಆರ್.ಕೆ.ನಾರಾಯಣ್ ಅವರ ವಿವೇಕಾನಂದ ರಸ್ತೆಯ ನಿವಾಸದ ಪಾರಂಪರಿಕ ಕಟ್ಟಡವನ್ನು ಮ್ಯೂಸಿಯಂ ಆಗಿ ಅಭಿವೃದ್ಧಿಪಡಿಸಿದ್ದರು) ಅವರು ಆರ್.ಕೆ.ನಾರಾಯಣ್ ಮ್ಯೂಸಿಯಂಗೆ ಕುರಿತು ವಿವರಿಸಿದರು.

ಪಾರಂಪರಿಕ ಕಟ್ಟಡಗಳ ಮೇಲೆ ಅರಳಿ ತೋಟ!





ಹಳೆ ಡಿಸಿ ಕಟ್ಟಡದಲ್ಲಿರುವ ಎಸಿ ಕಚೇರಿ ಗೋಡೆಯಲ್ಲಿ ಗಿಡ, ಬಳ್ಳಿ ಬೆಳೆದಿರುವುದು.



ಮಹಾರಾಜ ಪ್ರೌಢಶಾಲೆಯ ಶೌಚಾಲಯ ಕಟ್ಟಡದ ಪಕ್ಕದಲ್ಲಿ ಗಿಡ–ಗಂಟಿ ಬೆಳೆದಿರುವುದು.

ಪಾರಂಪರಿಕ ಕಟ್ಟಡಗಳ ದುಸ್ಥಿತಿ

ಮೈಸೂರು, ಫೆ.12 (ಎಸ್‌ಪಿಎನ್)– ಮೈಸೂರಿನ ವಿವಿಧ ಸ್ಥಳದಲ್ಲಿನ ಪ್ರಮುಖ ಪಾರಂಪರಿಕ ಕಟ್ಟಡಗಳ ಮೇಲೆ ಆಳುದ್ದ ಬೆಳೆದಿರುವ ಅರಳಿ ಗಿಡಗಳನ್ನು ತೆರವುಗೊಳಿಸುವಂತೆ ಮೈಸೂರು ಜನತೆ ಹಾಗೂ ಪ್ರವಾಸಿಗರು ಜಿಲ್ಲಾಡಳಿತವನ್ನು ಒತ್ತಾಯಿಸಿದ್ದಾರೆ.

ಮೈಸೂರನ್ನು ಹಲವು ವಿಶೇಷಣಗಳಿಂದ ಗುರುತಿಸುತ್ತೇವೆ. ನಗರದಲ್ಲಿ ಪಾರಂಪರಿಕ ಕಟ್ಟಡಗಳು ಹೆಚ್ಚಾಗಿರುವುದರಿಂದ ಪಾರಂಪರಿಕ ನಗರಿ ಎಂದು ಗುರುತಿಸುತ್ತಾರೆ. ಮೈಸೂರು ಸಂಸ್ಥಾನದ ಆಡಳಿತಕ್ಕೆ ಸಾಕ್ಷಿ ಗುರುತುಗಳಾಗಿರುವ ಅಮೂಲ್ಯ ಪಾರಂಪರಿಕ ಕಟ್ಟಡಗಳ ಮೇಲೆ ಅರಳಿಗಿಡಗಳು ಬೆಳೆದು ಕಟ್ಟಡಗಳ ನಾಶಕ್ಕೆ ಅಡಿಪಾಯ ಹಾಕಿದಂತಿದೆ ಎಂದು ಸಾರ್ವಜನಿಕರು ಆತಂಕ ವ್ಯಕ್ತಪಡಿಸಿದ್ದಾರೆ.

ಈಗಾಗಲೇ ಲ್ಯಾನ್ಸ್‌ಡೌನ್ ಕಟ್ಟಡ, ದೇವರಾಜ ಮಾರುಕಟ್ಟೆ ಕಟ್ಟಡಗಳ ರಿಪೇರಿಗಾಗಿ ಹಲವು ವರ್ಷಗಳಿಂದ ಹೋರಾಟ ನಡೆಯುತ್ತಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಅಲ್ಲದೆ, ಪಾರಂಪರಿಕ ಕಟ್ಟಡಗಳ ಮೇಲೆ ರಾಜ್ಯ ಸರ್ಕಾರ ನಿಗಾ ಇಲ್ಲ. ಅಲ್ಲದೆ, ಕಳೆದ ಕೆಲವು ದಿನಗಳ ಹಿಂದೆ ಮಹಾರಾಣಿ ಪದವಿ ಕಾಲೇಜು ಕಟ್ಟಡ ಮೇಲ್ಚಾವಣಿ ದಿಢೀರ್ ಕುಸಿದು ಕಟ್ಟಡ ಸಂಪೂರ್ಣ ನಾಶವಾಗಿದೆ. ಮೈಸೂರು ರಾಜರ ಆಳ್ವಿಕೆಯನ್ನು ಪ್ರತಿಬಿಂಬಿಸುವ ಪಾರಂಪರಿಕ ಕಟ್ಟಡಗಳು, ಆಕರ್ಷಕ ಕಮಾನುಗಳನ್ನು ಉಳಿಸಿಕೊಳ್ಳುವುದಕ್ಕೆ ಮೀನಾಮೇಷ ಏಕೆ ಎಂದು ಸಾರ್ವಜನಿಕರು ಪ್ರಶ್ನಿಸಿದ್ದಾರೆ.

ಮೈಸೂರು ಹಳೆ ಜಿಲ್ಲಾಧಿಕಾರಿಗಳ ಕಟ್ಟಡದಲ್ಲಿರುವ ಉಪವಿಭಾಗಾಧಿಕಾರಿ ಕಚೇರಿ(ಎಸಿ) ಹೊರಭಾಗದಲ್ಲಿ ಆಳುದ್ದ ಬೆಳೆದಿರುವ ಅರಳಿಗಿಡವನ್ನು ಹೀಗೆ ಬಿಟ್ಟರೆ, ಇಡೀ ಪಾರಂಪರಿಕ ಕಟ್ಟಡಕ್ಕೆ ಧಕ್ಕೆಯಾಗುವ ಸಂಭವವಿದೆ. ಅದೇ ಸಾಲಿನಲ್ಲಿ ಬಳ್ಳಿಯೊಂದು ಹಬ್ಬಿಕೊಂಡು ಇಡೀ ಕಟ್ಟಡ ಆವರಿಸುತ್ತಿದೆ ಎಂದು ಪ್ರವಾಸಿಗರು, ಕಾವಾ ವಿದ್ಯಾರ್ಥಿಗಳು ಆತಂಕ ವ್ಯಕ್ತಪಡಿಸಿದ್ದು, ಈ ಕಟ್ಟಡದ ವಿನ್ಯಾಸ ಅದ್ಭುತವಾಗಿದ್ದು, ಈ ಕಟ್ಟಡದ ವಿನ್ಯಾಸ ಈಗಿನ ಚಿತ್ರಕಲಾ ವಿದ್ಯಾರ್ಥಿಗಳ ಕಲಿಕೆಗೆ ಮಾದರಿಯಾಗಿದೆ. ಈ ಕಟ್ಟಡ ಉಳಿಸಿಕೊಳ್ಳುವುದು ಮೈಸೂರಿನ ಪ್ರತಿಯೊಬ್ಬರ ಪ್ರಜೆಯ ಜವಾಬ್ದಾರಿ ಎನ್ನುತ್ತಾರೆ ವಿದ್ಯಾರ್ಥಿನಿ ಕಾವ್ಯ.



ಮಹಾರಾಜ ಪದವಿ ಕಾಲೇಜಿನ ಕಟ್ಟಡದಲ್ಲಿ ಅರಳಿಗಿಡ ಬೆಳೆದಿರುವುದು.

> ಪಾರಂಪರಿಕ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಇಲಾಖೆಗಳ ಆಯಾಯ ವಿಭಾಗದ ಮುಖ್ಯಸ್ಥರು ಪಾರಂಪರಿಕ ಕಟ್ಟಡ ಉಳಿವಿಗಾಗಿ ತಲೆಕೆಡಿಸಿಕೊಳ್ಳುತ್ತಿಲ್ಲ ಎಂದು ಆರೋಪಿಸಿದರಲ್ಲದೆ, ಈ ಕೂಡಲೇ ಪಾರಂ ಪರಿಕ ಕಟ್ಟಡ ಉಳಿಸುವ ನಿಟ್ಟಿನಲ್ಲಿ ಕಟ್ಟಡದ ಮೇಲೆ ಬೆಳೆದಿರುವ ಅರಳಿಗಿಡಗಳನ್ನು ಕಿತ್ತು ಹಾಕಿ ಅಮೂಲ್ಯ ಕಟ್ಟಡಗಳ ಉಳಿವಿಗೆ ಕ್ರಮಕೈಗೊಳ್ಳಬೇಕು.
>
> –ಪ್ರಸನ್ನ, ಜನಸಂಗ್ರಾಮ್ ಪರಿಷತ್ ಸದಸ್ಯ



ಮಹಾರಾಜ ಕಾಲೇಜು ವಸತಿನಿಲಯ ಕಟ್ಟಡ ಮೇಲ್ಚಾವಣಿ ಮೇಲೆ ಅರಳಿಗಿಡ.

ಅಂತೆಯೇ ಮಹಾರಾಜ ಪ್ರೌಢಶಾಲೆ ಹಾಗೂ ಪಿಯು ಕಾಲೇಜು ಕಟ್ಟಡದಲ್ಲೂ ಇದೇ ಪರಿಸ್ಥಿತಿಯಿದ್ದು, ಆ ಶಾಲೆಯ ಶೌಚಾಲಯ ಸಂಪೂರ್ಣ ಹದಗೆಟ್ಟಿದೆ. ಮಹಾರಾಜ ಪದವಿ ಕಾಲೇಜು ಆವರಣದ ಕಟ್ಟಡದ ಮೇಲ್ಚಾವಣಿ, ಪತ್ರಿಕೋದ್ಯಮ ಮತ್ತು ಸಂವಹನ ವಿಭಾಗದ ಮೇಲ್ಚಾವಣಿ, ಮಹಾರಾಜ ಕಾಲೇಜು ಯುವಕರ ವಸತಿನಿಲಯದ ಮೇಲ್ಚಾವಣಿ, ಮಹಾರಾಜ ಮತ್ತು ಯುವರಾಜ ಕಟ್ಟಡದ ಮೇಲ್ಭಾಗ ಆಳುದ್ದ ಅರಳಿಗಿಡಗಳು ಬೆಳೆದು ಕಣ್ಣಿಗೆ ರಾಚುತ್ತಿದ್ದರೂ ಒಬ್ಬರು ಇದರಿಂದ ಪಾರಂಪರಿಕ ಕಟ್ಟಡಕ್ಕೆ ಅಪಾಯವಾಗುತ್ತದೆ ಎಂದು ಯೋಚಿಸುತ್ತಿಲ್ಲ. ಇದರ ಜೊತೆಗೆ ಕಾಲೇಜು ಆವರಣದಲ್ಲಿ ಎಲ್ಲೆಂದರಲ್ಲಿ ಪ್ಲಾಸ್ಟಿಕ್ ಹಾವಳಿ ಇದೆ ಎನ್ನುತ್ತಾರೆ ಜನಸಂಗ್ರಾಮ್ ಪರಿಷತ್ ಸದಸ್ಯ ಪ್ರಸನ್ನ.

ಪಾರಂಪರಿಕ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಇಲಾಖೆಗಳ ಆಯಾಯ ವಿಭಾಗದ ಮುಖ್ಯಸ್ಥರು ಪಾರಂಪರಿಕ ಕಟ್ಟಡ ಉಳಿವಿಗಾಗಿ ತಲೆಕೆಡಿಸಿಕೊಳ್ಳುತ್ತಿಲ್ಲ ಎಂದು ಆರೋಪಿಸಿದರು. ಈ ಕೂಡಲೇ ಪಾರಂಪರಿಕ ಕಟ್ಟಡ ಉಳಿಸುವ ನಿಟ್ಟಿನಲ್ಲಿ ಕಟ್ಟಡದ ಮೇಲೆ ಬೆಳೆದಿರುವ ಅರಳಿಗಿಡಗಳನ್ನು ಕಿತ್ತು ಹಾಕಿ ಕಟ್ಟಡಗಳ ಉಳಿವಿಗೆ ಕ್ರಮಕೈಗೊಳ್ಳುವಂತೆ ಒತ್ತಾಯಿಸಿದ್ದಾರೆ.

ಇಂದಿನಿಂದ ಉಚಿತ ತಪಾಸಣೆ; ಚಿಕಿತ್ಸಾ ಶಿಬಿರ

ಮೈಸೂರು,ಫೆ.12–ಸರ್ಕಾರಿ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯಲ್ಲಿ ಸ್ವಸ್ಥವೃತ್ತ ಹೊರರೋಗಿ ವಿಭಾಗದಲ್ಲಿ(ರೂಂ.ನಂ.12) ಫೆ13ರಿಂದ 31ರವರೆಗೆ ಅರೆತಲೆನೋವು ಖಾಯಿಲೆಗೆ ಉಚಿತ ತಪಾಸಣೆ, ಚಿಕಿತ್ಸಾ ಶಿಬಿರವನ್ನು ಬೆಳಗ್ಗೆ 9ರಿಂದ ಸಂಜೆ 4ರವರೆಗೆ ನಡೆಸಲಾಗುತ್ತದೆ. ಶಿಬಿರದಲ್ಲಿ ಉಚಿತ ಆಯುರ್ವೇದ ಔಷಧಿಗಳನ್ನು ವಿತರಿಸಲಾಗುತ್ತದೆ. ಮಾಹಿತಿಗೆ ಮೈಗ್ರೇನ್ (ಅರೆತಲೆ ನೋವು) ವೈದ್ಯ ಡಾ.ಪ್ರಜ್ವಲ್‌ರಾಜ್ ದೂ.ಸಂ: 8746082373 ಅನ್ನು ಸಂಪರ್ಕಿಸಬಹುದು.

ಕೆಆರ್‌ಎಸ್, ಸುತ್ತ–ಮುತ್ತಲಿನ ಪ್ರದೇಶಗಳನ್ನೂ ಸೇರಿಸಿ ಬೃಹತ್ ಮೈಸೂರು ಮಹಾನಗರಪಾಲಿಕೆ ರಚಿಸಿ

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಿಗೆ ಜುವಾರಿ ಗಾರ್ಡನ್ ಸಿಟಿ ಅಪಾರ್ಟ್‌ಮೆಂಟ್ ನಿವಾಸಿಗಳ ಮನವಿ

ಮೈಸೂರು, ಫೆ.12– ಶ್ರೀರಂಗಪಟ್ಟಣ ತಾಲೂಕಿನ ಕೆಆರ್‌ಎಸ್ ಮತ್ತು ಸುತ್ತಮುತ್ತಲಿನ ಗ್ರಾಮಗಳನ್ನೂ ಸೇರಿಸಿ ಬೃಹತ್ ಮೈಸೂರು ನಗರಪಾಲಿಕೆಯನ್ನಾಗಿ ರಚನೆ ಮಾಡುವಂತೆ ತಾಲೂಕಿನ ಹುಲಿಕೆರೆಯ ಜುವಾರಿ ಗಾರ್ಡನ್ ಸಿಟಿ ಅಪಾರ್ಟ್‌ಮೆಂಟ್‌ನ ನಿವಾಸಿಗಳು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪನವರನ್ನು ಆಗ್ರಹಿಸಿದ್ದಾರೆ.

ಕೆಆರ್‌ಎಸ್‌ನಲ್ಲಿರುವ ಬೃಂದಾವನ ಉದ್ಯಾನವನ ವಿಶ್ವಾದ್ಯಂತ ಪ್ರಸಿದ್ಧವಾಗಿದ್ದು, ದೇಶಿಯ ಮತ್ತು ಅಂತರರಾಷ್ಟ್ರೀಯ ಪ್ರವಾಸಿಗರನ್ನು ಆಕರ್ಷಿಸುತ್ತಿದೆ. ಇತ್ತೀಚೆಗೆ, ಕರ್ನಾಟಕ ಸರ್ಕಾರವು ಪ್ರವಾಸೋದ್ಯಮವನ್ನು ಅಭಿವೃದ್ಧಿಪಡಿಸಲು ಸಾರ್ವಜನಿಕ–ಖಾಸಗಿ ಸಹಭಾಗಿತ್ವದ ಮಾದರಿಯಲ್ಲಿ ಮೆಗಾ ಸೌಂದರ್ಯೀಕರಣ ಯೋಜನೆಗೆ ಅನುಮೋದನೆ ನೀಡಿದೆಯಾದರೂ, ಆದಾಗ್ಯೂ ಈ ಅಪ್ರತಿಮ ತಾಣಕ್ಕೆ ಹೋಗುವ ರಸ್ತೆಗಳು ಕಸದಿಂದ ಹಾಳಾಗಿವೆ ಎಂದು ಸಚಿವರಿಗೆ ಬರೆದಿರುವ ಮನವಿ ಪತ್ರದಲ್ಲಿ ತಿಳಿಸಿದ್ದಾರೆ.



ಹೆಚ್ಚಾಗಿ ಸ್ಥಳೀಯ ಗ್ರಾಮ ಪಂಚಾಯಿತಿಗಳ ಅಸಮರ್ಪಕ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಗಳಿಂದಾಗಿ ಬಿಇಎಂಎಲ್ ಬಳಿಯ ಪ್ರದೇಶಗಳು, ಇನ್ಫೋಸಿಸ್ ಹಿಂಬಾಗ ಮತ್ತು ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಪ್ರದೇಶಗಳು ಡಂಪಿಂಗ್ ಮೈದಾನಗಳಾಗಿ ಮಾರ್ಪಟ್ಟಿವೆ ಎಂದು ನಿವಾಸಿಗಳು ತಿಳಿಸಿದ್ದಾರೆ.

ಇದರೊಂದಿಗೆ ಬಿಇಎಂಎಲ್‌ವರೆಗೆ ಮಾತ್ರ ಬೀದಿದೀಪಗಳು ಲಭ್ಯವಿದ್ದು, ಬೆಳಗೊಳ ಪೇಪರ್ ಮಿಲ್ ವೃತ್ತದವರೆಗಿನ ಪ್ರದೇಶಗಳು ಕತ್ತಲೆಯಲ್ಲಿ ಮುಳುಗಿದೆ. ಹಲವಾರು ಹೊಸ, ಮುಡಾ–ಅನುಮೋದಿತ ಲೇಔಟ್‌ಗಳು, ರೈಲ್ವೆ ಅಂಡರ್ ಪಾಸ್ ಬಳಿ ರಚನೆಯಾಗುತ್ತಿವೆ. ಆದರೆ ಸರಿಯಾದ ಒಳಚರಂಡಿ ಮತ್ತು ಕಸ ನಿರ್ವಹಣಾ ವ್ಯವಸ್ಥೆಗಳನ್ನು ಹೊಂದಿಲ್ಲ. ಇದು ಪರಿಸರ ಅಪಾಯಗಳನ್ನುಂಟು ಮಾಡುತ್ತದೆ ಎಂದು ಹೇಳಿದ್ದಾರೆ.

ತಮ್ಮ ಗೌರವಾನ್ವಿತ ಸ್ಥಾನವನ್ನು ಬಳಸಿಕೊಂಡು ಬೃಹತ್ ಮೈಸೂರು ಮಹಾನಗರ ಪಾಲಿಕೆಯ ತ್ವರಿತ ಸ್ಥಾಪನೆಗೆ ಅನುಕೂಲವಾಗುವಂತೆ ಮತ್ತು ಕೆಆರ್‌ಎಸ್, ಹುಲಿಕೆರೆ ಮತ್ತು ಅಕ್ಕ–ಪಕ್ಕದ ಎಲ್ಲಾ ಗ್ರಾಮಗಳನ್ನು ಮೈಸೂರು ಮಹಾನಗರ ಪಾಲಿಕೆಗೆ ಸೇರಿಸಿಕೊಳ್ಳುವಂತೆ ಒತ್ತಾಯಿಸುತ್ತೇವೆ. ಈ ಕ್ರಮವು ಸಮಗ್ರ ಅಭಿವೃದ್ಧಿಯನ್ನು ಉತ್ತೇಜಿಸುತ್ತದೆ ಮತ್ತು ಗಮನಾರ್ಹ ಹೂಡಿಕೆಗಳನ್ನು ಆಕರ್ಷಿಸುತ್ತದೆ. ವಿಶೇಷವಾಗಿ ಆತಿಥ್ಯ ವಲಯದಲ್ಲಿ. ಇದರಿಂದಾಗಿ ಸ್ಥಳೀಯ ಯುವಕರಿಗೆ ಉದ್ಯೋಗಾವಕಾಶಗಳು ಸೃಷ್ಟಿಯಾಗುತ್ತವೆ ಎಂದು ನಿವಾಸಿಗಳು ಹೇಳಿದ್ದಾರೆ.

'ಶಬ್–ಎ–ಬರಾತ್' ಆಚರಣೆ ಹಿನ್ನೆಲೆ; ಮುಸ್ಲಿಂ ಮುಖಂಡರೊಂದಿಗೆ ಶಾಂತಿ ಸಭೆ



ಮುಸ್ಲಿಂ ಮುಖಂಡರೊಂದಿಗೆ ಶಾಂತಿ ಸಭೆ ನಡೆಸುತ್ತಿರುವುದು.

ಮೈಸೂರು, ಫೆ.12(ಎಸ್‌ಪಿಎನ್)– ಮುಸ್ಲಿಂ ಸಮುದಾಯದವರು ಶಬ್–ಎ–ಬರಾತ್ ಹಬ್ಬವನ್ನು ಆಚರಿಸುವ ಹಿನ್ನೆಲೆಯಲ್ಲಿ ಈ ದಿನ ಮೈಸೂರು ನಗರದ ಎಲ್ಲಾ ಪೊಲೀಸ್ ಠಾಣೆಗಳಲ್ಲಿ ಮುಸ್ಲಿಂ ಮುಖಂಡರು ಮತ್ತು ಇತರೆ ಧಾರ್ಮಿಕ ಮುಖಂಡರುಗಳೊಂದಿಗೆ ಬುಧವಾರ ಶಾಂತಿಸಭೆ ನಡೆಸಲಾಗಿದೆ. ಈ ಹಬ್ಬದ ವೇಳೆ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಎಲ್ಲಾ ಮುಂಜಾಗ್ರತಾ ಕ್ರಮ ಕೈಗೊಂಡಿದ್ದು, ಈ ಶಾಂತಿಸಭೆಗಳನ್ನು ಕಾನೂನು ಸುವ್ಯವಸ್ಥೆ ವಿಭಾಗದ ಡಿಸಿಪಿ ಎಂ.ಮುತ್ತುರಾಜು ನೇತೃತ್ವದಲ್ಲಿ ನಗರದ ಎಲ್ಲಾ ವಿಭಾಗದ ಎಸಿಪಿ ಹಾಗೂ ಆಯಾಯ ಠಾಣಾಧಿಕಾರಿಗಳ ಉಪಸ್ಥಿತಿಯಲ್ಲಿ ನಡೆಸಲಾಯಿತು.

ನಾಳೆಯಿಂದ ಜೆಎಸ್‌ಎಸ್ ಅರ್ಬನ್ ಹಾಥ್‌ನಲ್ಲಿ ಗಾಂಧಿ ಶಿಲ್ಪ ಬಜಾರ್

ಕರಕುಶಲ ಉತ್ಪನ್ನಗಳ ಮಾರಾಟ, ಪ್ರದರ್ಶನ

ಮೈಸೂರು, ಫೆ.12(ಜಿಎ)–ಮೈಸೂರಿನ ಜೆಎಸ್‌ಎಸ್ ಅರ್ಬನ್ ಹಾಥ್‌ನಲ್ಲಿ ಗಾಂಧಿ ಶಿಲ್ಪ ಬಜಾರ್ ಕರಕುಶಲ ಉತ್ಪನ್ನಗಳ ಮಾರಾಟ ಹಾಗೂ ಪ್ರದರ್ಶನ ಮೇಳವನ್ನು ಫೆ.14ರಿಂದ 23ರವರೆಗೆ ಆಯೋಜಿಸಲಾಗಿದೆ ಎಂದು ಕರಕುಶಲ ಸೇವಾ ಕೇಂದ್ರ, ಜವಳಿ ಸಚಿವಾಲಯದ ಸಹಾಯಕ ನಿರ್ದೇಶಕ ಕೆ.ಎಸ್.ಸುನಿಲ್‌ಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆ.14ರಂದು ಸಂಜೆ 4 ಗಂಟೆಗೆ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಡಾ.ರೂಪಕಲಾ ಎಂ.ಶಶಿಧರ್ ಮೇಳವನ್ನು ಉದ್ಘಾಟಿಸಲಿದ್ದಾರೆ.



ಶಾಸಕ ಟಿ.ಎಸ್.ಶ್ರೀವತ್ಸ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಮೈಸೂರು ನಗರಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸೀಫ್, ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್ ಮತ್ತಿತರರು ಆಗಮಿಸಲಿದ್ದಾರೆ ಎಂದರು.

ಮೇಳದಲ್ಲಿ 70ಕ್ಕೂ ಹೆಚ್ಚು ಮಳಿಗೆಗಳಲ್ಲಿ ಸುಮಾರು 18 ರಾಜ್ಯಗಳ ಪ್ರಶಸ್ತಿ ಪುರಸ್ಕೃತ ಕರಕುಶಲ ಕರ್ಮಿಗಳು, ಕೈಮಗ್ಗ ನೇಕಾರರು ತಮ್ಮ ಉತ್ಪನ್ನಗಳನ್ನು ಪ್ರದರ್ಶಿಸಿ ಮಾರಾಟ ಮಾಡಲಿದ್ದಾರೆ. ಮರದ ಕೆತ್ತನೆ, ಶಿಲಾ ಶಿಲ್ಪ, ಕಂಚಿನ ವಿಗ್ರಹ, ಮರದ ಕುಂದಣ ಕಲೆ, ಮಣ್ಣಿನ ಮಡಿಕೆ, ಪೇಪರ್, ರತ್ನಗಂಬಳಿ, ಹತ್ತಿ ಜನಕಾನ, ಇಮಿಟೇಶನ್ ಆಭರಣ, ಮರದ ಅರಗಿನ ಕಲಾ ವಸ್ತುಗಳು, ಬಾಟಿಕ್, ಕಲಾಂಕಾರಿ ಚಿತ್ರಕಲೆ, ಚರ್ಮದ ಆಕರ್ಷಣ ವಸ್ತುಗಳು, ಕಲಾತ್ಮಕ ಚರ್ಮದ ಚಪ್ಪಲಿಗಳು, ಚನ್ನಪಟ್ಟಣದ ಗೊಂಬೆಗಳು, ಕಸೂತಿ ಕಲೆ, ಮಧ್ಯಪ್ರದೇಶ ರಾಜ್ಯ ಮಹೇಶ್ವರಿ, ಚಂದೇರಿ ಸೀರೆಗಳು ಇರಲಿವೆ ಎಂದರು.

ಒಡಿಶಾ ರಾಜ್ಯದ ಪಟ್ಟ ಚಿತ್ರ, ಬೆಳ್ಳಿಯ ಸೂಕ್ಷ್ಮ ವಿನ್ಯಾಸದ ವಸ್ತುಗಳು, ಬಿದಿರು–ಬೆತ್ತದ ವಸ್ತುಗಳು, ಡ್ರೈ ಫ್ಲವರ್, ಕಲಾತ್ಮಕ ಕಲ್ಲಿನ ವಸ್ತುಗಳು, ಪಂಜಾಬ್ ರಾಜ್ಯದ ಫುಲ್ವಾರಿ ಬಟ್ಟೆಗಳು ಒಂದೇ ಸೂರಿನಡಿ ನೇರವಾಗಿ ಕುಶಲಕರ್ಮಿಗಳಿಂದ ಗ್ರಾಹಕರಿಗೆ ರಿಯಾಯಿತಿ ದರದಲ್ಲಿ ಸಿಗಲಿವೆ. ಹೀಗಾಗಿ ಸಾರ್ವಜನಿಕರು ಪ್ರಯೋಜನ ಪಡೆಯಬೇಕು. ಪ್ರತಿನಿತ್ಯ ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ ಉಚಿತ ಪ್ರವೇಶವಿದೆ ಎಂದು ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಯೋಜನಾಧಿಕಾರಿ ಎಂ.ಶಿವನಂಜಸ್ವಾಮಿ, ಸಂಯೋಜಕರಾದ ರಾಕೇಶ್ ರೈ ಉಪಸ್ಥಿತರಿದ್ದರು.

ಇಂದು ವಿದ್ಯುತ್ ವ್ಯತ್ಯಯ



ಮೈಸೂರು,ಫೆ.12–ಹೆಚ್.ಡಿ.ಕೋಟೆ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತುರ್ತು ಕಾಮಗಾರಿ ನಿಮಿತ್ತ ಫೆ.13ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಹೆಚ್.ಡಿ.ಕೋಟೆ ತಾಲೂಕು, ಹೆಚ್.ಡಿ.ಕೋಟೆ ಟೌನ್ ಮತ್ತು ಸುತ್ತಮುತ್ತಲಿನ ಗ್ರಾಮಗಳು. ಜಯಪುರ ವಿದ್ಯುತ್ ವಿತರಣಾ ವ್ಯಾಪ್ತಿಯ ಗುಜ್ಜೇಗೌಡನಪುರ, ಹಾರೋಹಳ್ಳಿ, ಮಾರ್ಬಳ್ಳಿ, ಮಾರ್ಬಳ್ಳಿ ಹುಂಡಿ, ಕಾಟೂರು, ಅರಸಿನಕೆರೆ, ಮಂಡನಹಳ್ಳಿ, ಕಾಡನಹಳ್ಳಿ, ಸೋಲಿಗರ ಕಾಲೋನಿ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ದೇಶ – ವಿದೇಶ

ಗಗನಯಾತ್ರಿಗಳಾದ ಸುನೀತಾ, ಬುಚ್ ಶೀಘ್ರದಲ್ಲೇ ಭೂಮಿಗೆ



ಕೇಪ್ ಕೆನವೆರಲ್: ನಾಸಾದ ಇಬ್ಬರು ಗಗನಯಾತ್ರಿಗಳಾದ ಭಾರತೀಯ ಮೂಲದ ಅಮೆರಿಕನ್ ಗಗನಯಾತ್ರಿ ಸುನೀತಾ ವಿಲಿಯಮ್ಸ್ ಮತ್ತು ಅವರ ಬಾಹ್ಯಾಕಾಶ ಸಂಗಾತಿ ವಿಲ್ಮೋರ್ ಬುಚ್ ಅವರು ಯೋಜಿಸಿದ್ದಕ್ಕಿಂತ ಸ್ವಲ್ಪ ಬೇಗ ಭೂಮಿಗೆ ಮರಳಬಹುದು ಎಂದು ನಾಸಾ ತಿಳಿಸಿದೆ. ಬುಚ್ ವಿಲ್ಮೋರ್ ಮತ್ತು ಸುನೀತಾ ವಿಲಿಯಮ್ಸ್ ಅವರನ್ನು ಏಪ್ರಿಲ್ ಬದಲಿಗೆ ಮಾರ್ಚ್ ಅಂತ್ಯ ಅಥವಾ ಮಾರ್ಚ್ ಮಧ್ಯದಲ್ಲಿ ಭೂಮಿಗೆ ಮರಳಿ ಕರೆತರಲಾಗುತ್ತದೆ ಎಂದು ನಾಸಾ ಮೂಲಗಳು ತಿಳಿಸಿವೆ. ಇದು ಈ ಹಿಂದೆ ಘೋಷಿಸಲಾದ ಗಡುವಿಗಿಂತ ಸುಮಾರು 2 ವಾರಗಳ ಮುಂಚೆಯೇ ಆಗಿರುವುದು ಗಮನಾರ್ಹ. ಸ್ಪೇಸ್‌ಎಕ್ಸ್ ಮುಂಬರುವ ಗಗನಯಾತ್ರಿ ಹಾರಾಟಗಳಿಗೆ ಕ್ಯಾಪ್ಸುಲ್‌ಗಳನ್ನು ಬದಲಾಯಿಸುತ್ತದೆ. ಈ ಬದಲಾವಣೆಯು ಸ್ಪೇಸ್‌ಎಕ್ಸ್‌ನ ಕ್ರೂ–10 ಮಿಷನ್‌ಗಾಗಿ ಬಾಹ್ಯಾಕಾಶ ನೌಕೆ ನಿಯೋಜನೆಯಲ್ಲಿನ ಬದಲಾವಣೆಗೆ ಸಂಬಂಧಿಸಿದೆ. ಕಳೆದ ವರ್ಷ ಜೂನ್ ಮೊದಲ ವಾರದಲ್ಲಿ ಸುನೀತಾ ಕೇವಲ 1 ವಾರ ಬಾಹ್ಯಾಕಾಶಕ್ಕೆ ಹೋಗಿದ್ದರು. ಆದರೆ ಅವರ ನೌಕೆಯಲ್ಲಿ ತಾಂತ್ರಿಕ ಸಮಸ್ಯೆ ಇತ್ತು. ಇದರಿಂದಾಗಿ ಅವರಿಬ್ಬರ ಮರಳುವಿಕೆ ಮುಂದೂಡಲ್ಪಡುತ್ತಲೇ ಇತ್ತು. ನಂತರ ಎಲಾನ್ ಮಸ್ಕ್ ಅವರ ಸ್ಪೇಸ್‌ಎಕ್ಸ್ ಇಬ್ಬರ ಮರಳುವಿಕೆಯನ್ನು ಘೋಷಿಸಿತು.

ಪತ್ನಿಯ ಒಪ್ಪಿಗೆಯಿಲ್ಲದೆ ಅಸ್ವಾಭಾವಿಕ ಲೈಂಗಿಕ ಕ್ರಿಯೆ ಅಪರಾಧವಲ್ಲ!



ಛತ್ತೀಸ್‌ಗಢ: ಗಂಡ ಮತ್ತು ಪತ್ನಿಯ ನಡುವಿನ ಅಸ್ವಾಭಾವಿಕ ಲೈಂಗಿಕ ಕ್ರಿಯೆ ಶಿಕ್ಷೆಗೆ ಅರ್ಹವಲ್ಲ ಎಂದು ಹೇಳುವ ಮೂಲಕ ಛತ್ತೀಸ್‌ಗಢ ಹೈಕೋರ್ಟ್ ನ್ಯಾಯಾಧೀಶರು ಅಚ್ಚರಿಯ ತೀರ್ಪು ನೀಡಿದ್ದಾರೆ. 2017ರಲ್ಲಿ ಪತ್ನಿಯ ಒಪ್ಪಿಗೆಯಿಲ್ಲದೆ ಅಸ್ವಾಭಾವಿಕ ಲೈಂಗಿಕ ಕ್ರಿಯೆ ನಡೆದ ನಂತರ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ ಸಂತ್ರಸ್ತೆಯ ಪ್ರಕರಣವನ್ನು ನ್ಯಾಯಾಲಯ ವಿಚಾರಣೆ ನಡೆಸುತ್ತಿತ್ತು. ಈ ವೇಳೆ ವಾದ ಆಲಿಸಿದ ನ್ಯಾಯಾಧೀಶರು, ವಯಸ್ಕ ಗಂಡ ಮತ್ತು ಪತ್ನಿಯ ನಡುವಿನ ಅಸ್ವಾಭಾವಿಕ ಲೈಂಗಿಕ ಕ್ರಿಯೆ ಶಿಕ್ಷೆಗೆ ಅರ್ಹವಲ್ಲ ಎಂದು ತೀರ್ಪು ನೀಡಿದ್ದಾರೆ. ಆರೋಪಿಯು, ಸಂತ್ರಸ್ತೆಯೊಂದಿಗೆ ಅಸ್ವಾಭಾವಿಕ ರೀತಿ ಲೈಂಗಿಕ ಕ್ರಿಯೆ ನಡೆಸಿದ್ದ ಎಂದು ಆರೋಪಿಸಲಾಗಿದ್ದು, ನಂತರ ಸಂತ್ರಸ್ತೆ ಆಸ್ಪತ್ರೆಗೆ ದಾಖಲಾಗಿ, ಚಿಕಿತ್ಸೆ ಫಲಕಾರಿಯಾಗದೆ ಕೆಲ ದಿನಗಳ ಬಳಿಕ ಆಕೆ ಮೃತಪಟ್ಟಿದ್ದರು. ಈ ಸಂಬಂಧ ಸಂತ್ರಸ್ತೆಯ ಪರ ದೂರು ದಾಖಲಾಗಿತ್ತು. ಭಾರತದಲ್ಲಿ ವೈವಾಹಿಕ ಅತ್ಯಾಚಾರ ಶಿಕ್ಷಾರ್ಹ ಅಪರಾಧವಲ್ಲದಿದ್ದರೂ, ಈ ತೀರ್ಪು ಅಸ್ವಾಭಾವಿಕ ಲೈಂಗಿಕತೆಯನ್ನು ಶಿಕ್ಷೆಯ ವ್ಯಾಪ್ತಿಯಿಂದ ಹೊರಗಿಟ್ಟಿದೆ ಎಂಬುದು ಗಮನಾರ್ಹ.

40 ಕೋಟಿಗೆ ಮಾರಾಟವಾದ 'ವಯಾಟಿನಾ 19' ಹಸು



ಬ್ರೆಸಿಲಿಯಾ: ಬ್ರೆಜಿಲ್‌ನ ಮಿನಾಸ್ ಗೆರೈಸ್‌ನಲ್ಲಿ ನಡೆದ ಹರಾಜಿನಲ್ಲಿ ವಯಾಟಿನಾ–19 ಎಂಬ ಆಂಧ್ರಪ್ರದೇಶದ ನೆಲ್ಲೂರು ತಳಿಯ ಹಸು 40 ಕೋಟಿಗೆ ಮಾರಾಟವಾಗಿ ಗಿನ್ನೆಸ್ ವಿಶ್ವ ದಾಖಲೆ ನಿರ್ಮಿಸಿದೆ. ಈ ಹಸುವಿನ ತೂಕ 1,101 ಕಿಲೋಗ್ರಾಂ. ಇದು ಅದೇ ತಳಿಯ ಯಾವುದೇ ಇತರ ಹಸುವಿನ ಸರಾಸರಿ ತೂಕಕ್ಕಿಂತ ಎರಡು ಪಟ್ಟು ಹೆಚ್ಚು. ಹಾಗಾಗಿಯೇ ವಯಾಟಿನಾ–19 ದುಬಾರಿಯಾಗಿ ಮಾರಾಟವಾದ ಹಸು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಹಸುವಿನ ವಿಶೇಷತೆಯೇನೆಂದರೆ, ಅದರ ಅಪಾರ ತೂಕದ ಜೊತೆಗೆ ಅದರ ಅಸಾಧಾರಣ ತಳಿಶಾಸ್ತ್ರ, ಸ್ನಾಯುವಿನ ರಚನೆ ಮತ್ತು ಶಾಖ ಸಹಿಷ್ಣುತೆಗಾಗಿ ಜಾಗತಿಕ ಮನ್ನಣೆಯನ್ನು ಗಳಿಸಿದೆ. 'ಚಾಂಪಿಯನ್ಸ್ ಆಫ್ ದಿ ವರ್ಲ್ಡ್' ಪ್ರತಿಷ್ಠಿತ ಸ್ಪರ್ಧೆಯಲ್ಲಿ 'ಮಿಸ್ ಸೌತ್ ಅಮೇರಿಕಾ' ಬಿರುದನ್ನು ಗೆದ್ದಿದೆ. 'ವಯಾಟಿನಾ–19' ಹಸುವಿನ ಭ್ರೂಣಗಳು ಸಂತಾನೋತ್ಪತ್ತಿ ಯೋಜನೆಗಳಿಗಾಗಿ ಜಾಗತಿಕವಾಗಿ ಹೆಚ್ಚಿನ ಬೇಡಿಕೆಯಲ್ಲಿವೆ. ಉಷ್ಣವಲಯ ಮತ್ತು ಅತೀ ಉಷ್ಣವಲಯ ಪ್ರದೇಶಗಳಲ್ಲಿ ಈ ತಳಿಯ ಹೆಚ್ಚಿನ ಶಾಖ ಸಹಿಷ್ಣುತೆ ಮತ್ತು ರೋಗ ನಿರೋಧಕತೆಯಿಂದಾಗಿ ಈ ಬೇಡಿಕೆ ಹೆಚ್ಚಾಗಿದೆ. ಅಮೆರಿಕ ಹಾಗೂ ಐರೋಪ್ಯ ರಾಷ್ಟ್ರಗಳಲ್ಲಿ ಈ ಹಸುಗಳ ಸಾಕಾಣಿಕೆ ಯಥೇಚ್ಛವಾಗಿ ನಡೆದಿದೆ.

ಸಿಖ್ ವಿರೋಧಿ ದಂಗೆ ಪ್ರಕರಣ: ಕಾಂಗ್ರೆಸ್ ಮಾಜಿ ಸಂಸದ ಸಜ್ಜನ್‌ಕುಮಾರ್ ದೋಷಿ



ನವದೆಹಲಿ: 1984ರ ಸಿಖ್ ವಿರೋಧಿ ದಂಗೆ ವೇಳೆ ಸರಸ್ವತಿ ವಿಹಾರ್ ಪ್ರದೇಶದಲ್ಲಿ ನಡೆದ ಇಬ್ಬರು ವ್ಯಕ್ತಿಗಳ ಹತ್ಯೆಗೆ ಸಂಬಂಧಿಸಿದ ಪ್ರಕರಣದಲ್ಲಿ ದೆಹಲಿ ನ್ಯಾಯಾಲಯವು ಬುಧವಾರ ಕಾಂಗ್ರೆಸ್ ಮಾಜಿ ಸಂಸದ ಸಜ್ಜನ್ ಕುಮಾರ್ ಅವರನ್ನು ದೋಷಿ ಎಂದು ತೀರ್ಪು ನೀಡಿದೆ. ಪ್ರಕರಣದ ಸುದೀರ್ಘ ವಿಚಾರಣೆ ನಡೆಸಿದ ವಿಶೇಷ ನ್ಯಾಯಾಧೀಶೆ ಕಾವೇರಿ ಬವೇಜಾ ಅವರು ಇಂದು ತೀರ್ಪು ಪ್ರಕಟಿಸಿದ್ದು, ಶಿಕ್ಷೆಯ ಪ್ರಮಾಣವನ್ನು ಫೆಬ್ರವರಿ 18ಕ್ಕೆ ಕಾಯ್ದಿರಿಸಿದ್ದಾರೆ. ತೀರ್ಪು ಪ್ರಕಟಿಸುವ ಮುನ್ನ 79 ವರ್ಷದ ಸಜ್ಜನ್‌ಕುಮಾರ್ ಅವರನ್ನು ತಿಹಾರ್ ಜೈಲಿನಿಂದ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು. ದೂರುದಾರ ಜಸ್ವಂತ್ ಅವರ ಪತ್ನಿ ಮನೆಯ ಮೇಲೆ ದಾಳಿ ಮಾಡಿದ ಗುಂಪೊಂದು, ಆಕೆಯ ಪತಿ ಮತ್ತು ಮಗನನ್ನು ಕೊಂದು, ವಸ್ತುಗಳನ್ನು ಲೂಟಿ ಮಾಡುವುದರ ಜೊತೆಗೆ ಅವರ ಮನೆಗೆ ಬೆಂಕಿ ಹಚ್ಚಿತು ಎಂದು ಪ್ರಾಸಿಕ್ಯೂಷನ್ ಆರೋಪಿಸಿದೆ. ಸಜ್ಜನ್‌ಕುಮಾರ್ ಅವರನ್ನು ವಿಚಾರಣೆಗೆ ಒಳಪಡಿಸಿದ ನ್ಯಾಯಾಲಯದ ಆದೇಶವು ಅವರು ಕೇವಲ ಈ ಕೃತ್ಯದಲ್ಲಿ ಭಾಗವಹಿಸಿದ್ದು ಮಾತ್ರವಲ್ಲ, ಗುಂಪಿನ ನೇತೃತ್ವ ವಹಿಸಿದ್ದರು ಎಂಬ ಪ್ರಾಥಮಿಕ ಅಭಿಪ್ರಾಯವನ್ನು ರೂಪಿಸಲು ಸಾಕಷ್ಟು ಪುರಾವೆಗಳನ್ನು ಸಾಕ್ಷೀಕರಿಸಿತು.

ಅದಾನಿ ಲಂಚ ಪ್ರಕರಣ: ಆರು ಯುಎಸ್ ಕಾಂಗ್ರೆಸ್ ಸದಸ್ಯರು ಪತ್ರ



ವಾಷಿಂಗ್ಟನ್: ಲಂಚ ಹಗರಣದಲ್ಲಿ ಅದಾನಿ ಗ್ರೂಪ್ ವಿರುದ್ಧದ ದೋಷಾರೋಪಣೆ ನಿಕಟ ಮಿತ್ರ ರಾಷ್ಟ್ರ ಭಾರತದೊಂದಿಗಿನ ಸಂಬಂಧವನ್ನು ಅಪಾಯಕ್ಕೆ ಸಿಲುಕಿಸಬಹುದು ಎಂದು ಆರೋಪಿಸಿ ಅಮೆರಿಕದ ನ್ಯಾಯಾಂಗ ಇಲಾಖೆ (DoJ) ತೆಗೆದುಕೊಂಡ ಪ್ರಶ್ನಾರ್ಹ ನಿರ್ಧಾರಗಳ ವಿರುದ್ಧ 6 ಮಂದಿ ಯುಎಸ್ ಕಾಂಗ್ರೆಸ್ ಸದಸ್ಯರು ಹೊಸದಾಗಿ ನೇಮಕಗೊಂಡ ಯುನೈಟೆಡ್ ಸ್ಟೇಟ್ಸ್ ಅಟಾರ್ನಿ ಜನರಲ್‌ಗೆ ಪತ್ರ ಬರೆದಿದ್ದಾರೆ. ಯುಎಸ್ ಕಾಂಗ್ರೆಸ್ ಸದಸ್ಯರಾದ ಲ್ಯಾನ್ಸ್ ಗುಡೆನ್, ಪ್ಯಾಟ್ ಫಾಲನ್, ಮೈಕ್ ಹರಿಡೋಪೋಲೋಸ್, ಬ್ರಾಂಡನ್ ಗಿಲ್, ವಿಲಿಯಂ ಆರ್ ಟಿಮ್ಮನ್ಸ್ ಮತ್ತು ಬ್ರಿಯಾನ್ ಬಾಬಿನ್ ಅವರು ಯುಎಸ್ ಅಟಾರ್ನಿ ಜನರಲ್ ಪಮೇಲಾ ಬೇಡಿ ಅವರಿಗೆ, ಹಿಂದಿನ ಜೋ ಬೈಡನ್ ಆಡಳಿತದಲ್ಲಿ ನ್ಯಾಯಾಂಗ ಇಲಾಖೆ ತೆಗೆದುಕೊಂಡ ಕೆಲವು ಪ್ರಶ್ನಾರ್ಹ ನಿರ್ಧಾರಗಳ ಬಗ್ಗೆ ಗಮನಸೆಳೆಯುವ ರೀತಿ ಪತ್ರ ಬರೆದಿದ್ದಾರೆ. ಸೌರಶಕ್ತಿ ಒಪ್ಪಂದ ಮಾಡಿಕೊಳ್ಳುವಾಗ ಭಾರತೀಯ ಅಧಿಕಾರಿಗಳಿಗೆ 250 ಮಿಲಿಯನ್ ಡಾಲರ್ (ಸುಮಾರು 2,100 ಕೋಟಿ ರೂ.) ಲಂಚವನ್ನು ಗೌತಮ್ ಅದಾನಿ ನೀಡಿದ್ದರು ಎಂಬ ಆರೋಪವಿದ್ದು, ಇದನ್ನು ಯುಎಸ್ ಬ್ಯಾಂಕ್‌ಗಳು, ಹೂಡಿಕೆದಾರರಿಂದ ಮರೆಮಾಡಲಾಗಿದೆ ಎಂದು ಪ್ರಾಸಿಕ್ಯೂಟರ್‌ಗಳು ಆರೋಪಿಸಿದ್ದಾರೆ. ಆದರೆ ಅದಾನಿ ಗ್ರೂಪ್ ಈ ಆರೋಪಗಳನ್ನು ತಳ್ಳಿಹಾಕಿದೆ.

ಕಟ್ಟೆಮಾಡು ಶ್ರೀ ಮೃತ್ಯುಂಜಯ ದೇವಾಲಯಕ್ಕೆ ಸಾಂಪ್ರದಾಯಿಕ ಉಡುಪಿನಲ್ಲಿ ಪ್ರವೇಶಿಸಬಹುದು

ಹೈಕೋರ್ಟ್‌ನಿಂದ ಮಧ್ಯಂತರ ಆದೇಶ


ಕಟ್ಟೆಮಾಡು ಶ್ರೀ ಮೃತ್ಯುಂಜಯ ಮಹದೇವರ ದೇವಾಲಯ.

ಮಡಿಕೇರಿ, ಫೆ.12–ಕಟ್ಟೆಮಾಡು ಶ್ರೀ ಮೃತ್ಯುಂಜಯ ಮಹದೇವರ ದೇವಾಲಯಕ್ಕೆ ಕೊಡವರು ಸೇರಿದಂತೆ ಭಾರತೀಯ ಸಂಸ್ಕೃತಿಯಲ್ಲಿ ಆಗಮಿಸುವ ಎಲ್ಲಾ ಭಕ್ತರು ಸಾಂಪ್ರದಾಯಿಕ ಉಡುಪು ಧರಿಸಿ ಬರಬಹುದು ಎಂದು ಹೈಕೋರ್ಟ್ ಮಧ್ಯಂತರ ಆದೇಶ ನೀಡಿದೆ.

ಈ ಆದೇಶದಿಂದ ಕಳೆದ ಒಂದೂವರೆ ತಿಂಗಳಿಂದ ನಡೆಯುತ್ತಿದ್ದ ಕಟ್ಟೆಮಾಡು ದೇವಸ್ಥಾನದ ವಸ್ತ್ರಸಂಹಿತೆ ವಿವಾದಕ್ಕೆ ತಾತ್ಕಾಲಿಕವಾಗಿ ತೆರೆ ಬಿದ್ದಂತಾಗಿದೆ. ಕಟ್ಟೆಮಾಡು ದೇವಸ್ಥಾನಕ್ಕೆ ಯಾವುದೇ ಸಮುದಾಯದ ಸಾಂಪ್ರದಾಯಿಕ ಉಡುಪು ಧರಿಸಿ ಬರುವಂತಿಲ್ಲ ಎಂಬ ಆಡಳಿತ ಮಂಡಳಿಯ ಬೈಲಾ ಪ್ರಶ್ನಿಸಿ ಮೂಲತಃ ಮಡಿಕೇರಿಯವರಾದ ಕೊಡವ ಸಾಹಿತ್ಯ ಅಕಾಡೆಮಿ ಸದಸ್ಯ ಚೊಟ್ಟೆಯಂಡ ಎ.ಸಂಜು ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ನ್ಯಾಯಮೂರ್ತಿ ಆರ್.ದೇವದಾಸ್ ಅವರಿದ್ದ ಪೀಠದಲ್ಲಿ ಕಳೆದ ವಿಚಾರಣೆ ವೇಳೆ ಸಂಜು ಪರ ವಕೀಲ ಕೆ.ಎಸ್.ಪೊನ್ನಪ್ಪ ವಾದ ಮಂಡಿಸಿದರು.

ಈ ದೇವಸ್ಥಾನಕ್ಕೆ ಎಲ್ಲಾ ಸಮುದಾಯದವರು ಅವರವರ ಸಾಂಪ್ರದಾಯಿಕ ಉಡುಪು ಧರಿಸಿ ಹೋಗುತ್ತಿದ್ದರು. ಆದರೆ 2024ರ ಅಕ್ಟೋಬರ್ 10ರಂದು ದೇವಸ್ಥಾನದ ಆಡಳಿತ ಮಂಡಳಿಯವರು 'ಯಾವುದೇ ಸಮುದಾಯದ ಸಾಂಪ್ರದಾಯಿಕ ಉಡುಪು ಧರಿಸಿ ದೇವಾಲಯ ಪ್ರವೇಶಿಸುವಂತಿಲ್ಲ' ಎಂಬ ನಿಯಮ ರೂಪಿಸಿಕೊಂಡಿದ್ದಾರೆ. 2024ರ ಡಿಸೆಂಬರ್ 23ರಿಂದ 27ರವರೆಗೆ ದೇವಸ್ಥಾನದಲ್ಲಿ ನಡೆದಿದ್ದ ಕಾರ್ಯಕ್ರಮಕ್ಕೆ ಸಾಂಪ್ರದಾಯಿಕ ಉಡುಪಿನೊಂದಿಗೆ ತೆರಳಿದ್ದ ಕೊಡವರನ್ನು ತಡೆಯಲಾಗಿತ್ತು ಎಂದು ನ್ಯಾಯಾಲಯದ ಗಮನಕ್ಕೆ ತಂದರು. ವಾದವನ್ನು ಆಲಿಸಿದ ನ್ಯಾಯಾಧೀಶರು, ಕಟ್ಟೆಮಾಡು ಶ್ರೀ ಮೃತ್ಯುಂಜಯ ಮಹದೇವರ ದೇವಸ್ಥಾನಕ್ಕೆ ಭಾರತೀಯ ಸಂಸ್ಕೃತಿಯಂತೆ ಆಗಮಿಸುವ ಹಾಗೂ ಸಾಂಪ್ರದಾಯಿಕ ಉಡುಪು ಧರಿಸಿ ಬರುವ ಭಕ್ತರನ್ನು ತಡೆಯಬಾರದು ಎಂದು ಮಧ್ಯಂತರ ಆದೇಶವನ್ನು ನೀಡಿದೆ. ಈ ಕುರಿತು ಸಂಬಂಧಪಟ್ಟವರಿಗೆ ತಿಳಿಸಬೇಕೆಂದು ಜಿಲ್ಲಾ ಸಹಕಾರ ಸಂಘಗಳ ನೋಂದಣಾಧಿಕಾರಿಗಳಿಗೆ ಸೂಚನೆ ನೀಡಿದ್ದಲ್ಲದೇ, ಆದೇಶದ ಒಂದು ಪ್ರತಿಯನ್ನು ಸರ್ಕಾರದ ಅಡಿಷನಲ್ ಅಡ್ವೊಕೇಟ್ ಜನರಲ್ ಅವರಿಗೆ ಸಲ್ಲಿಸುವಂತೆ ಸೂಚಿಸಿ, ವಿಚಾರಣೆಯನ್ನು ಫೆ.27ಕ್ಕೆ ಮುಂದೂಡಿದರು.

ಕಳೆದ ಡಿಸೆಂಬರ್‌ನಲ್ಲಿ ನಡೆದ ಕಟ್ಟೆಮಾಡು ಶ್ರೀ ಮೃತ್ಯುಂಜಯ ಮಹದೇವರ ದೇವಸ್ಥಾನದ ವಾರ್ಷಿಕೋತ್ಸವಕ್ಕೆ ಸಾಂಪ್ರದಾಯಿಕ ಉಡುಪಿನಲ್ಲಿ ತೆರಳಿದ ಕೊಡವರು ಪ್ರವೇಶಿಸದಂತೆ ತಡೆಯಲಾಗಿತ್ತು. ಈ ಹಿನ್ನೆಲೆಯಲ್ಲಿ ಕೊಡವ ಸಂಘಟನೆಗಳು 'ಕಟ್ಟೆಮಾಡು ಚಲೋ' ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಕಟ್ಟೆಮಾಡುವಿನಲ್ಲಿ ಪ್ರಕ್ಷುಬ್ದ ವಾತಾವರಣ ನಿರ್ಮಾಣವಾದ ಹಿನ್ನೆಲೆಯಲ್ಲಿ ಜಿಲ್ಲಾಡಳಿತ ಆ ಪ್ರದೇಶದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿದೆ. ಮಾ.13ರವರೆಗೂ ನಿಷೇಧಾಜ್ಞೆ ವಿಸ್ತರಿಸಲಾಗಿದೆ.

ಕಾಡುಹಂದಿ ದಾಳಿ: ಮಹಿಳೆಗೆ ಗಾಯ


ಕಾಡುಹಂದಿ ದಾಳಿಯಿಂದ ಗಾಯಗೊಂಡ ಕಾರ್ಮಿಕ ಮಹಿಳೆ.

ಸುಂಟಿಕೊಪ್ಪ: ಇಲ್ಲಿನ ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿದ್ದ ಕಾರ್ಮಿಕ ಮಹಿಳೆ ಮೇಲೆ ಕಾಡುಹಂದಿ ದಾಳಿ ಮಾಡಿ ಗಾಯಗೊಳಿಸಿರುವ ಘಟನೆ ಬುಧವಾರ ನಡೆದಿದೆ.

ಸುಂಟಿಕೊಪ್ಪ ಟಾಟಾ ಕಾಫಿ ತೋಟದ ಕಾರ್ಮಿಕ ಮಹಿಳೆ ಸರಸ್ವತಿ ಕಾಡುಹಂದಿ ದಾಳಿಯಿಂದ ಗಾಯಗೊಂಡಿದ್ದು, ಈಕೆ ಬೆಳಗ್ಗೆ 7.30ರಲ್ಲಿ ತೋಟದಲ್ಲಿ ಕಾರ್ಮಿಕರೊಂದಿಗೆ ಕಾಫಿ ಕುಯ್ಯುತ್ತಿದ್ದರು. ಈ ವೇಳೆ ಏಕಾಏಕಿ ಕಾಡುಹಂದಿ ಸರಸ್ವತಿ ಮೇಲೆ ದಾಳಿ ನಡೆಸಿದೆ. ಜೊತೆಯಲ್ಲಿದ್ದ ಕಾರ್ಮಿಕರು ಕಾಡುಹಂದಿಯನ್ನು ಓಡಿಸಿ, ಸರಸ್ವತಿಯನ್ನು ರಕ್ಷಿಸಿದ್ದಾರೆ.

ತಕ್ಷಣ ಸ್ಥಳಕ್ಕೆ ಆಗಮಿಸಿದ ಸುಂಟಿಕೊಪ್ಪ ಗ್ರಾಪಂ ಸದಸ್ಯರಾದ ಕೆ.ಕೆ.ಪ್ರಸಾದ್ ಕುಟ್ಟಪ್ಪ ಹಾಗೂ ಕೆ.ಎಂ.ಆಲಿಕುಟ್ಟಿ ಗಾಯಾಳು ಮಹಿಳೆಯನ್ನು ಕರೆದೊಯ್ದು ಮಡಿಕೇರಿ ಜಿಲ್ಲಾ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಕೊಡಗು ಜಿಲ್ಲೆಯ ವಿವಿಧ ಭಾಗಗಳಲ್ಲಿ ಕಾಡಾನೆ ಹಾಗೂ ಹುಲಿ ದಾಳಿ ನಡೆಯುತ್ತಿದ್ದು, ಇದೀಗ ಕಾಡುಹಂದಿ ಹಾವಳಿ ಹೆಚ್ಚಾಗಿದೆ. ಇದರಿಂದ ಕಾರ್ಮಿಕರು ಹಾಗೂ ತೋಟದ ಮಾಲೀಕರಿಗೆ ಜೀವಭಯ ಉಂಟಾಗಿದೆ.

ಟಿಪ್ಪರ್ ಡಿಕ್ಕಿ: ಕಾರು ಚಾಲಕ ಸ್ಥಳದಲ್ಲೇ ಸಾವು


ಅಡ್ಡೇಂಗಡ ಸಜನ್

ಗೋಣಿಕೊಪ್ಪ, ಫೆ.12–ಮರಳು ತುಂಬಿದ ಟಿಪ್ಪರ್ ಡಿಕ್ಕಿ ಹೊಡೆದ ಪರಿಣಾಮ ಕಾರು ಚಾಲಕ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಬಾಳೆಲೆ ಸಮೀಪದ ಕೈನಾಟಿಯಲ್ಲಿ ಬುಧವಾರ ನಡೆದಿದೆ.

ಬಾಳೆಲೆ ಗ್ರಾಮದ ಅಡ್ಡೇಂಗಡ ಸಜನ್ (55) ಮೃತಪಟ್ಟ ಕಾರು ಚಾಲಕ. ಈತ ಸಂಜೆ ತಮ್ಮ ಕಾರಿನಲ್ಲಿ ಒಬ್ಬರೇ ಬಾಳೆಲೆಯಿಂದ ಗೋಣಿಕೊಪ್ಪಗೆ ಹೋಗುತ್ತಿದ್ದರು. ಇದೇ ವೇಳೆ ಗೋಣಿಕೊಪ್ಪದಿಂದ ಬಾಳೆಲೆಗೆ ಬರುತ್ತಿದ್ದ ಟಿಪ್ಪರ್ ಕೈನಾಟಿಯಲ್ಲಿ ಡಿಕ್ಕಿ ಹೊಡೆದಿದೆ. ಪರಿಣಾಮ ಸಜನ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಅಪಘಾತಕ್ಕೆ ಟಿಪ್ಪರ್ ಚಾಲಕನ ವೇಗದ ಚಾಲನೆಯೇ ಕಾರಣ ಎಂದು ಬಾಳೆಲೆ ವ್ಯಾಪ್ತಿಯ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ ಗೋಣಿಕೊಪ್ಪ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎನ್‌ಸಿಸಿ ಕೆಡೆಟ್ ಕ್ಯಾಪ್ಟನ್ ಕಿಶನ್‌ಗೆ ಸಿಎಂ ಪದಕ


ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಹೆಚ್.ಎಸ್.ಕಿಶನ್‌ಗೆ ಸಿಎಂ ಪರವಾಗಿ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಪ್ರಶಸ್ತಿ ಪ್ರದಾನ ಮಾಡಿದರು.

ಕುಶಾಲನಗರ: ಸಮೀಪದ ಹುಲುಸೆ ಗ್ರಾಮದ ಎನ್‌ಸಿಸಿ ಕೆಡೆಟ್ ಕ್ಯಾಪ್ಟನ್ ಹೆಚ್.ಎಸ್. ಕಿಶನ್‌ಗೆ ವಿಶೇಷ ಸಾಧನೆಗಾಗಿ ಮುಖ್ಯಮಂತ್ರಿಗಳ ಪ್ರಶಂಸೆ ಪದಕ ನೀಡಲಾಗಿದೆ.

ಈತ ಹೆಬ್ಬಾಲೆ ಗ್ರಾಪಂ ಸದಸ್ಯರಾದ ಹುಲುಸೆ ಗ್ರಾಮದ ಪ್ರಗತಿಪರ ಕೃಷಿಕ ಹೆಚ್.ಎನ್. ಶಿವನಂಜಪ್ಪ ಹಾಗೂ ಸರಿತಾ ದಂಪತಿ ಪುತ್ರ ಕಿಶನ್ ಮೈಸೂರಿನ ವಿದ್ಯಾವರ್ಧಕ ಇಂಜಿನಿಯರಿಂಗ್ ಕಾಲೇಜಿನಲ್ಲಿ ಎಲೆಕ್ಟ್ರಾನಿಕ್ಸ್ ವಿಭಾಗದಲ್ಲಿ ವ್ಯಾಸಂಗ ಮಾಡುತ್ತಿದ್ದು, ವಿದ್ಯಾರ್ಥಿ ದೆಸೆಯಿಂದಲೇ ಎನ್‌ಸಿಸಿ ತರಬೇತಿಯಲ್ಲಿ ಅಸಾಧಾರಣ ಪ್ರದರ್ಶನ ಮತ್ತು ಗಮನಾರ್ಹ ಕೊಡುಗೆ ನೀಡಿದ್ದಾನೆ.

ಇತ್ತೀಚೆಗೆ ಬೆಂಗಳೂರಿನ ಸೆಂಟ್ರಲ್ ಕಾಲೇಜಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿಗಳ ಪರವಾಗಿ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಪ್ರಶಸ್ತಿ ಪ್ರದಾನ ಮಾಡಿದರು.

ನವೋದಯ ಶಾಲೆ ವಿದ್ಯಾರ್ಥಿ ನಾಪತ್ತೆ


ಎಂ.ಅಮಿತ್

ಮಡಿಕೇರಿ: ಗಾಳಿಬೀಡು ಬಳಿಯ ನವೋದಯ ಶಾಲೆ ವಿದ್ಯಾರ್ಥಿ ಎಂ.ಅಮಿತ್ (17) ಮಂಗಳವಾರ ಶಾಲೆಯಿಂದ ನಾಪತ್ತೆಯಾಗಿದ್ದು, ಈ ಕುರಿತು ಮಡಿಕೇರಿ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಶಾಲೆ ಸಿಬ್ಬಂದಿ ಆನಂದ್ ಅವರ ಪುತ್ರ ಎಂ.ಅಮಿತ್ ಮಂಗಳವಾರ ಬೆಳಗ್ಗೆ 7 ಗಂಟೆಯಲ್ಲಿ ಶಾಲಾ ಆವರಣದಲ್ಲಿರುವ ಸಿಬ್ಬಂದಿ ವಸತಿಗೃಹದಿಂದ ಶಾಲೆಗೆಂದು ತೆರಳಿದ್ದಾನೆ. 11 ಗಂಟೆಗೆ ಅಮಿತ್ ಶಾಲೆಯ ಮುಖ್ಯ ದ್ವಾರದ ಮೂಲಕ ರಸ್ತೆ ಕಡೆಗೆ ಬಂದಿದ್ದಾನೆ. ಇದನ್ನು ಕಂಡ ಅಲ್ಲಿನ ಸೆಕ್ಯುರಿಟಿ ಅಮಿತ್ ಅವರ ತಂದೆ ಆನಂದ್ ಅವರಿಗೆ ಕರೆ ಮಾಡಿ ತಿಳಿಸಿದ್ದಾರೆ. ತಕ್ಷಣ ಆನಂದ್ ರಸ್ತೆ ಕಡೆಗೆ ಬಂದಿದ್ದು, ಅಮಿತ್ ಮಾತ್ರ ಕಂಡು ಬರಲಿಲ್ಲ. ಈ ಕುರಿತು ಆನಂದ್ ಮಡಿಕೇರಿ ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆ.

ಕೂಟುಹೊಳೆಯಲ್ಲಿ ಶೋಧ: ಶಾಲೆ ಮುಂಭಾಗದ ಕೂಟುಹೊಳೆಯಲ್ಲಿ ಅಮಿತ್‌ನ ಚಪ್ಪಲಿ ಪತ್ತೆಯಾದ ಹಿನ್ನೆಲೆಯಲ್ಲಿ ಪೊಲೀಸರು ಹಾಗೂ ಅಗ್ನಿ ಶಾಮಕ ದಳದ ಸಿಬ್ಬಂದಿ ಕೂಟುಹೊಳೆಯಲ್ಲಿ ಬೋಟ್ ಮೂಲಕ ಶೋಧ ನಡೆಸಿದರು.

ಸಾಲಬಾಧೆಗೆ ಕೂಲಿ ಕಾರ್ಮಿಕ ಮಹಿಳೆ ಆತ್ಮಹತ್ಯೆ


ಹಸೀನಾ

ಮಡಿಕೇರಿ: ಸಾಲಬಾಧೆ ತಾಳಲಾರದೆ ಕೂಲಿ ಕಾರ್ಮಿಕ ಮಹಿಳೆ ಮನೆಯ ಬಾತ್‌ರೂಮ್‌ನಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಶನಿವಾರಸಂತೆಯಲ್ಲಿ ಬುಧವಾರ ನಡೆದಿದೆ.

ಶನಿವಾರಸಂತೆ ಗುಂಡೂರಾವ್ ಬಡಾವಣೆಯ ನಿವಾಸಿ ಹಸೀನಾ (50) ಆತ್ಮಹತ್ಯೆ ಮಾಡಿಕೊಂಡ ಕೂಲಿ ಕಾರ್ಮಿಕ ಮಹಿಳೆ. ಈಕೆ ಪತಿ ಹಾಗೂ ಮಕ್ಕಳೊಂದಿಗೆ ಬಾಡಿಗೆ ಮನೆಯಲ್ಲಿ ವಾಸವಿದ್ದು, ಕೂಲಿ ಕೆಲಸ ಮಾಡಿಕೊಂಡಿದ್ದಳು. ಮೂರು ನಾಲ್ಕು ಸಂಘಗಳಲ್ಲಿ ಸಾಲ ಮಾಡಿಕೊಂಡಿದ್ದು, ತಿಂಗಳಿಗೆ 40 ಸಾವಿರ ರೂ. ಕಂತು ಪಾವತಿಸುತ್ತಿದ್ದರು ಎನ್ನಲಾಗಿದೆ.

ಬುಧವಾರ ಮನೆಯ ಬಾತ್‌ರೂಮ್‌ನಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಗಾರೆ ಕೆಲಸಕ್ಕೆ ತೆರಳಿದ ಪತಿ ಮನೆಗೆ ಬಂದು ನೋಡಿದಾಗ ಆತ್ಮಹತ್ಯೆ ಮಾಡಿಕೊಂಡಿರುವುದು ಪತ್ತೆಯಾಗಿದೆ. ಮೃತ ಮಹಿಳೆಗೆ ಮೂವರು ಮಕ್ಕಳಿದ್ದು, ಪುತ್ರಿಯನ್ನು ಕೇರಳಕ್ಕೆ ಮದುವೆ ಮಾಡಲಾಗಿದೆ. ಇಬ್ಬರು ಪುತ್ರರು ವ್ಯಾಸಂಗ ಮಾಡುತ್ತಿದ್ದಾರೆ. ಈ ಸಂಬಂಧ ಶನಿವಾರಸಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಫೆ.15, 16, ಮುತ್ತಪ್ಪಸ್ವಾಮಿ ತೆರೆ ಮಹೋತ್ಸವ

ಕುಶಾಲನಗರ: ಇಲ್ಲಿನ ಬೈಚನಹಳ್ಳಿ ಯೋಗಾನಂದ ಬಡಾವಣೆಯ ಕಾವೇರಿ ನದಿದಂಡೆಯಲ್ಲಿ ನೆಲೆಸಿರುವ ಶ್ರೀ ಮುತ್ತಪ್ಪಸ್ವಾಮಿ ದೇವಾಲಯದಲ್ಲಿ ಮುತ್ತಪ್ಪಸ್ವಾಮಿ ಸೇವಾ ಟ್ರಸ್ಟ್ ವತಿಯಿಂದ ಫೆ.15 ಮತ್ತು 16ರಂದು ಮುತ್ತಪ್ಪ ತೆರೆ ಮಹೋತ್ಸವ ನಡೆಯಲಿದೆ. ಶನಿವಾರ ಮುಂಜಾನೆ 5.30ಕ್ಕೆ ಗಣಪತಿ ಹೋಮ, ಬೆಳಗ್ಗೆ 10.30ಕ್ಕೆ ಧ್ವಜಾರೋಹಣ, ಮಧ್ಯಾಹ್ನ 2 ಗಂಟೆಗೆ ಮುತ್ತಪ್ಪನ ಮಲೈ ಇರಕ್ಕಲ್, ಸಂಜೆ 4 ಗಂಟೆಗೆ ಕೇರಳದ ಪ್ರಖ್ಯಾತ ಚಂಡೆವಾದಕರ ವಾದ್ಯ ಘೋಷದೊಂದಿಗೆ ನೂರಾರು ಮಹಿಳೆಯರು ಜ್ಯೋತಿ ಬೆಳಗಿಸಿ ಅಯ್ಯಪ್ಪ ದೇವಸ್ಥಾನದಿಂದ ನಗರದ ಪ್ರಮುಖ ಬೀದಿಗಳಲ್ಲಿ ತಾಲಿಪೋಲಿ ಮೆರವಣಿಗೆ ನಡೆಸಲಿದ್ದಾರೆ.

ಭಾನುವಾರ ರಾತ್ರಿ 7.30 ಅನ್ನಸಂತರ್ಪಣೆ, 8 ಗಂಟೆಗೆ ಸಾಂಸ್ಕೃತಿಕ ಕಾರ್ಯಕ್ರಮ, 11 ಗಂಟೆಗೆ ಕಳಿಗ ಪಾಟು, ಮಧ್ಯರಾತ್ರಿ 12 ಗಂಟೆಗೆ ಕಳಸ ಆಗಮನ, ಸೋಮವಾರ ಮುಂಜಾನೆ 5 ಗಂಟೆಗೆ ತಿರುವಪ್ಪನ ವೆಳ್ಳಾಟಂ, ಮಧ್ಯಾಹ್ನ 12.30ಕ್ಕೆ ಅನ್ನದಾನ ನಡೆಯಲಿದೆ ಎಂದು ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ವರದ ತಿಳಿಸಿದ್ದಾರೆ.

ವಿರಾಜಪೇಟೆಯಲ್ಲಿ ಸಂತ ಅನ್ನಮ್ಮ ದೇವಾಲಯ ವಾರ್ಷಿಕೋತ್ಸವ


ಸಂತ ಅನ್ನಮ್ಮ ದೇವಾಲಯ ವಾರ್ಷಿಕೋತ್ಸವ ಅಂಗವಾಗಿ ಮೆರವಣಿಗೆ ನಡೆಸಲಾಯಿತು.

ವಿರಾಜಪೇಟೆ, ಫೆ.12–ನಗರದ ಸಂತ ಅನ್ನಮ್ಮ ದೇವಾಲಯ ವಾರ್ಷಿಕೋತ್ಸವ ಹಾಗೂ ಜೂಬಿಲಿ ಪ್ರಯುಕ್ತ ನಾಲ್ಕು ದಿನ ವಿಶೇಷ ಪ್ರಾರ್ಥನೆ ನಡೆದವು.

ಫೆ.8ರಂದು ಪೊನ್ನಂಪೇಟೆ ಧರ್ಮ ಕೇಂದ್ರದ ವಂ.ಫಾ.ಡೇವಿಡ್ ಸಗಾಯ ರಾಜ್ ಧ್ವಜಾರೋಹಣ ನೆರವೇರಿಸಿದರು. ನಂತರ ಬಲಿ ಪೂಜೆ ಮತ್ತು ಪ್ರಬೋಧನೆ ನಡೆಯಿತು. 9ರಂದು ಮಡಿಕೇರಿ ಸಂತ ಮೈಕಲರ ವಿದ್ಯಾಸಂಸ್ಥೆಗಳ ವ್ಯವಸ್ಥಾಪಕ ವಂ.ಫಾ.ಸಂಜಯ್ ಕುಮಾರ್ ಗಾಯನ ಹಾಗೂ ಮಕ್ಕಳಿಗೆ ಪ್ರಥಮ ಪರಮ ಪ್ರಸಾದ ಸಂಸ್ಕಾರ ನಡೆಸಿಕೊಟ್ಟರು. 10ರಂದು ಸುಂಟಿಕೊಪ್ಪ ಸಂತ ಅಂತೋಣಿ ದೇವಾಲಯದ ವಂ.ಫಾ. ವಿಜಯ್ ಕುಮಾರ್ ಅವರಿಂದ ಬಲಿ ಪೂಜೆ ನಡೆಯಿತು. ಮಂಗಳವಾರ ಸಂಜೆ ದೇವಾಲಯದಲ್ಲಿ ಆಡಂಬರ ಗಾಯನ, ಬಲಿ ಪೂಜೆಯನ್ನು ಕೆ.ಆರ್.ಪೇಟೆ ಬಾಲಯೇಸು ಧರ್ಮ ಕೇಂದ್ರದ ವಂ.ಫಾ.ಪೌಲೂಸ್ ತೋಮಸ್ ಹಾಗೂ ಸಹಗುರುಗಳು ನಡೆಸಿಕೊಟ್ಟರು.

ನಂತರ ಲೂರ್ದು ಮಾತೆ ಮತ್ತು ಸಂತ ಅನ್ನಮ್ಮರ ಮೂರ್ತಿಯನ್ನು ವಿದ್ಯುತ್ ಅಲಂಕೃತ ಮಂಟಪಗಳಲ್ಲಿ ಪಟ್ಟಣದ ಮುಖ್ಯ ಬೀದಿಗಳಲ್ಲಿ ವಿಜೃಂಭಣೆಯ ಮೆರವಣಿಗೆ ನಡೆಸಲಾಯಿತು. ಸಂತ ಅನ್ನಮ್ಮ ದೇವಾಲಯದಿಂದ ಕ್ರೈಸ್ತರು ಮಂಟಪಗಳೊಂದಿಗೆ ಮೇಣದ ಬತ್ತಿ ಹಿಡಿದು ಸಾಗಿದರು. ಚರ್ಚ್ ರಸ್ತೆಯಿಂದ ದೇವಂಗ, ದಕನಿ ಮೊಹಲ್ಲಾ, ತೆಲುಗು, ಜೈನ, ಗಡಿಯಾರ ಕಂಬದ ಮಾರ್ಗವಾಗಿ ಖಾಸಗಿ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ಸುಣ್ಣದ ಬೀದಿ, ದೊಡ್ಡಟ್ಟಿ ಚೌಕಿವರೆಗೆ ಮೆರವಣಿಗೆ ನಡೆಸಲಾಯಿತು.

ಇದೇ ವೇಳೆ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಮೈಸೂರು, ಮಡಿಕೇರಿ, ಕುಶಾಲನಗರ, ಕೂಡಿಗೆ, ಸುಂಟಿಕೊಪ್ಪ, ಸಿದ್ದಾಪುರ, ಅಮ್ಮತ್ತಿ, ಪಾಲಿಬೆಟ್ಟ, ಮಾದಪುರ, ಪೊನ್ನಂಪೇಟೆ ಸೇರಿದಂತೆ ಕೊಡಗಿನ ವಿವಿಧೆಡೆಯಿಂದ ಕ್ರಿಶ್ಚಿಯನ್ ಧರ್ಮಗುರುಗಳು ಭಾಗವಹಿಸಿದ್ದರು.

ವಿಜೃಂಭಣೆಯ ಓಂಕಾರ ಸಿದ್ದೇಶ್ವರಸ್ವಾಮಿ ರಥೋತ್ಸವ


ಯಡವನಹಳ್ಳಿಯಲ್ಲಿ ಓಂಕಾರ ಸಿದ್ದೇಶ್ವರಸ್ವಾಮಿ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ಬೇಗೂರು: ತಾಲೂಕಿನ ಯಡವನಹಳ್ಳಿ ಗ್ರಾಮದ ಓಂಕಾರ ಸಿದ್ದೇಶ್ವರಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಜಾತ್ರಾ ಮಾಳಕ್ಕೆ ಬೆಳಗ್ಗೆಯಿಂದಲೇ ಭಕ್ತರ ಸಮೂಹ ಹರಿದು ಬಂತು. ಹೊರೆಯಾಲ ಗ್ರಾಮದಲ್ಲಿ ಕಟ್ಟಿದ ತೇರನ್ನು ಎಳೆದು ಯಡವನಹಳ್ಳಿ ಗ್ರಾಮದ ಅಂಕದ ಬಳಿ ನಿಲ್ಲಿಸಲಾಯಿತು. ಬಳಿಕ ಮಧ್ಯಾಹ್ನ ಯಡವನಹಳ್ಳಿ ತೇರು ಹಾಗೂ ಅರೇಪುರ ಪಲ್ಲಕ್ಕಿ ಜೊತೆ ಜಾತ್ರಾ ಮಾಳಕ್ಕೆ ತೆರಳಿದವು. ಇವುಗಳೊಂದಿಗೆ ಹೊಸಪುರ ಗ್ರಾಮದ ತೇರು ಸೇರಿದಂತೆ ಹೊರೆಯಾಲ, ಯಡವನಹಳ್ಳಿ ತೇರು, ಅರೇಪುರ ಹಾಗೂ ಕೂಗಲೂರು ಪಲ್ಲಕ್ಕಿಗಳನ್ನು ಭಕ್ತರು ದೇವಸ್ಥಾನದ ಸುತ್ತ ಎಳೆದರು.

ಸವಿತಾ ಮಹರ್ಷಿ ಜಯಂತಿ ಅರ್ಥಪೂರ್ಣ ಆಚರಣೆ


ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಸವಿತಾ ಮಹರ್ಷಿ ಜಯಂತಿ ಕಾರ್ಯಕ್ರಮವನ್ನು ಅಪರ ಜಿಲ್ಲಾಧಿಕಾರಿ ಗೀತಾ ಹುಡೇದಾ ಉದ್ಘಾಟಿಸಿದರು.


ಚಾಮರಾಜನಗರ, ಫೆ.12–ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಗರದಲ್ಲಿ ಸವಿತಾ ಮಹರ್ಷಿ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸರಳವಾಗಿ ಆಯೋಜಿಸಿದ್ದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದಾ, ಸವಿತಾ ಮಹರ್ಷಿಗಳು ಸಂಗೀತ, ವೇದಗಳಲ್ಲಿ ಅಪಾರ ಜ್ಞಾನ ಹೊಂದಿದ್ದರು. ಸಂಗೀತಾ ಶಾಸ್ತ್ರಕ್ಕೆ ಸಂಬಂಧಿಸಿದ ಸಾಮವೇದವನ್ನು ಸವಿತಾ ಮಹರ್ಷಿಗಳು ರಚಿಸಿದ್ದಾರೆ ಎಂದು ಸ್ಮರಿಸಿದರು.

ಸವಿತಾ ಮಹರ್ಷಿಗಳು ಆರಂಭದಲ್ಲಿ ವೈದ್ಯ ವೃತ್ತಿ ಮಾಡುತ್ತಿದ್ದರು ಎಂಬುದಾಗಿ ತಿಳಿದು ಬರುತ್ತದೆ. ಪ್ರತಿಯೊಂದು ವೃತ್ತಿಗೂ ತನ್ನದೇ ಗೌರವವಿದೆ. ವೃತ್ತಿ ಧರ್ಮವನ್ನು ಗೌರವಿಸುವುದು ಮುಖ್ಯ ಎಂದರು.

ಕಾರ್ಯಕ್ರಮದಲ್ಲಿ ಡಿವೈಎಸ್‌ಪಿ ಲಕ್ಷ್ಮಯ್ಯ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಉದಯ್ ಕುಮಾರ್, ಸಮಾಜದ ಮುಖಂಡರು, ವಿವಿಧ ಸಂಘಟನೆಗಳ ಅಧ್ಯಕ್ಷರು, ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ವೈ.ಎಂ.ನಂಜಯ್ಯ ನಿಧನ



ಯಳಂದೂರು: ಪಟ್ಟಣದ ಬಳೇಪೇಟೆ ನಿವಾಸಿ, ನಿವೃತ್ತ ತಹಸೀಲ್ದಾರ್ ವೈ.ಎಂ.ನಂಜಯ್ಯ (63) ಹೃದಯಾಘಾತದಿಂದ ಮಂಗಳವಾರ ರಾತ್ರಿ ನಿಧನರಾದರು.

ವೈ.ಎಂ.ನಂಜಯ್ಯ ಅವರು ಕಂದಾಯ ಇಲಾಖೆಯಲ್ಲಿ ಉಪತಹಸೀಲ್ದಾರ್, ತಹಸೀಲ್ದಾರ್ ಆಗಿ ಯಳಂದೂರು, ಚಾಮರಾಜನಗರ ಸೇರಿದಂತೆ ಇತರೆಡೆ ಕರ್ತವ್ಯ ನಿರ್ವಹಿಸಿದ್ದಾರೆ. ಮೃತರು ಪತ್ನಿ, ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗ ಅಗಲಿದ್ದಾರೆ. ಮೃತರ ಜಮೀನಿನಲ್ಲಿ ಬುಧವಾರ ಅಂತ್ಯಕ್ರಿಯೆ ನೆರವೇರಿತು.

ಆದಿ ಕರ್ನಾಟಕ ಸಮುದಾಯ ಮುಖಂಡರ ನಿಂದನೆ ಆರೋಪ

ತಹಸೀಲ್ದಾರ್, ಪಿಎಸ್ಐ ವಿರುದ್ಧ ಕ್ರಮಕ್ಕೆ ಆಗ್ರಹ

ಪ್ರತಿಭಟನಾ ಸ್ಥಳಕ್ಕೆ ಡಿಸಿ, ಎಸ್ಪಿ ಭೇಟಿ, ಮುಖಂಡರ ಮನವೊಲಿಕೆ


ಕೊಳ್ಳೇಗಾಲದಲ್ಲಿ ಪ್ರತಿಭಟನೆ ನಡೆಸಿದ ಆದಿ ಕರ್ನಾಟಕದ ಮುಖಂಡರೊಂದಿಗೆ ಜಿಲ್ಲಾಧಿಕಾರಿ ಶಿಲ್ಪಾನಾಗ್ ಮಾತನಾಡಿದರು.

ಕೊಳ್ಳೇಗಾಲ, ಫೆ.12– ತಹಸೀಲ್ದಾರ್ ಬಸವರಾಜು ಹಾಗೂ ಗ್ರಾಮಾಂತರ ಠಾಣೆ ಪಿಎಸ್‌ಐ ಸುಪ್ರೀತ್ ಅವರು ಸರಗೂರು ಗ್ರಾಮದ ಆದಿ ಕರ್ನಾಟಕದ ಜನರ ಮೇಲೆ ದರ್ಪ ತೋರಿದ್ದಾರೆ. ಅಗೌರದಿಂದ ನಡೆದುಕೊಂಡಿರುವ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ವಿವಿಧ ದಲಿತ ಪರ ಸಂಘಟನೆಗಳು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದವು.

ಪಟ್ಟಣದ ಭೀಮನಗರ ಸಾವಿತ್ರಿ ಬಾಯಿ ಫುಲೆ ರಂಗಮಂದಿರದ ಬಳಿ ಸಮಾವೇಶಗೊಂಡ ಸರಗೂರು ಗ್ರಾಮದ ಆದಿ ಕರ್ನಾಟಕ ಜನಾಂಗದ ಯಜಮಾನರು, ಮುಖಂಡರು, ಗಡಿಮನೆ ಹಾಗೂ ಕಟ್ಟೆಮನೆ, ವಿವಿಧ ದಲಿತ, ಅಂಬೇಡ್ಕರ್ ಸಂಘಟನೆಗಳು, ಛಲವಾದಿ ಮಹಾಸಭಾ ಪದಾಧಿಕಾರಿಗಳು, ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಿ ತಹಸೀಲ್ದಾರ್ ಹಾಗೂ ಪಿಎಸ್‌ಐ ವಿರುದ್ಧ ಘೋಷಣೆ ಕೂಗಿದರು. ಬಳಿಕ ತಾಲೂಕು ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಈ ವೇಳೆ ಮುಖಂಡ ಶಿವಶಂಕರ್ ಮಾತನಾಡಿ, ಸರಗೂರಿನ ಕಾವೇರಿ ತೀರದ ಸ.ನಂ: 215/ಬಿನಲ್ಲಿರುವ ಸರ್ಕಾರದ ಜಾಗವನ್ನು ಕೃಷ್ಣಪ್ಪ ಎಂಬುವರು ಒತ್ತುವರಿ ಮಾಡಿಕೊಂಡು, ಈ ಸ್ಥಳವನ್ನು ಸ್ನಾನಘಟ್ಟ ಎಂದು ಕರೆಯಲಾಗುತ್ತದೆ. ಇಲ್ಲಿ ಆದಿ ಕರ್ನಾಟಕ ಜನಾಂಗದವರು ಮಡೆ ಹಬ್ಬ, ಪೂಜಾ ಕೈಂಕರ್ಯ ಮಾಡುವ ವಾಡಿಕೆ ಇದೆ. ಆದರೆ, ಈ ಜಾಗ ಒತ್ತುವರಿ ಆಗಿರುವ ಸಂಬಂಧ ಈಗಾಗಲೇ ಜನಾಂಗದವರು ನ್ಯಾಯಾಂಗ ಹೋರಾಟ ನಡೆಸಿದ್ದಾರೆ. ಈ ಮೂಲಕ ಸರ್ಕಾರಿ ಜಾಗವನ್ನು ನಾವು ಉಳಿಸಿದ್ದೇವೆ ಎಂದರು.

ಈ ಜಾಗವನ್ನು ಕಾಪಾಡಲು ಗ್ರಾಮಸ್ಥರು ಇತ್ತೀಚೆಗೆ ತೆಗೆಸಿದ್ದ ಟ್ರಂಚ್ ಅನ್ನು ತಹಸೀಲ್ದಾರ್ ಐ.ಇ.ಬಸವರಾಜು ಹಾಗೂ ಗ್ರಾಮಾಂತರ ಠಾಣೆ ಸಬ್ ಇನ್ಸ್‌ಪೆಕ್ಟರ್ ಎಸ್.ಎ.ಸುಪ್ರೀತ್ ಮುಚ್ಚಿಸಿ ಗ್ರಾಮಸ್ಥರ ಮೇಲೆ ದೌರ್ಜನ್ಯ ಎಸಗಿ ನಿಂದಿಸಿದ್ದಾರೆ. ಹಾಗಾಗಿ ಇವರ ವಿರುದ್ಧ ಕ್ರಮ ಕೈಗೊಳ್ಳಬೇಕು. ಗ್ರಾಮಸ್ಥರ ಮೇಲೆ ದರ್ಪ ತೋರಿದ ಅಧಿಕಾರಿಗಳನ್ನು ಕೂಡಲೇ ಅಮಾನತು ಮಾಡಬೇಕು ಎಂದ ಆಗ್ರಹಿಸಿದರು.

ಈ ವೇಳೆ ಪ್ರತಿಭಟನಾ ಸ್ಥಳಕ್ಕೆ ತೆರಳಿದ ಉಪವಿಭಾಗಾಧಿಕಾರಿ ಮಹೇಶ್, ಮನವಿ ಸ್ವೀಕರಿಸಲು ಮುಂದಾದರು. ಆದರೆ, ಪ್ರತಿಭಟನಾಕಾರರು ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸ್ಥಳಕ್ಕೆ ಆಗಮಿಸುವವರೆಗೂ ಪ್ರತಿಭಟನೆ ಮುಂದುವರೆಸುವುದಾಗಿ ಪಟ್ಟುಹಿಡಿದರು.

> **"ಈಗಾಗಲೇ ತಹಸೀಲ್ದಾರ್ ರಜೆ ಮೇಲೆ ತೆರಳಿದ್ದಾರೆ. ರಜೆ ಮುಗಿದ ಬಳಿಕ ಪ್ರಕರಣ ಕುರಿತು ಅವರಿಂದ ಮಾಹಿತಿ ಪಡೆದು ಕ್ರಮ ವಹಿಸಲಾಗುವುದು. ಅದೇ ರೀತಿ ಪಿಎಸ್ಐ ಸುಪ್ರೀತ್ ಅವರ ವಿರುದ್ಧವೂ ವಿಚಾರಣೆ ನಡೆಸಲಾಗುವುದು. ಒಟ್ಟಾರೆ ಜಾತಿ ನಿಂದನೆ ಪ್ರಕರಣ ದಾಖಲು ಮಾಡಲು ಆಗದು. ಹಾಗಾಗಿ ಅಧಿಕಾರಿಗಳು ನಿಂದಿಸಿರುವುದು, ತಪ್ಪಾಗಿ ಮಾತನಾಡಿರುವುದು ಆಡಿಯೋ ಅಥವಾ ವಿಡಿಯೋ ಇದ್ದರೆ ನೀಡಿದರೆ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಲಾಗುವುದು.**
> **–ಶಿಲ್ಪಾನಾಗ್, ಜಿಲ್ಲಾಧಿಕಾರಿ**

ಪ್ರತಿಭಟನಾ ಸ್ಥಳಕ್ಕೆ ಅಪರ ಜಿಲ್ಲಾಧಿಕಾರಿ ಗೀತಾ ಹುಡೇದಾ ಆಗಮಿಸಿದರು. ಆದರೆ, ಡಿಸಿ, ಎಸ್ಪಿ ಬರಲೇಬೇಕೆಂದು ಪ್ರತಿಭಟನಾಕಾರರು ಪಟ್ಟುಹಿಡಿದು ಧರಣಿ ಮುಂದುವರೆಸಿದರು. ಬಳಿಕ ಜಿಲ್ಲಾಧಿಕಾರಿ ಶಿಲ್ಪಾನಾಗ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕವಿತಾ ಆಗಮಿಸಿ, ಪ್ರತಿಭಟನಾಕಾರರ ಅಹವಾಲು ಆಲಿಸಿ, ನ್ಯಾಯ ದೊರಕಿಸಿಕೊಡುವುದಾಗಿ ಭರವಸೆ ನೀಡಿದದರು. ನಂತರ ಪ್ರತಿಭಟನೆ ಹಿಂಪಡೆಯಲಾಯಿತು.

ಪ್ರತಿಭಟನೆಯಲ್ಲಿ ಸರಗೂರು ಗ್ರಾಮದ ಯಜಮಾನರಾದ ಶಿವಶಂಕರ್, ಮಲ್ಲು, ಶಿವಕುಮಾರ್, ಪುಟ್ಟಸ್ವಾಮಿ, ಪುಟ್ಟಮಾದ, ಮಹೇಶ್, ರಂಗಸ್ವಾಮಿ, ಮಲ್ಲ, ಛಲವಾದಿ ಮಹಾಸಭಾ ರಾಜ್ಯ ಉಪಾಧ್ಯಕ್ಷ ಬಸವರಾಜು ಕೊಳ್ಳೇಗಾಲ ಭೀಮನಗರದ ಯಜಮಾನ ಚಿಕ್ಕಮಾಳಿಗೆ, ಸಿದ್ಧಾರ್ಥ, ರಾಜಶೇಖರ್, ಪಾಪಣ್ಣ, ಲಿಂಗರಾಜು, ಸನತ್ ಕುಮಾರ್, ನಟರಾಜು, ಮುಳ್ಳೂರು ಶಿವಮಲ್ಲು, ಪಾಳ್ಯ ಪರಮೇಶ್, ದೊಡ್ಡಿಂದುವಾಡಿ ಸಿದ್ದರಾಜು, ವಕೀಲ ಬಸವರಾಜು, ಪ್ರಕಾಶ್, ಗ್ರಾಪಂ ಸದಸ್ಯ ಮುರುಳಿಧರನ್ ಭಾಗವಹಿಸಿದ್ದರು.

ಮಾದಕ ವಸ್ತು ಸೇವನೆ ದುಷ್ಪರಿಣಾಮ ಜಾಗೃತಿ ಅಗತ್ಯ

ಭಾಷಣ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಿದ ಜಿಲ್ಲಾಧಿಕಾರಿ ಶಿಲ್ಪನಾಗ್


ಭಾಷಣ ಸ್ಪರ್ಧೆ ವಿಜೇತ ವಿದ್ಯಾರ್ಥಿಗಳಿಗೆ ಡಿಸಿ ಶಿಲ್ಪನಾಗ್ ಬಹುಮಾನ ವಿತರಿಸಿದರು.

ಚಾಮರಾಜನಗರ, ಫೆ.12–ಆರೋಗ್ಯಕ್ಕೆ ಮಾರಕವಾಗಿರುವ ಮಾದಕ ದ್ರವ್ಯ, ಧೂಮಪಾನ, ತಂಬಾಕು ಸೇವನೆಯಂತಹ ಚಟಗಳನ್ನು ತ್ಯಜಿಸಬೇಕು. ಈ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸುವುದು ಅಗತ್ಯವಿದೆ ಎಂದು ಜಿಲ್ಲಾಧಿಕಾರಿ ಶಿಲ್ಪನಾಗ್ ತಿಳಿಸಿದರು.

ನಗರದ ಜೆ.ಹೆಚ್.ಪಟೇಲ್ ಸಭಾಂಗಣದಲ್ಲಿ ಜಿಲ್ಲಾ ಪೊಲೀಸ್ ಘಟಕದ ವತಿಯಿಂದ ಮಾದಕ ವಸ್ತು ಸೇವನೆ ದುಷ್ಪರಿಣಾಮಗಳ ಕುರಿತು ಪ್ರೌಢಶಾಲಾ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ ಭಾಷಣ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಿ ಮಾತನಾಡಿದ ಅವರು, ಮಾದಕ ದ್ರವ್ಯ ಕೆಟ್ಟ ಚಟಗಳಿಂದ ಚಿಕ್ಕವಯಸ್ಸಿನಲ್ಲೇ ಸಾವಿಗೀಡಾಗುವುದನ್ನು ಇಂದು ನಾವು ಕಾಣುತ್ತಿದ್ದೇವೆ. ಇದರಿಂದ ಕುಟುಂಬಗಳು ತೊಂದರೆ ಅನುಭವಿಸುವುದನ್ನು ನೋಡುತ್ತಿದ್ದೇವೆ. ಮಾದಕ ವಸ್ತುಗಳು ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದ್ದು, ಇದರ ಸೇವನೆಯಿಮದ ರೋಗನಿರೋಧಕ ಶಕ್ತಿ ಕುಂದುತ್ತಿದೆ. ದುಶ್ಚಟಗಳಿಂದ ದೂರವಾದರೆ ಉತ್ತಮ ಬದುಕು ಸಾಗಿಸಬಹುದು ಎಂದು ಸಲಹೆ ನೀಡಿದರು.

ಜಿಲ್ಲಾ ಪಂಚಾಯಿತಿ ಸಿಇಓ ಮೋನಾ ರೋತ್ ಮಾತನಾಡಿ, ಭಾಷಣ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ಆಸಕ್ತಿಯಿಂದ ಭಾಗವಹಿಸಿದ್ದಾರೆ. ಮುಂಬರುವ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಿ ಜಿಲ್ಲೆಗೆ ಕೀರ್ತಿ ತರಬೇಕು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಬಿ.ಟಿ.ಕವಿತಾ ಮಾತನಾಡಿ, ಇಂತಹ ಕಾರ್ಯಕ್ರಮ ಆಯೋಜಿಸಿರುವುದು ತೃಪ್ತಿ ತಂದಿದೆ. ವಿದ್ಯಾರ್ಥಿಗಳಿಗೆ ಸರಿಯಾದ ಹಾದಿ ಯಾವುದು ಎಂಬುದನ್ನ ತಿಳಿಸಬೇಕು. ಪ್ರೌಢಶಾಲಾ, ಪಿಯುಸಿ ಹಂತದ ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ಸೇವನೆಯ ದುಷ್ಪರಿಣಾಮ ಕುರಿತು ಪೊಲೀಸ್ ಇಲಾಖೆಯಿಂದ ಭಾಷಣ ಸ್ಪರ್ಧೆ ಮೂಲಕ ಜಾಗೃತಿ ಮೂಡಿಸುವ ವಿಶೇಷ ಕಾರ್ಯಕ್ರಮ ಏರ್ಪಡಿಸಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ಪದವಿಪೂರ್ವ ಶಿಕ್ಷಣ ಇಲಾಖೆ ಉಪನಿರ್ದೇಶಕ ಮಂಜುನಾಥ ಪ್ರಸನ್ನ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್.ಶಶಿಧರ್, ಡಿವೈಎಸ್‌ಪಿ ಲಕ್ಷ್ಮಯ್ಯ, ತೀರ್ಪುಗಾರರಾದ ಉಪನ್ಯಾಸಕಿ ಜಿ.ಶಾಲಿನಿ ಕುಮಾರಿ, ಸಹ ಪ್ರಾಧ್ಯಾಪಕ ಎಂ.ಕೆ.ಮಂಜುನಾಥ್ ಉಪಸ್ಥಿತರಿದ್ದರು.

ಡಿಕ್ಕಿ ಹೊಡೆದ ಗೂಡ್ಸ್ ವಾಹನ ಪತ್ತೆಗೆ ಏಕಾಂಗಿ ಪ್ರತಿಭಟನೆ


ಚಾ.ನಗರದ ಜಿಲ್ಲಾಡಳಿತ ಭವನ ಆವರಣದಲ್ಲಿ ಸಿದ್ದಯ್ಯನಪುರ ಗ್ರಾಮದ ನಿವಾಸಿ ಕೆ.ರಾಜು ಏಕಾಂಗಿ ಪ್ರತಿಭಟನೆ ನಡೆಸಿದರು.

ಚಾಮರಾಜನಗರ: ಕಳೆದ 2022ರಲ್ಲಿ ನನ್ನ ಬೈಕ್‌ಗೆ ಡಿಕ್ಕಿ ಹೊಡೆದ ಗೂಡ್ಸ್ ವಾಹನವನ್ನು ಪತ್ತೆ ಮಾಡುವಂತೆ ಕೊಳ್ಳೇಗಾಲ ಪಟ್ಟಣ ಪೊಲೀಸ್ ಠಾಣೆಗೆ ದೂರು ನೀಡಿದ್ದರೂ, ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿ ನಗರದ ಜಿಲ್ಲಾಡಳಿತ ಭವನದ ಆವರಣದಲ್ಲಿ ಕೊಳ್ಳೇಗಾಲ ತಾಲೂಕಿನ ಸಿದ್ದಯ್ಯನಪುರ ಗ್ರಾಮದ ನಿವಾಸಿ ಕೆ.ರಾಜು ಏಕಾಂಗಿ ಪ್ರತಿಭಟನೆ ನಡೆಸಿದರು.

ನಾನು ಕಳೆದ 2022ರಲ್ಲಿ ಸ್ವಗ್ರಾಮ ಸಿದ್ದಯ್ಯನಪುರದಿಂದ ಕೊಳ್ಳೇಗಾಲಕ್ಕೆ ಬೈಕ್‌ನಲ್ಲಿ ತೆರಳುತ್ತಿದ್ದಾಗ ಹಿಂಬದಿಯಿಂದ ಗೂಡ್ಸ್ ವಾಹನಕ್ಕೆ ಡಿಕ್ಕಿ ಹೊಡೆದೆ. ಪರಿಣಾಮ ತಲೆಗೆ ಪೆಟ್ಟು ಬಿದ್ದು, ರಸ್ತೆಯಲ್ಲಿ ಬಿದ್ದಿದ್ದ ನನ್ನನ್ನು ಸಾರ್ವಜನಿಕರು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದ್ದರು ಎಂದರು.

ನಂತರ ಕೊಳ್ಳೇಗಾಲ ಪಟ್ಟಣ ಠಾಣೆಗೆ ದೂರು ನೀಡಲಾಗಿತ್ತು. ಆದರೆ, ಇವರೆಗೆ ಅಪಘಾತ ಮಾಡಿದ ವಾಹನವನ್ನು ಪತ್ತೆ ಮಾಡಿಲ್ಲ. ಜೊತೆಗೆ ವಾಹನ ಪತ್ತೆ ಮಾಡಿ ಪರಿಹಾರ ಕೊಡಿಸುವಂತೆ 2023ರ ಡಿ.8ರಂದು ಜಿಲ್ಲಾಧಿಕಾರಿಗೂ ಮನವಿ ಸಲ್ಲಿಸಲಾಗಿದೆ. ನಾನು ಪ್ರತಿ ಬಾರಿ ಜಿಲ್ಲಾಧಿಕಾರಿ ಭೇಟಿಗೆ ಬಂದಾಗ ಅವರು ಲಭ್ಯವಿರುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ವಾಣಿಜ್ಯ ಮಳಿಗೆ ಬಾಡಿಗೆಗೆ ಇದೆ
30x50 ಮಳಿಗೆ ಮಹಾಲಕ್ಷ್ಮಿ ಸ್ವೀಟ್ ಹತ್ತಿರ ರಿಂಗ್ ರೋಡ್ ವಿಸಿಕ್‌ಲ್ ಮೈಸೂರು ಹಾಲಿ ಹೋಟೆಲ್ ನಡೆಯುತ್ತಿದೆ, ಹೋಟೆಲ್‌ಗೆ ಹಾರ್ಡ್‌ವೇರ್‌ಗೆ ಪೈಂಟ್ ಅಂಗಡಿಗೆ ಸೂಕ್ತವಾಗಿದೆ. ನೀರು ಹಾಗೂ ಶೌಚಾಲಯ ವ್ಯವಸ್ಥೆ ಇದೆ.
9448434110
9900664421

ಕೆಲಸಕ್ಕೆ ಬೇಕಾಗಿದ್ದಾರೆ
ಮೈಸೂರು ಇಂಡಸ್ಟ್ರಿಯಲ್ ಏರಿಯಾದಲ್ಲಿರುವ ಕಂಪನಿಗೆ 18 ರಿಂದ 40 ವರ್ಷ ಒಳಗಿನ ಪುರುಷ ITI ಫಿಟ್ಟರ್, ಎಲೆಕ್ಟ್ರಿಕ್, ಡಿಪ್ಲೋಮಾ ಮಾಡಿದವರು ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ: ಚಾಮುಂಡೇಶ್ವರಿ ಎಂಟರ್‌ಪ್ರೈಸಸ್ ಲೋಕೇಶ್ ಎಸ್.
8722844236

Sri Krishna Real Estate
HOUSE FOR SALE
Newly constructed house in 30x40 site, W/F, North Door at Vijayanagar 4th Stage, Mysore.
Price Rs. 1.65 Crore (Negotiable)
Mob: 9886691475

ಸೈಟ್ ಮಾರಾಟಕ್ಕಿದೆ
30x40 East ಫೇಸ್ 40 ಅಡಿ ರಸ್ತೆ, 2ನೇ ಫೇಸ್ ವಿಜಯನಗರ 4ನೇ ಸ್ಟೇಜ್
9945622196

ಡ್ರೈವರ್ಸ್ ಬೇಕಾಗಿದ್ದಾರೆ
ಮೈಸೂರಿನ ವಿಜಯನಗರ ನಾಲ್ಕನೇ ಹಂತದಲ್ಲಿರುವ ಪ್ರತಿಷ್ಠಿತ ಶಾಲೆಗೆ ಬಸ್ ಚಾಲಕರು ಮತ್ತು ಅಟೆಂಡರ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ:
63649 19636, 90369 68179

22x50 ಇಂಡಸ್ಟ್ರಿಯಲ್ ಶೆಡ್ ಬಾಡಿಗೆಗೆ ಇದೆ
7.5 HP Power ಇದೆ ಇನ್ನೂ 7.5 ಅಧಿಕವಾಗಿ ತೆಗೆದುಕೊಳ್ಳಬಹುದು.
31/B ಇಂಡಸ್ಟ್ರಿಯಲ್ ಸುಬರ್ಬ್ ಮೈಸೂರು (ಮಹಾಲಕ್ಷ್ಮಿ ಸ್ವೀಟ್ ಫ್ಯಾಕ್ಟರಿಯಿಂದ 6ನೇ ಕ್ರಾಸ್ ಸರ್ಕಲ್) ಎಸ್.ಸೇತುರಾಮ್
9740224153

ಶ್ರೀ ಗೌರೀಶಂಕರ ಟ್ರಾವೆಲ್ಸ್
ಮಹಾಕುಂಭ ಯಾತ್ರೆ (5 ದಿನ) ಅಮೃತ ಸ್ನಾನ, ಪ್ರಯಾಗ್ ರಾಜ್, ಕಾಶಿ, ಅಯೋಧ್ಯೆ ದಿನಾಂಕ 24–2–25 (25ನೇ ತಾರೀಖು ಅಮೃತ ಸ್ನಾನ ಪ್ರಯಾಗ್‌ನಲ್ಲಿ) ಕಾಶಿಯಲ್ಲಿ (26ನೇ ತಾರೀಖು ಮಹಾಶಿವರಾತ್ರಿ ಆಚರಣೆ). (ವಿಮಾನ, ಊಟ, ಬಸ್, ರೂಂ)
Mob: 9620002114

ಜಮೀನು ಮಾರಾಟಕ್ಕಿದೆ
ಮೈಸೂರು–ಬೆಂಗಳೂರು ಹೆದ್ದಾರಿಯಲ್ಲಿ ಟಿ.ಎಂ.ಹೊಸೂರು ಗೇಟ್ ಹತ್ತಿರ ಫಾರೆಸ್ಟ್ ಆಫೀಸ್ ಪಕ್ಕ ಮೈಸೂರಿಗೆ 22 ಕಿ.ಮೀ ಇದೆ. ಹೆದ್ದಾರಿಗೆ ಹೊಂದಿಕೊಂಡು ಇರುವಂತೆ ಸರ್ವೆ ನಂಬರ್ 55/ 1 ಎಕರೆ 10 ಗುಂಟೆ, ಬೇಕಾದವರು ಈ ನಂಬರಿಗೆ ಸಂಪರ್ಕಿಸಿ:
8970666686

ಬೇಕಾಗಿದ್ದಾರೆ
ಮೈಸೂರು, ಹೆಬ್ಬಾಳಿನ ಕೈಗಾರಿಕಾ ಪ್ರದೇಶಗಳಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು, ಟೈಲರುಗಳು ಹೆಲ್ಪರುಗಳು ಬೇಕಾಗಿದ್ದಾರೆ. ವೆಲ್ಡರ್ ಬೇಕಾಗಿದ್ದಾರೆ.
8105249880
7795285485

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8861401315



SUNSTAR SOLAR SYSTEM SALES & SERVICE
9900609977, 9972036774, 9916457118

INVESTOR ಬೇಕಾಗಿದ್ದಾರೆ
Leading Food Products Export Business ಅಭಿವೃದ್ಧಿ ಪಡಿಸಲು 50 ಲಕ್ಷಗಳವರೆಗೆ Funds ಬೇಕಾಗಿದೆ. 20% ಡಿವಿಡೆಂಡ್ & ಸೂಕ್ತ ಭದ್ರತೆಯೊಂದಿಗೆ ಕನಿಷ್ಠ 2 ಲಕ್ಷದಿಂದ 5 ಲಕ್ಷದವರೆಗೆ Invest ಮಾಡುವವರು ಸಂಪರ್ಕಿಸಿ
SRR SWADESHIMART.COM
7019012485

ಮೈಸೂರು ನಗರದ ಪ್ರಮುಖ ಸೂರ್ಯ ಬೇಕರಿ ಬಳಿ ಉತ್ತಮ ವಾಣಿಜ್ಯ ಸೈಟ್ ಮಾರಾಟಕ್ಕಿದೆ.
- SBI ಮುಖ್ಯ ರಸ್ತೆಯಲ್ಲಿರುವ ಪ್ರತ್ಯೇಕ ಆಕರ್ಷಕ ವಾಣಿಜ್ಯ ಸೈಟ್. 40 x 60.
- ಬ್ಯಾಂಕ್ ಸಾಲವನ್ನು ತೆರವುಗೊಳಿಸಲಾಗಿದೆ.
- ಮೂಲ TITLE DEED ಮತ್ತು ಎಲ್ಲಾ ಮೂಲ ದಾಖಲೆಗಳು ಮಾಲೀಕರ ಬಳಿ ಲಭ್ಯವಿದೆ.

ಸ್ಥಳಕ್ಕಾಗಿ ಸ್ಕ್ಯಾನ್ ಮಾಡಿ
ಮಾಲೀಕರು : 97398 16440

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8618373596

ತಕ್ಷಣ ಬೇಕಾಗಿದ್ದಾರೆ
ಅನುಭವವುಳ್ಳ ಮಹಿಳಾ ಕಂಪ್ಯೂಟರ್ ಆಪರೇಟರ್ (ಡಾಟಾಎಂಟ್ರಿ)ಗೆ ತಕ್ಷಣ ಬೇಕಾಗಿದ್ದಾರೆ. ಆಕರ್ಷಕ +ESI+PF ಹಾಗೂ ಊಟದ ವ್ಯವಸ್ಥೆ 8 ಗಂಟೆಗಳ ಕೆಲಸದ ಅವಧಿ (ಜನರಲ್ ಶಿಫ್ಟ್) ಸ್ಥಳ: ನಂಜನಗೂಡಿನ ಇಂಡಸ್ಟ್ರಿಯಲ್ ಏರಿಯಾ ಹಾಗೂ ಅನುಭವವುಳ್ಳ ಪುರುಷ ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ
7019378337
8599911021

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಕಂಪನಿಯೊಂದರಲ್ಲಿ 'Technical Helper' ಕೆಲಸ ಮಾಡಲು ITI/Diploma ಮಾಡಿರುವ ಯುವಕರು ಬೇಕಾಗಿದ್ದಾರೆ. ESI, PF ಸೌಲಭ್ಯವಿದೆ ಮತ್ತು Office ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ. (Any Degree with Computer Skills)
8310990980
9945537353

rapido ಬೇಕಾಗಿದ್ದಾರೆ
ರ್‍ಯಾಪಿಡೋ ಮಹಿಳಾ ನಾಯಕಿಯಾಗಿ ಸೇರಿ ದಿನಕ್ಕೆ 1000/– ವರೆಗೆ ಗಳಿಸಿ ಕಮಿಷನ್ ಇಲ್ಲ ಮಹಿಳಾ ಗ್ರಾಹಕರಿಂದ ಮಾತ್ರ ಬುಕ್ಕಿಂಗ್ ಅಗತ್ಯವಿರುವ ದಾಖಲಾತಿಗಳು: RC, DL, Aadhaar. ಕರೆ ಮಾಡಿ:
04045209040

ಮೈಸೂರು ನಗರದ ಪ್ರಮುಖ ಸ್ಥಳದಲ್ಲಿ ದೊಡ್ಡ ಕೈಗಾರಿಕಾ ಭೂಮಿ ಮಾರಾಟಕ್ಕಿದೆ.
75 FT X 400 FT = 30,000 Sq Ft
- Title Deed ಲಭ್ಯವಿದೆ.
- ವಿದ್ಯುತ್ ಸಂಪರ್ಕ ಸಿದ್ಧವಾಗಿದೆ
- ವಾಣಿಜ್ಯ ಕಮ್ ಇಂಡಸ್ಟ್ರಿಯಲ್
- 60 ಅಡಿ ಮುಖ್ಯ ರಸ್ತೆ
- ಬೋರ್‌ವೆಲ್
- ಸ್ಥಳಕ್ಕಾಗಿ ಸ್ಕ್ಯಾನ್ ಮಾಡಿ

ಮಾಲೀಕರು : 97398 16440

ಬೋಳು ತಲೆಯ ಸಮಸ್ಯೆಯೇ?

SMART HAIR FIXING
574, 9th Cross, Aniketana Road, Kuvempunagar, Mysuru
MYSURU 9611028523 BANGALORE 9343142258

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ. ತರಬೇತಿಗಾಗಿ:
7406375196, 9880548596

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

ಹುಣಸೂರು ನಗರದಲ್ಲಿ 2 ಸೈಟುಗಳು ಮಾರಾಟಕ್ಕಿವೆ
ನಿವೇಶನದ ಅಳತೆ 30x40 ಅಡಿ. ಜನತಾ ಟಾಕೀಸ್ ಹಿಂಭಾಗ, ಒಂದು ನಿವೇಶನಕ್ಕೆ ಆರು ಲಕ್ಷ ರೂ. ದರ. ಅಲಿನೇಷನ್ ಆಗಿದೆ. ಕಾರ್ಪೋರೇಷನ್ ಖಾತೆಯಾಗಿದೆ. ಕಂದಾಯ ದರ ಪಾವತಿ ಮಾಡಲಾಗಿದೆ.
8073466887
9986332364

SITE FOR SALE
(30x40) "OLIVE ENCLAVE" (NEAR MANUGANAHALLY) MYS-HUNSUR HIGHWAY DTCP APPROVED 8 KM FROM RING ROAD 15 LACS
95388-39926

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7975101020

WANTED
GRAPHIC DESIGNER
(Expertise in Photoshop, Illustrator and CorelDraw)
Location : Near Shanthala Theater, Mysore.
Salary Based on Experience
Contact : 6362422664

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

JOBNET
ಮೊಬೈಲ್‌ನಲ್ಲಿ ಕೆಲಸ
ಮನೆಯಲ್ಲೇ ಕುಳಿತು ಮೊಬೈಲ್ ಮೂಲಕ ಫಾರಂ ಫಿಲ್ಲಿಂಗ್ ಮಾಡಿ ಪ್ರತಿ ತಿಂಗಳಿಗೆ 10,000 ದಿಂದ 20,000 ಸಂಪಾದಿಸಿ.
Mob: 9731891409



Solar Water Heater SALES & SERVICE BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

SITE FOR SALE
40x40 Corner Vishwa Manava Enclave Vijayanagar 4th Stage
8050821108

ಬೇಕಾಗಿದ್ದಾರೆ
ಮೈಸೂರು ಜಿಲ್ಲಾ HD Kote ತಾಲ್ಲೂಕಿನಾದ್ಯಂತ ಕಮಿಷನ್ ಆಧಾರದ ಮೇಲೆ ಬ್ಯಾಂಕ್ ಪರಿಶೀಲನೆ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. (ದ್ವಿಚಕ್ರ ವಾಹನ ಕಡ್ಡಾಯ) ಸಂಪರ್ಕಿಸಿ:
ಅನಿಲ್: 7026996123
ಶೇಖರ್: 9945911118

WAREHOUSE FOR RENT
13000 sq.ft., with KIADB Norms (Fire Hydrant Sprinkle C.C. Road), Adakanahalli, Behind Parle Company, Nanjangud Taluk.
Call : 98809 56397

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854

PRAKRUTHI PROPERTIES
SITES FOR SALE
40x60 Commercial Site Nr Bramharamba Chltry,
40x60 House @ Ramakrishna Nagar
50x80 Site @ Kuvempu Nagar
20x30, 30x40 Sites & House @ Dattagalli, Ramakrishna Nagar
20x30 Site @ VRL Lyt, HD Kote Rd
Sites also available Near RT Nagar, Bogadi in & around Mysore
95386 90359, 90359 90359

ಹೊಸ ಮನೆ ಮಾರಾಟಕ್ಕಿದೆ
3 BHK, 30x40 EAST FACE MUDA APPROVED Near St. Joseph School, Yelwala, Huyilalu, Mysore
Mob: 8217851695

LAND FOR SALE
1 acre 20 gunta (ALN) industrial or ideal for farm house fully fenced with borewell, labour shed & office east facing main road 6 km from KRS dam 58 lakh negotiable.
96066 38899

REQUIRED
Female - Shop Incharge SSLC/PUC with good Communication Skill and Basic Computer Knowledge
Place: Vijayanagar 3rd Stage
Time: 10 am-7pm (Sun Holiday)
Whatsapp:
9900228811, 9108991356
Call: 9900228833

ಮೈಸೂರಿನಲ್ಲಿ ಉದ್ಯೋಗ
ಕುವೆಂಪುನಗರದಲ್ಲಿ ನೂತನವಾಗಿ ಆರಂಭವಾಗಿರುವ AWBM Group of ಕಂಪನಿಗೆ SSLC, PUC, ITI Diploma Any degree ಆಗಿರುವ ಪುರುಷ ಒಟ್ಟು 224 ಅಭ್ಯರ್ಥಿಗಳು ಬೇಕಾಗಿದ್ದಾರೆ. ವಯೋಮಿತಿ 18 to 32 Years, ತಿಂಗಳಿಗೆ 20500–26000/– (ಉಚಿತ ಊಟ+ವಸತಿಯಿದೆ) ಕೂಡಲೇ ಕರೆ ಮಾಡಿ
ಮೈತ್ರಿ: 7090212014
7349699460

Document Lost
B.K. Sathish Koushik, #2696/6, 2nd Cross, New Street, K.G. Koppal, Mysuru-570 009, I have lost Rajiv Gandhi Housing Scheme Original Temporary Notice document on 11-01-2025. Finders please contact:
Mob: 7483714931

Spacious 2 BHK available for rent
1st Floor in 1/B 3rd Stage, Kuvempunagar, Mysuru-570 023 (Mega Medicals) prime location, ideal for families or working professionals. Contact:
9481187171 or 9945291634

SITE FOR SALE
DTCP approved sites for sale, only 12 km from Mysore City, T. Narasipura Highway approach sites, fully developed, ready to registration, ready to construct, 2599 / Sq.ft.
Mob: 9739739732

ಬೇಕಾಗಿದ್ದಾರೆ
ಸೆಕ್ಯೂರಿಟಿ ಫೀಲ್ಡ್ ಆಫೀಸರ್, ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಉತ್ತಮ ವೇತನ + ಪಿಎಫ್ + ಇಎಸ್‌ಐ ಸೌಲಭ್ಯವಿರುತ್ತದೆ. ಸ್ಥಳ: ಮೈಸೂರು ಸಿಟಿ, ಹೆಬ್ಬಾಳು ಕೈಗಾರಿಕಾ ನಗರ, ಸಿದ್ಧಾರ್ಥ ಬಡಾವಣೆ ಹಾಗೂ ಹಿನಕಲ್.
Mob: 7829393555 / 9739376832 / 9886200104

SHARE MARKET
ಟ್ರೇಡಿಂಗ್ ಮಾಡುವುದನ್ನು ಹೇಳಿ ಕೊಡಲಾಗುವುದು, ತಿಂಗಳಿಗೆ 10,000 ರಿಂದ 20,000 ಸಾವಿರ ರೂಪಾಯಿ ಸಂಪಾದಿಸಬಹುದು.
8660734351

ಬೇಕಾಗಿದ್ದಾರೆ
ಮೈಸೂರು ಮತ್ತು ನಂಜನಗೂಡಿಗೆ Area Manager, Training Manager, Field Officer, Security Supervisor ಮತ್ತು Security Gaurd ಗಳು ಕೆಲಸ ನಿರ್ವಹಿಸಲು ಬೇಕಾಗಿದ್ದಾರೆ. ಆಕರ್ಷಕ ಸಂಬಳ ESI ಮತ್ತು PF ಸೌಲಭ್ಯವಿರುತ್ತದೆ. ಕೂಡಲೇ ಸಂಪರ್ಕಿಸಿ:
Shashi Security
9845013610, 9880495755
9845162830

ತಕ್ಷಣ ಬೇಕಾಗಿದ್ದಾರೆ
ಹೂಟಗಳ್ಳಿ, ಹೆಬ್ಬಾಳ ಮತ್ತು ಮೇಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು, ಸಂಬಳ ಸೂಪರ್‌ವೈಸರ್ 21000+W/O 8hrs ಗಾರ್ಡ್ 18500+W/O 8hrs ಊಟ ತಿಂಡಿ ಸೌಲಭ್ಯವಿದೆ.
9880727819
0821-4260452

ಪ್ರಮಾಣ ಪತ್ರ
ಮೈಸೂರು ನಗರ, ರಾಜೀವನಗರ ಹಾಲ್ಲಾಳು, ಕಂದಾಯ ಮೊಹಲ್ಲಾ, ನಂಬರ್ 1ರ ನಿವಾಸಿ ... Mohamed Shafiulla V. ... Mohamedshafiulla V. ... Mohamedshafiulla V. ...
ಸಹಿ/– Mohamedshafiulla V.

ಛತ್ರ ಖಾಲಿ ಇದೆ
Sri Vittala Rukmini Convention Hall
May 17th, 18th - 2025
Contact:
Mob: 9880048310

ಬೇಕಾಗಿದ್ದಾರೆ
ಮೈಸೂರಿನ ಪೆಟ್ರೋಲ್ ಬಂಕ್‌ನಲ್ಲಿ ಡೇ/ನೈಟ್ ಶಿಫ್ಟ್‌ನಲ್ಲಿ ಗಾಳಿ ಹಾಕಲು ಬೇಕಾಗಿದ್ದಾರೆ.
ಸಂಬಳ: 10,000/–
8892258814

New house for Sale
40x63 Subramanya Nagar, Jnanaganga Layout, MUDA approved near Hari Vidyalaya School, Bogadi, Mysuru.
Call: 94828 83566

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಏರಿಯಾದ ಕಡಕೊಳ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮೇಲ್ಪಟ್ಟು ವಯೋಮಿತಿ: 50 ವರ್ಷದೊಳಗೆ ಸಂಬಳ: 17500 (26days) 8Hours ESI & PF ಊಟ ತಿಂಡಿ ಸೌಲಭ್ಯವಿರುತ್ತದೆ.
9620777819
9620667819

ವಧುವರರ ಅನ್ವೇಷಣೆ
ಜಾತಿ–ಲಿಂಗಾಯತ, ಕುರುಬ, ಒಕ್ಕಲಿಗ ಮತ್ತು ಕ್ರಿಶ್ಚಿಯನ್, ಎಸ್‌ಸಿ, ಎಸ್‌ಟಿ.
ಸಂಪರ್ಕಿಸಿ: ಮೈಸೂರು
ವಾಟ್ಸಪ್ 9844396822
9164596155

CONSTRUCTION WORK
We undertake new residential commercial & industrial Constructions, Repair and Renovation Works. Contact.
8296698852

ಬೇಕಾಗಿದ್ದಾರೆ
ಮೈಸೂರಿನ ವಿಜಯನಗರ 4ನೇ ಹಂತದಲ್ಲಿರುವ ಪ್ರತಿಷ್ಠಿತ ಒಕ್ಕಲಿಗ ಕುಟುಂಬದಲ್ಲಿ ಅಡುಗೆ ಕೆಲಸ ಹಾಗೂ ಮನೆ ಕೆಲಸ ಮಾಡಲು ಒಕ್ಕಲಿಗರು ಚಿಕ್ಕ ಸಂಸಾರ (ಗಂಡ ಹೆಂಡತಿ) ಬೇಕಾಗಿದೆ. ವಸತಿ ಹಾಗೂ ಆಕರ್ಷಕ ಸಂಬಳವಿದೆ.
9066827269

ಸ್ವಾಧೀನ ಪತ್ರ ಕಳೆದಿದೆ
ರಜೀನಾ ಮೇರಿ, # 871, ಲಲಿತಾದ್ರಿನಗರ ದಕ್ಷಿಣ ಬಡಾವಣೆ, ಲಲಿತಾದ್ರಿನಗರ, ಮೈಸೂರು ಅಳತೆ 9x12 ರ ಸ್ವಾಧೀನ ಪತ್ರ ಜೆರಾಕ್ಸ್ ಮಾಡಿಸಲು ಹೋದಾಗ ಕಳೆದು ಹೋಗಿದೆ ಸಿಕ್ಕಿದವರು ಈ ನಂಬರಿಗೆ ಸಂಪರ್ಕಿಸಿ:
9110818660

ಕಾರು, ಬೈಕ್, ಸ್ಕೂಟಿ, ಮನೆ, ಸ್ಥಳ ಮಾರಾಟಕ್ಕಿದ್ದರೆ ಸಂಪರ್ಕಿಸಿ
ಸೆಕೆಂಡ್‌ಹ್ಯಾಂಡ್, ಕಾರು, ಬೈಕ್, ಸ್ಕೂಟಿ ಹಾಗೂ ಮನೆ, ಸೈಟ್, ಕೃಷಿ ಭೂಮಿ, ಫ್ಲ್ಯಾಟ್ ಮಾರಾಟ ಮಾಡಲು ಇಚ್ಛಿಸಿರುವವರು ಮತ್ತು ಸೆಕೆಂಡ್ ಹ್ಯಾಂಡ್ ಮಾರಾಟ ಮಾಡುವ ವಾಹನಗಳ ಹಾಗೂ ಮನೆ, ಜಾಗದ ಡೀಲ್ಲರ್‌ಗಳು ನಮ್ಮ ಮೊಬೈಲ್ ನಂಬರಿಗೆ ವಾಟ್ಸಾಪ್ ಮಾಡಿ ತಿಳಿ. ಬ್ಯಾಂಕಿನಲ್ಲಿ ಸಾಲ (ಲೋನ್) ಗಳದ್ದ ಕಾರು, ಬೈಕ್, ಸ್ಥಳ, ಮನೆಗಳು ಇದ್ದರೆ ಕೂಡಾ ಸಂಪರ್ಕಿಸಬಹುದು.
9980310919

ಬೇಕಾಗಿದ್ದಾರೆ
ಪೆಟ್ರೋಲ್‌ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ
6364748485

ಬೇಕಾಗಿದ್ದಾರೆ
ಬ್ಯಾಕ್ರಿಂಗ ಮತ್ತು ಫಾಸ್ಟ್‌ಫುಡ್ ಪಾರ್ಲರ್‌ಗೆ ಸೇಲ್ಸ್ / ವೈಟರ್ – ಪುರುಷರು/ಸ್ತ್ರೀಯರು ಅರ್ಹತೆ: SSLC/PUC ವಯಸ್ಸು: 18 ರಿಂದ 30 ವರ್ಷ ವೇತನ : ರೂ.12000/–+ ಸ್ಥಳ: ಜಯಲಕ್ಷ್ಮಿ ಪುರಂ ಮೈಸೂರು ಸಂದರ್ಶನ ಸಮಯ: 1) 4 pm ರಿಂದ 12 pm 2) 10 am ರಿಂದ 6 pm
8310414784

20x30 House For Sale
Ground floor 2BHK First Floor 3BHK Duplex T K Layout Mysore
Price: 85 Lakh Nego
9916901555

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಅಡಕನಹಳ್ಳಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು, ಸಂಬಳ: 24000+W/O ಸಂಪರ್ಕಿಸಬೇಕಾದ ಸಂಖ್ಯೆಗಳು
9620667819
9620777819

SITE FOR SALE
Site No-06 30x30 East Face R.T.Nagar
Price - 42 Lakh
8970537475

ತಕ್ಷಣ ಬೇಕಾಗಿದ್ದಾರೆ
ಹೂಟಗಳ್ಳಿ ಮತ್ತು ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು SSLC, ITI, Pass or Fail ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸಂಬಳ: 15,000/– ಅನುಭವಕ್ಕೆ ESI, PF, Canteen ಸೌಲಭ್ಯವಿರುತ್ತದೆ.
7090309148
7019380847

SITE FOR SALE
Site No-512 30x40 West Face Kaveri Nagar Satagalli
Price - 43 Lakh
8970537475

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಪ್ರಮುಖ MNCಕಂಪನಿಗಳಿಗೆ 7th, 10th, PUC, ITI, Diploma, Any Degree MBA, M.Com Pass/Fail, ಆದವರಿಗೆ Helper, Quality, Maintenance, Production, Data Entry, Telecalling, HR Admin, Cashier, Billing, Drivers, Securityಗಳಿಗೆ ಬೇಕಾಗಿದ್ದಾರೆ. ಸಂಬಳ 16,000 ರಿಂದ 49,000 (ESI+PF+OT) ಯೊಂದಿಗೆ
9916641959

SITE FOR SALE
30X40, 30X50 (Bank Loan available) Srirampura Ring Road, Mysore
8050345574

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ ಮತ್ತು ಸೂಪರ್‌ವೈಸರ್ ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕೆ ಪುರುಷ ಮತ್ತು ಮಹಿಳೆಯರು ಕೂಗ್ಗಳ್ಳಿ ಮತ್ತು ಮೇಟಗಳ್ಳಿ ಸುತ್ತಮುತ್ತ ಕೆಲಸ ಬಯಸುವವರು ಸಂಪರ್ಕಿಸಿ:
9035367083
8123769346

ವಯಸ್ಸಾದವರು ಮತ್ತು ರೋಗಿಗಳನ್ನು ಅವರ ಮನೆಗೆ ಹೋಗಿ ನೋಡಿಕೊಳ್ಳಲು ಹಾಗೂ ಎಕ್ಸೆರ್ಸೈಜ್ ಮತ್ತು ಮಸಾಜ್ ಮಾಡಿಸಲು ನಮ್ಮಲ್ಲಿ ಒಳ್ಳೆಯ ತರಬೇತಿ ಕೊಟ್ಟಿರುವ ನರ್ಸ್‌ಗಳು ಇರುವರು: ವಯೋವೃದ್ಧರು ಸೇವೆ ಬೇಕಾದಲ್ಲಿ ಸಂಪರ್ಕಿಸಿ, ಮೈಸೂರು
8105974815

MUDA ಸೈಟು ಮಾರಾಟಕ್ಕಿದೆ
30x40 ಪೂರ್ವ ದಿಕ್ಕು RMS Layout ಲಲಿತಾದ್ರಿಪುರ Ring Road ಹತ್ತಿರ, Very good for Investment, DD Real Estate
9343361444

ಕಂಕಣ ಭಾಗ್ಯ
ಒಕ್ಕಲಿಗ, ಕುರುಬ, ಲಿಂಗಾಯತ್, ನಾಯಕ, SC ನಮ್ಮಲ್ಲಿ ಎಲ್ಲಾ ಜಾತಿಯ ವಧು–ವರರು, ವಿಚ್ಛೇದಿತರು, ವಿಧುರ–ವಿಧವೆಯರು ತಕ್ಷಣ ಸಂಪರ್ಕಿಸಿ:
9071577131

SITE FOR SALE
52X60 SW CORNER SITE FOR SALE IN RMS LAYOUT NEAR DR RAJKUMAR ROAD 3BHK APARTMENT FOR SALE IN TRENDS APARTMENT BOGADI ROAD
9880344263

ನಿವೃತ್ತ ನೌಕರರಿಗೆ ಉದ್ಯೋಗಾವಕಾಶ ಸುವರ್ಣಾವಕಾಶ
ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಬಿಮಾ ಮತ್ತು Business ಅವಕಾಶ ಸೇವೆಗಳ ... Benifits : Fixed Salary + PF + ESI + ಇತರೆ ಭತ್ಯೆಗಳು ಲಭ್ಯವಿರುತ್ತದೆ. ಬೇಕಾಗುವ ದಾಖಲಾತಿಗಳು 1) ಫೋಟೋ 2) ಪಾನ್‌ಕಾರ್ಡ್ 3) ಆಧಾರ್ ಕಾರ್ಡ್, ಬ್ಯಾಂಕ್ ಪಾಸ್‌ಬುಕ್. ಸ್ಥಳ: Maurya Residency Sri Harsha Road, Mysore-1
Time-11 am, Date: 15-2-25 (Followed by Lunch)
9448376423/9886883858

SITE FOR SALE
40X50 North Face Roopa Nagar
Call
9880273834

50x65 South West Corner Visvapragna Layout (Near RT Nagar)
9880273834

ಕೆಲಸ ಖಾಲಿ ಇದೆ
ಟೈಲ್ಸ್ ಕೆಲಸ, ಗಾರೆ ಕೆಲಸ ಇಂಟೀರಿಯರ್ ಕೆಲಸ ಮಾಡಲು ಲೇಬರ್ ಬೇಕಾಗಿದ್ದಾರೆ. ಸಂಪರ್ಕಿಸಿ:
9741243085

ಉದ್ಯೋಗಾವಕಾಶ
ವಯಸ್ಸಾದವರನ್ನು ನೋಡಿಕೊಳ್ಳಲು ಅನುಭವ ಇರುವ ಇಲ್ಲದೆ ಇರುವ ಹುಡುಗ ಹುಡುಗಿಯರು ಬೇಕಾಗಿದ್ದಾರೆ ANM, GNM ಬೇಕಾಗಿದ್ದಾರೆ ಕೆಲಸದ ಸಮಯ ಬೆಳಿಗ್ಗೆ ಅಥವಾ ರಾತ್ರಿ ಅಥವಾ 24 ಗಂಟೆ ಸಮಯ ಉಳಿದು ಕೊಳ್ಳಬಹುದು. ಸಂಬಳ 10 ದಿನಕ್ಕೆ ಇರುತ್ತದೆ ಹಾಗೂ ಒಳ್ಳೆಯ ನಗರದ ಆಫೀಸ್ ಒಂದಕ್ಕೆ ಫೀಲ್ಡ್ ಆಫೀಸರ್ ಬೇಕಾಗಿದ್ದಾರೆ. ದ್ವಿಚಕ್ರ ವಾಹನ ಕಡ್ಡಾಯ
8123630683
8123252840

ಮನೆ ಭೋಗ್ಯಕ್ಕೆ
ಮೊದಲನೇ ಮಹಡಿ #156, 4ನೇ ಕ್ರಾಸ್, ರಾಮಕೃಷ್ಣನಗರ 4 ರೂಂಗಳುಳ್ಳ ಮನೆ ಡ್ಯೂಪ್ಲೆಕ್ಸ್ ಮನೆ 20x30 ರಲ್ಲಿರುವ ಮನೆ Near Church
9880550440
9902982960

ಮೈಸೂರು ಮಿತ್ರ 45 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆ ವ್ಯವಹರಿಸಬೇಕಾಗುತ್ತದೆ. ಆದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಹಿಂದುಳಿದ ಸಮುದಾಯದ ಯುವಜನರಿಗೆ ವೇದಿಕೆ ಕಲ್ಪಿಸುವುದೇ ಅಹಿಂದ ಉದ್ದೇಶ



ತಿ.ನರಸೀಪುರ ಪಟ್ಟಣದಲ್ಲಿ ಯುವ ಕಾಂಗ್ರೆಸ್ ಚುನಾವಣೆಯಲ್ಲಿ ಗೆಲುವು ಸಾಧಿಸಿ, ಆಯ್ಕೆಗೊಂಡ ನೂತನ ಅಧ್ಯಕ್ಷರನ್ನು ರಾಷ್ಟ್ರೀಯ ಅಹಿಂದ ಒಕ್ಕೂಟ ಹಾಗೂ ಸುನೀಲ್ ಬೋಸ್ ಯುವ ಬ್ರಿಗೇಡ್ ತಂಡದಿಂದ ಸನ್ಮಾನಿಸಲಾಯಿತು.

ತಿ.ನರಸೀಪುರ, ಫೆ.12– ತಾಲೂಕಿನಲ್ಲಿ ಸಾಮಾಜಿಕ ಮತ್ತು ರಾಜಕೀಯವಾಗಿ ಹಿಂದುಳಿದ ಸಮುದಾಯಗಳ ಯುವ ಜನರನ್ನು ಒಗ್ಗೂಡಿಸಿ, ನಾಯಕತ್ವದ ಗುಣಗಳನ್ನು ರೂಪಿಸಿಕೊಳ್ಳಲು ವೇದಿಕೆ ಕಲ್ಪಿಸುವುದೇ ರಾಷ್ಟ್ರೀಯ ಅಹಿಂದ ಒಕ್ಕೂಟದ ಧ್ಯೇಯೋದ್ದೇಶವಾಗಿದ್ದು, ಈ ಭಾಗದಲ್ಲಿ ಸಂಸದ ಸುನೀಲ್ ಬೋಸ್ ಹಾಗೂ ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಅವರ ನಾಯಕತ್ವವನ್ನು ಬಲಪಡಿಸುವ ಕೆಲಸವನ್ನು ನಾವೆಲ್ಲರೂ ನಿರ್ವಹಿಸಬೇಕು ಎಂದು ಸುನೀಲ್ ಬೋಸ್ ಯುವ ಬ್ರಿಗೇಡ್ ಸಂಸ್ಥಾಪಕ ಅಧ್ಯಕ್ಷ ಹಾಗೂ ರಾಷ್ಟ್ರೀಯ ಅಹಿಂದ ಒಕ್ಕೂಟ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕುಮಾರ್ ರಾಮೇಗೌಡ ಹೇಳಿದರು.

ಪಟ್ಟಣದ ಶ್ರೀ ರೇಣುಕಾಂಭ ಮಿಲ್ಟ್ರಿ ಹೋಟೆಲ್ ಸಭಾಂಗಣದಲ್ಲಿ ರಾಷ್ಟ್ರೀಯ ಅಹಿಂದ ಒಕ್ಕೂಟ ಹಾಗೂ ಸುನೀಲ್ ಬೋಸ್ ಯುವ ಬ್ರಿಗೇಡ್ ತಂಡ ಆಯೋಜಿಸಿದ್ದ ಒಕ್ಕೂಟ ಕ್ಯಾಲೆಂಡರ್ ಬಿಡುಗಡೆ ಹಾಗೂ ಯೂತ್ ಕಾಂಗ್ರೆಸ್ ಚುನಾವಣೆಯಲ್ಲಿ ಗೆಲುವು ಸಾಧಿಸಿದ ನೂತನ ಅಧ್ಯಕ್ಷರ ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು ಹಲವು ಶತಮಾನಗಳಿಂದ ಶೋಷಣೆಗೆ ಒಳಗಾದ ದಲಿತ ಸಮುದಾಯ ಹಾಗೂ ಹಿಂದುಳಿದ ವರ್ಗಗಳ ಜನರು ರಾಜಕೀಯವಾಗಿ ಜಾಗೃತರಾಗಿ ಪ್ರಜಾಪ್ರಭುತ್ವದ ಉಳಿವಿಗೆ ಹಾಗೂ ಸಂವಿಧಾನ ರಕ್ಷಣೆಗೆ ಒಗ್ಗೂಡಬೇಕು ಎಂದು ಕರೆ ನೀಡಿದರು.

ಕೆಪಿಸಿಸಿ ಹಿಂದುಳಿದ ವರ್ಗಗಳ ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ರಮೇಶ್ ಸೇರಿದಂತೆ ನೂತನ ಯುವ ಕಾಂಗ್ರೆಸ್ ಘಟಕಕ್ಕೆ ಆಯ್ಕೆಯಾಗಿರುವ ಟಿ ನರಸೀಪುರ ವಿಧಾನಸಭಾ ಕ್ಷೇತ್ರದ ಅಧ್ಯಕ್ಷ ನವಾಜ್ ಖಾನ್, ತಿ.ನರಸೀಪುರ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ನಿಲಸೋಗೆ ಪ್ರದೀಪ್, ವರುಣ ವಿಧಾನಸಭಾ ಕ್ಷೇತ್ರದ ಉಪಾಧ್ಯಕ್ಷೆ ಸವಿತಾ ಅವರ ಪತಿ ಗೋಪಾಲ ರಾಜ್ ಅವರನ್ನು ಸನ್ಮಾಸಿ, ಗೌರವಿಸಲಾಯಿತು.

ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೆಹುಂಡಿ ಮಹೇಶ್, ಕೆಪಿಸಿಸಿ ಸದಸ್ಯ, ರಾಷ್ಟ್ರೀಯ ಅಹಿಂದ ಒಕ್ಕೂಟದ ಗೌರವಾಧ್ಯಕ್ಷ ಸುಂದರ ನಾಯಕ, ತಾಲೂಕು ಅಧ್ಯಕ್ಷ ಸೋಸಲೆ ದೇವರಾಜ್, ಪ್ರಧಾನ ಕಾರ್ಯದರ್ಶಿ ಹೋಟೆಲ್ ಸೋಮುದಾದ, ಜಿಲ್ಲಾ ಉಪಾಧ್ಯಕ್ಷ ಬೀರೇಶ್ ಕೇಬ್ಬೆಹುಂಡಿ, ಕಾರ್ಯದರ್ಶಿ ಸೋಸಲೆ ರಾಜು, ಕಾರ್ಯಧ್ಯಕ್ಷ ಕೆ.ಅಶ್ವಿನ್ ಕುಮಾರ್, ಸಂಘಟನಾ ಕಾರ್ಯದರ್ಶಿ ಬೆನಕನಹಳ್ಳಿ ಅರುಣ್ ಕುಮಾರ್, ಸಹ ಕಾರ್ಯದರ್ಶಿ ಶಬ್ಬೀಲ್ ಖಾನ್, ಪ್ರಚಾರ ಸಮಿತಿ ಅಧ್ಯಕ್ಷ ಗರ್ಗೇಶ್ವರಿ ಗೋಪಾಲ್ ರಾಜ್, ತಾಲೂಕು ಯುವ ಘಟಕದ ಅಧ್ಯಕ್ಷ ತಲಕಾಡು ಭರತ್, ಸೋಸಲೆ ಗ್ರಾಪಂ ಮಾಜಿ ಅಧ್ಯಕ್ಷ ಮಹೇಶ್ (ಲೋಕಿ), ಅಸ್ಲಾಂ ಪಾಷಾ ಇನ್ನಿತರರಿದ್ದರು.

ಹಾಲು ಉತ್ಪಾದಕರಿಗೆ ಸಹಾಯಧನ, ಬೋನಸ್ ನೀಡದ ಆರೋಪ

ಚುಂಚನಕಟ್ಟೆ ಹಾಲು ಉತ್ಪಾದಕರ ಮಹಿಳಾ ಸಂಘಕ್ಕೆ ಬೀಗ ಜಡಿದು ಪ್ರತಿಭಟನೆ

ಕಾರ್ಯದರ್ಶಿ ಬೆಂಬಲಿಗರಿಂದ ಹಲ್ಲೆ, ಪೊಲೀಸ್ ಠಾಣೆಗೆ ದೂರು, ಪ್ರತಿದೂರು



ಕಚೇರಿಗೆ ಬೀಗ ಜಡಿದು ಪ್ರತಿಭಟನೆ ನಡೆಸಲಾಯಿತು.

ಚುಂಚನಕಟ್ಟೆ, ಫೆ.12– ಹಾಲು ಉತ್ಪಾದಕರಿಗೆ ನೀಡಬೇಕಾಗಿರುವ ಸಹಾಯಧನ ಮತ್ತು ಬೋನಸ್ ನೀಡದಿರುವ ಕಾರ್ಯದರ್ಶಿಯ ಕ್ರಮವನ್ನು ಖಂಡಿಸಿ ಸಂಘದ ಷೇರುದಾರ ಸದಸ್ಯರು ಸಂಘದ ಕಚೇರಿಗೆ ಬೀಗ ಜಡಿದು ಪ್ರತಿಭಟನೆ ನಡೆಸಿದ ಘಟನೆ ನಡೆದಿದೆ.

ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ ಹೋಬಳಿ ಕೇಂದ್ರ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಕಾರ್ಯದರ್ಶಿ ಪ್ರಭಾವತಿ ಅವರ ವಿರುದ್ಧ 20ಕ್ಕೂ ಹೆಚ್ಚು ಮಹಿಳಾ ಸದಸ್ಯರು ಪ್ರತಿಭಟನೆ ನಡೆಸಿ ಕಚೇರಿಗೆ ಬೀಗ ಜಡಿದು ತಮ್ಮ ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಸದಸ್ಯರೊಂದಿಗೆ ಅಸಭ್ಯವಾಗಿ ವರ್ತಿಸಿದ ಕಾರ್ಯದರ್ಶಿ ಮತ್ತು ಆಕೆಯ ಪುತ್ರಿ ಹಾಗೂ ಪೊಲೀಸ್ ಪೇದೆಯಾಗಿರುವ ಸಹೋದರ ಸಿ.ಆರ್.ದಿನೇಶ್ ಪ್ರತಿಭಟನಾಕಾರರ ಮೇಲೆ ಹಲ್ಲೆ ನಡೆಸಲು ಮುಂದಾದ ಘಟನೆಯು ನಡೆಯಿತು.

ಸಂಘದ ಷೇರುದಾರ ಸದಸ್ಯೆಯಾದ ಪ್ರೇಮಕುಮಾರ್ ಅವರ ಪತಿ ಕುಮಾರ್ ಅವರನ್ನು ಹಿಗ್ಗಾಮುಗ್ಗಾ ಥಳಿಸಿದ ಕಾರ್ಯದರ್ಶಿ ಕಡೆಯ ಕೆಲವರು ಮೈಮುಲ್ ಪ್ರಧಾನ ವ್ಯವಸ್ಥಾಪಕ ಅವರನ್ನು ನಿಂದಿಸಿ ನಮ್ಮನ್ನು ಯಾರು ಏನೂ ಮಾಡಲು ಸಾಧ್ಯವಿಲ್ಲ ಎಂದು ಸವಾಲು ಹಾಕಿದರು.

ಸಂಘದ ಕಾರ್ಯದರ್ಶಿ ಅಕ್ರಮ ನಡೆಸುತ್ತಿರುವ ಬಗ್ಗೆ 15 ದಿನಗಳ ಹಿಂದೆ ಸದಸ್ಯರು ಮೈಮುಲ್ ಪ್ರಧಾನ ವ್ಯವಸ್ಥಾಪಕರಿಗೆ ಲಿಖಿತವಾಗಿ ದೂರು ನೀಡಿದ್ದರೂ ಅವರು ಯಾವುದೇ ಕ್ರಮ ಕೈಗೊಳ್ಳದ ಹಿನ್ನೆಲೆಯಲ್ಲಿ ಪ್ರತಿಭಟನೆ ನಡೆಸಲು ಮುಂದಾದಾಗ ಈ ಘಟನೆ ನಡೆದಿದ್ದು ಇದರಿಂದ ಆಕ್ರೋಶಗೊಂಡ ಮಹಿಳಾ ಸದಸ್ಯರು ಕಳೆದ ಹತ್ತಾರು ವರ್ಷಗಳಿಂದ ಅವ್ಯವಹಾರ ನಡೆಯುತ್ತಿದ್ದರೂ ಯಾರೂ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ತಮ್ಮ ಮೇಲೆ ಹಲ್ಲೆ ನಡೆಸಿದ ಸಂಘದ ಕಾರ್ಯದರ್ಶಿ ಪ್ರಭಾವತಿ, ಆಕೆಯ ತಾಯಿ ನಾಗಮ್ಮ, ಪುತ್ರಿ ರಕ್ಷಿತಾ, ಸಹೋದರ ಪೊಲೀಸ್ ಪೇದೆ ಸಿ.ಆರ್.ದಿನೇಶ್, ಕಾರ್ಯದರ್ಶಿಯ ಸಂಬಂಧಿ ಧನುಷ್ ಅವರ ವಿರುದ್ಧ ಡಿ.ಸಿ.ಕುಮಾರ್ ಸಾಲಿಗ್ರಾಮ ಪೊಲೀಸ್ ಠಾಣೆಗೆ ದೂರು ನೀಡಿದ್ದು ಅವರ ವಿರುದ್ಧ ಕೇಸು ದಾಖಲಾಗಿದೆ.

ಇದಕ್ಕೆ ಪ್ರತಿಯಾಗಿ ಸಂಘದ ಕಾರ್ಯದರ್ಶಿ ಪ್ರಭಾವತಿ 15 ಮಂದಿ ವಿರುದ್ಧ ದೂರು ನೀಡಿದ್ದು ಅವರ ವಿರುದ್ಧವೂ ಕೇಸು ದಾಖಲಾಗಿದ್ದು, ಇಡೀ ಘಟನೆಯನ್ನು ಗ್ರಾಮಸ್ಥರು ಮತ್ತು ಹಾಲು ಉತ್ಪಾದಕರ ಸದಸ್ಯರು ಖಂಡಿಸಿದ್ದು ಗ್ರಾಮದ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘವನ್ನು ರದ್ದು ಮಾಡಿ ಪುರುಷರು ಮತ್ತು ಮಹಿಳೆಯರಿಗೆ ಸಮಾನ ಅವಕಾಶ ನೀಡಿ ಹೊಸ ಸಂಘ ಆರಂಭಿಸಿ ಇದರೊಂದಿಗೆ ಮೈಮುಲ್ ಅಧಿಕಾರಿಗಳು ಈ ಬಗ್ಗೆ ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಆಗ್ರಹಿಸಿದ್ದಾರೆ.

ಶ್ರೀ ಗಡಿ ಭೈರವೇಶ್ವರ ಜಾತ್ರಾ ಮಹೋತ್ಸವ ರದ್ದು

ಜಾತ್ರಾ ಪ್ರದೇಶದ ಸುತ್ತಲೂ ನಿಷೇಧಾಜ್ಞೆ ಜಾರಿ



ನಂಜನಗೂಡು, ಫೆ.12– ಜಾತ್ರಾ ಮಹೋತ್ಸವದಲ್ಲಿ ಗೋಲಕದ ಹುಂಡಿ ಇಡುವ ವಿಚಾರದಲ್ಲಿ ದೇವಾಲಯದ ಸುತ್ತಲಿನ ಗ್ರಾಮಸ್ಥರ ನಡುವೆ ಉಂಟಾದ ಭಿನ್ನಾಭಿಪ್ರಾಯದಿಂದಾಗಿ ತಾಲೂಕಿನ ವಳಗೆರೆ ಸಮೀಪದಲ್ಲಿರುವ ಶ್ರೀ ಗಡಿ ಭೈರವೇಶ್ವರ ಸ್ವಾಮಿ ದೇವಾಲಯದಲ್ಲಿ ನಡೆಯಬೇಕಿದ್ದ ಜಾತ್ರಾ ಮಹೋತ್ಸವವನ್ನು ರದ್ದುಪಡಿಸಿ ದೇವಾಲಯದ ಸುತ್ತಲಿನ ಪ್ರದೇಶದಲ್ಲಿ ನಿಷೇಧಾಜ್ಞೆ ವಿಧಿಸಿ ತಹಶೀಲ್ದಾರ್ ಶಿವಕುಮಾರ ಕಾಸ್ನೂರು ಆದೇಶಿಸಿದ್ದಾರೆ.

ಪೂರ್ವ ನಿಗದಿಯಂತೆ ಫೆ.12ರಂದು ಪುರಾಣ ಪ್ರಸಿದ್ಧ ಗಡಿ ಭೈರವೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ನಡೆಯಬೇಕಿತ್ತಾದರೂ ಕಾನೂನು ಸುವ್ಯವಸ್ಥೆ ಹದಗೆಡುವ ಭೀತಿಯಿಂದಾಗಿ ತಹಶೀಲ್ದಾರ್ ಶಿವಕುಮಾರ್ ಕಾಸ್ನೂರು ಭಾರತೀಯ ನ್ಯಾಯ ಸಂಹಿತೆ ಕಲಂ.163ರನ್ವಯ(ಈ ಹಿಂದಿನ ಐಪಿಸಿ 144) ತಮ್ಮ ಅಧಿಕಾರವನ್ನು ಬಳಸಿಕೊಂಡು ಫೆ.11 ಹಾಗೂ 12ರವರೆಗೆ ವಳಗೆರೆ ಗ್ರಾಮದ ಹೊರ ವಲಯದಲ್ಲಿರುವ ಗಡಿಭೈರವೇಶ್ವರ ದೇವಾಲಯದ ಸುತ್ತಲಿನ 500 ಮೀಟರ್ ಪ್ರದೇಶದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿದ್ದು, ಈ ಸಮಯದಲ್ಲಿ ಯಾವುದೇ ಪೂಜೆ, ರಥೋತ್ಸವ ಹಾಗೂ ತೇರಿನ ಮೆರವಣಿಗೆಯನ್ನು ನಡೆಸದಂತೆ ಹಾಗೂ ವಳಗೆರೆ, ಹುಸ್ಕೂರು ಹಾಗೂ ಶಿರಮಳ್ಳಿ ಗ್ರಾಮದಲ್ಲಿ ಯಾವುದೇ ರಥೋತ್ಸವ ದೇವರ ಮೆರವಣಿಗೆ ಹಾಗೂ ಜಾತ್ರೆಯನ್ನು ನಡೆಸದಂತೆ ಸೂಚಿಸಿದ್ದಾರೆ ಜೊತೆಗೆ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಕಾನೂನು ರೀತ್ಯ ಕ್ರಮಗಳನ್ನು ಕೈಗೊಳ್ಳಲು ನಂಜನಗೂಡು ಗ್ರಾಮಾಂತರ ಠಾಣೆ ಪೊಲೀಸರಿಗೆ ಸೂಚಿಸಿದ್ದಾರೆ.

ಈ ಬಗ್ಗೆ ಸುದ್ದಿಗಾರರಿಗೆ ಮಾಹಿತಿ ನೀಡಿರುವ ತಹಶೀಲ್ದಾರ್ ಶಿವಕುಮಾರ್ ಕಾಸ್ನೂರು, ಗಡಿ ಭೈರವೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ ಆಚರಣೆಗೆ ಸಂಬಂಧಿಸಿದಂತೆ 6 ಬಾರಿ ಶಾಂತಿಸಭೆಗಳನ್ನು ನಡೆಸಲಾಯಿತಾದರೂ ಜಾತ್ರೆಯಲ್ಲಿ ಗೋಲಕದ ಹುಂಡಿ ಕಟ್ಟುವ ವಿಚಾರದಲ್ಲಿ ಮೂರೂ ಗ್ರಾಮಗಳ ಗ್ರಾಮಸ್ಥರ ನಡುವೆ ಇದ್ದ ಭಿನ್ನಾಭಿಪ್ರಾಯ ಬಗೆಹರಿಯಲಿಲ್ಲ. ಜಾತ್ರೆ ಆಚರಣೆಗೆ ಸಂಬಂಧಿಸಿದಂತೆ ಒಮ್ಮತದ ಅಭಿಪ್ರಾಯ ಬರಲಿಲ್ಲ ಇದರಿಂದಾಗಿ ಕಾನೂನು ಸುವ್ಯವಸ್ಥೆ ಹದಗೆಡಬಹುದು ಎಂಬ ಆತಂಕದಿಂದ ಜಾತ್ರೆ ನಡೆಯುವ ಸ್ಥಳದ ಸುತ್ತಲಿನ ಪ್ರದೇಶದಲ್ಲಿ ನಿಷೇಧಾಜ್ಞೆ ವಿಧಿಸಲಾಗಿದೆ. ಜೊತೆಗೆ ದೇವಾಲಯದ ಆವರಣ ಸೇರಿದಂತೆ ಸುತ್ತಲಿನ ಮೂರೂ ಗ್ರಾಮಗಳಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿದ್ದು, ಯಾವುದೇ ಅಹಿತಕರ ಘಟನೆ ನಡೆಯದಂತೆ ಎಚ್ಚರಿಕೆ ವಹಿಸಲಾಗಿದೆ ಎಂದು ಹೇಳಿದರು.

ಕನಿಷ್ಠ ಮೂಲಸೌಕರ್ಯಗಳನ್ನು ಕಲ್ಪಿಸಲು ಒತ್ತಾಯಿಸಿ ಗ್ರಾಪಂ ಅಧಿಕಾರಿಗಳ ಅನಿರ್ದಿಷ್ಟಾವಧಿ ಮುಷ್ಕರ



ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ಅನಿರ್ದಿಷ್ಟಾವಧಿ ಮುಷ್ಕರ ನಡೆಸಿದರು.

ಹುಣಸೂರು, ಫೆ.12– ಕನಿಷ್ಠ ಮೂಲ ಸೌಕರ್ಯಗಳನ್ನು ಕಲ್ಪಿಸಬೇಕು, ಅಂತರ ಜಿಲ್ಲಾ ವರ್ಗಾವಣೆ, ಪದೋನ್ನತಿಯನ್ನು ಮರು ಸ್ಥಾಪಿಸುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಆಗ್ರಹಿಸಿ ರಾಜ್ಯ ಗ್ರಾಮ ಅಧಿಕಾರಿಗಳ ಸಂಘದ ತಾಲೂಕು ಶಾಖೆಯ ಸದಸ್ಯರು ತಾಲೂಕು ಕಚೇರಿ ಎದುರು ಎರಡನೇ ಹಂತದ ಅನಿರ್ದಿಷ್ಟಾವಧಿ ಮುಷ್ಕರದಲ್ಲಿ ತೊಡಗಿದ್ದಾರೆ.

ಮುಷ್ಕರದ ಮೂರನೇ ದಿನವಾದ ಇಂದು ಸಹ ನಗರದ ತಾಲೂಕು ಕಚೇರಿ ಮುಂಭಾಗದಲ್ಲಿ ತಾಲೂಕಿನ 30 ಗ್ರಾಮ ಪಂಚಾಯಿತಿ ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಿಸಲು ಅಗತ್ಯ ಮೂಲಸೌಕರ್ಯಗಳನ್ನು ಕಲ್ಪಿಸಲು ಆಗ್ರಹಿಸಿ ಕಪ್ಪುಪಟ್ಟಿ ಧರಿಸಿ, ಅನಿರ್ದಿಷ್ಟಾವಧಿ ಮುಷ್ಕರ ನಡೆಸಿದರು.

ಈ ಸಂದರ್ಭದಲ್ಲಿ ತಾಲೂಕು ಸಂಘದ ಅಧ್ಯಕ್ಷ ತೀರ್ಥಗಿರಿಗೌಡ ಮಾತನಾಡಿ, ರಾಜ್ಯಾದ್ಯಂತ ಗ್ರಾಮ ಆಡಳಿತ ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಿಸಲು ಕನಿಷ್ಠ ಸೌಲಭ್ಯಗಳು ಇಲ್ಲದೆ ದುಡಿಯುತ್ತಿದ್ದೇವೆ. ಕೆಲಸ ಮಾಡಲು ಅಗತ್ಯವಿರುವ ಕುರ್ಚಿ ಟೇಬಲ್, ಆಡಳಿತ ಕಚೇರಿ, ಲ್ಯಾಪ್‌ಟಾಪ್, ಪ್ರಿಂಟರ್, ಸ್ಕ್ಯಾನರ್ ಇದ್ಯಾವುದು ಇಲ್ಲದೆ ಕರ್ತವ್ಯ ನಿರ್ವಹಿಸುತ್ತಿದ್ದೇವೆ. ರಾಜ್ಯ ಸರ್ಕಾರ ವೆಬ್ ತಂತ್ರಾಂಶದ ಮೂಲಕ ಹಲವು ಸೇವೆಗಳನ್ನು ನೀಡುತ್ತಿದೆ. ಕಂದಾಯ ಇಲಾಖೆಯಲ್ಲಿ ಸಂಯೋಜನೆ, ಇ–ಆಫೀಸ್, ಲ್ಯಾಂಡ್ ಬೀಟ್, ದಿಶಾಂಕ್, ಬೇಳೆ, ನೀರಾವರಿ ಗಣತಿ ಸಮೀಕ್ಷೆ ಸೇರಿದಂತೆ 21ಕ್ಕೂ ಹೆಚ್ಚು ಸೇವೆಗಳನ್ನು ನಮ್ಮ ಸ್ವಂತ ಮೊಬೈಲ್‌ನಲ್ಲೇ ಮಾಡಬೇಕಿದ್ದು, ಸರ್ಕಾರ ಮೊಬೈಲ್ ಒದಗಿಸಿರುವ ಕಾರಣ ನಮ್ಮ ಸ್ವಂತ ಖರ್ಚಿನಲ್ಲಿ ಮಾಡಬೇಕಾದ ಪರಿಸ್ಥಿತಿ ಎದುರಾಗಿದೆ ಎಂದು ತಮ್ಮ ಬೇಸರವನ್ನು ವ್ಯಕ್ತಪಡಿಸಿದರು

ಪ್ರತಿಭಟನೆಯಲ್ಲಿ ಉಪಾಧ್ಯಕ್ಷೆ ಚೈತ್ರಾ, ಕಾರ್ಯದರ್ಶಿ ಮಧು, ಖಜಾಂಚಿ ಶ್ರೀವತ್ಸ ಗೌರವಾಧ್ಯಕ್ಷ ನಾಗೇಶ್ ಸೇರಿದಂತೆ ಎಲ್ಲಾ ಪಂಚಾಯಿತಿಯ ಗ್ರಾಮ ಅಧಿಕಾರಿಗಳು ಪಾಲ್ಗೊಂಡಿದ್ದರು.

ಕಣ್ಣಿನ ಉಚಿತ ತಪಾಸಣಾ ಶಿಬಿರ



ಬನ್ನೂರಿನ ಪಟ್ಟಣದ ರೋಟರಿ ಸಂಸ್ಥೆ, ಕಾನ್ ಸಿಂಗ್‌ಜೀ ರಾಜ್ ಪುರೋಹಿತ್, ಶ್ರೀ ಗೌರಿದೇವಿ, ಲಯನ್ಸ್ ಕ್ಲಬ್ ಆಫ್ ಈರೋಡ್ ಸುಪ್ರೀಮ್, ಕೊಯಮತ್ತೂರು ಕಣ್ಣಿನ ಆಸ್ಪತ್ರೆ ಸಂಯುಕ್ತಾಶ್ರಯದಲ್ಲಿ ಕಣ್ಣಿನ ಉಚಿತ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು. ಈ ವೇಳೆ ರೋಟರಿ ಮಾಜಿ ಅಧ್ಯಕ್ಷ ಡಾ. ಮಹೇಂದ್ರ ಸಿಂಗ್ ಕಾಳಪ್ಪ ಹಾಗೂ ಕಣ್ಣಿನ ಚಿಕಿತ್ಸೆಗೆ ತೆರಳಿದ್ದ ಶಿಬಿರಾರ್ಥಿಗಳನ್ನು ಕಾಣಬಹುದು.

ಕಟಾವಿಗೆ ಬಂದಿದ್ದ ಕಬ್ಬಿಗೆ ಬೆಂಕಿ



ಮೂಗೂರು, ಫೆ.12– ಕಟಾವಿಗೆ ಬಂದ ಕಬ್ಬಿನ ಬೆಳೆಗೆ ಆಕಸ್ಮಿಕವಾಗಿ ಬೆಂಕಿ ತಗುಲಿ ಸುಟ್ಟು ಹೋಗಿರುವ ಘಟನೆ ಮೂಗೂರಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಬಳಿ ಬುಧವಾರ ಮಧ್ಯಾಹ್ನ ನಡೆದಿದೆ. ಗ್ರಾಮದ ಉಮಾ ಸುರೇಶ್ ಎಂಬವರಿಗೆ ಸೇರಿದ 2.06 ಎಕರೆ ಪ್ರದೇಶದಲ್ಲಿ ಬೆಳೆದ ಕಬ್ಬು ಬೆಂಕಿಗೆ ಆಹುತಿಯಾಗಿ ನಷ್ಟ ಸಂಭವಿಸಿದೆ. ಬೆಂಕಿ ತಗುಲಿದ ಸುದ್ದಿ ತಿಳಿದ ತಿ.ನರಸೀಪುರ ಅಗ್ನಿಶಾಮಕ ದಳದ ಸಿಬ್ಬಂದಿ ಕೂಡಲೇ ಸ್ಥಳಕ್ಕೆ ಆಗಮಿಸಿ ಬೆಂಕಿ ನಂದಿಸಿದರು.

ಬನ್ನಹಳ್ಳಿಹುಂಡಿಯಲ್ಲಿ ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನ ಲೋಕಾರ್ಪಣೆ



ತಿ.ನರಸೀಪುರ ತಾಲೂಕು ಬನ್ನಹಳ್ಳಿಹುಂಡಿ ಗ್ರಾಮದಲ್ಲಿ ನಿರ್ಮಿಸಲಾಗಿರುವ ಶ್ರೀ ಮಲೆ ಮಹದೇಶ್ವರಸ್ವಾಮಿಯವರ ನೂತನ ದೇವಸ್ಥಾನವನ್ನು ಲೋಕಾರ್ಪಣೆಗೊಳಿಸಲಾಯಿತು.

ತಿ.ನರಸೀಪುರ, ಫೆ.12– ತಾಲೂಕಿನ ಬನ್ನಹಳ್ಳಿಹುಂಡಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಶ್ರೀ ಮಲೆ ಮಹದೇಶ್ವರ ಸ್ವಾಮಿ ದೇವಸ್ಥಾನವನ್ನು ಲೋಕಾರ್ಪಣೆ ಮಾಡಲಾಯಿತು.

ದೇವಸ್ಥಾನದ ಉದ್ಘಾಟನೆ ಹಿನ್ನೆಲೆಯಲ್ಲಿ ಬೆಳಗ್ಗೆಯಿಂದಲೇ ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು. ನೂತನ ಬಸವ ಆಗ್ರೋದಕ ಸಮೇತ ಜಾನಪದ ಕಲಾತಂಡದೊಂದಿಗೆ ಯಾಗ ಶಾಲಾ ಪ್ರವೇಶ, ಗಣಪತಿ ಪೂಜೆ,ಸ್ವಸ್ತಿ ಪುಣ್ಯಾಹ ವಾಸ್ತು, ಹೋಮ, ಶಿಲಾ ಮೂರ್ತಿಗೆ ಆದಿವಾಸಗಳ ಸಂಸ್ಕಾರ ಪೂಜೆಗಳು ಜರುಗಿದವು. ಪ್ರಧಾನ ಹೋಮ, ಕಲಾ ಹೋಮ, ಜಲಾದಿ ಹೋಮ ಮತ್ತು ಸ್ವಾಮಿಯವರಿಗೆ ರುದ್ರಾಭಿಷೇಕದೊಂದಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು. ಸಾವಿರಾರು ಮಂದಿ ಭಕ್ತಾದಿಗಳಿಗೆ ಪ್ರಸಾದ ವ್ಯವಸ್ಥೆ ಕಲ್ಪಿಸಲಾಗಿತ್ತು. ತಾಲೂಕಿನ ಸಾವಿರಾರು ಮಂದಿ ಭಕ್ತ ಸಮೂಹ ದೇವಸ್ಥಾನಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸಿತು.

ದೇವಸ್ಥಾನದ ಆವರಣದಲ್ಲಿ ನಡೆದ ಧಾರ್ಮಿಕ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಮುಡುಕನಪುರ ಹಲವಾರ ಮಠದ ಶ್ರೀ ಷಡಕ್ಷರ ದೇಶೀಕೇಂದ್ರ ಸ್ವಾಮಿ ಉತ್ತರದಿಂದ ಬಂದ ಮಾಯಿಕಾರ ಗಣೇಶ್ವರರು ತಮ್ಮ ಅದ್ಭುತ ಪವಾಡಗಳೊಡನೆ ದಕ್ಷಿಣ ನಾಡಿನೆಡೆಗೆ ಪ್ರವಾಸ ಬೆಳೆಸಿ ಹಲವಾರು ಪುಣ್ಯಕ್ಷೇತ್ರಗಳು ಹಾಗೂ ತೀರ್ಥಕ್ಷೇತ್ರಗಳನ್ನು ಪಾವನಗೊಳಿಸಿ ಮಲೆಯಲ್ಲಿ ನೆಲೆಸಿದ್ದರಿಂದ ಮಲೈ ಮಹದೇಶ್ವರರಾದರು. ಇಂತಹ ಪವಾಡ ಪುರುಷರಿಂದ ಇಂದು ಕೋಟ್ಯಾಂತರ ಭಕ್ತರು ಶ್ರೀಕ್ಷೇತ್ರಕ್ಕೆ ಭೇಟಿ ನೀಡಿ ಭಕ್ತಿ ಪ್ರದರ್ಶನ ಮಾಡುತ್ತಿರುವುದರಿಂದ ಇಂದು ಧಾರ್ಮಿಕ ಕ್ಷೇತ್ರವಾಗಿ ರೂಪುಗೊಂಡು ಮಲೈ ಮಹದೇಶ್ವರ ಬೆಟ್ಟ ಎಂದು ಪ್ರಸಿದ್ಧಿ ಪಡೆದಿದೆ. ಇಂತಹ ಪುಣ್ಯ ಪುರುಷರ ದೇವಾಲಯವನ್ನು ಬನ್ನಳ್ಳಿಹುಂಡಿ ಗ್ರಾಮದಲ್ಲಿ ಜೀರ್ಣೋದ್ಧಾರಗೊಳಿಸಿ ಗ್ರಾಮದ ಭಕ್ತರಿಗೆ ಮಹದೇಶ್ವರರ ದರ್ಶನ ಮಾಡುವ ಹಾಗೂ ಸ್ಮರಿಸುವ ಅವಕಾಶ ಕಲ್ಪಿಸಿಕೊಟ್ಟಿರುವು, ನಿಮ್ಮೆಲ್ಲರ ಸೌಭಾಗ್ಯ ಎಂದರು.

ಈ ವೇಳೆ ಹೊಸೂರುಹುಂಡಿ ದಾಸೋಹ ಮಠಾಧ್ಯಕ್ಷರಾದ ಶ್ರೀ ರಾಜಶೇಖರ ಸ್ವಾಮಿ, ಶ್ರೀ ದಯಾನಂದ, ನಾಗೇಶ್ ಸ್ವಾಮಿ ಸೇರಿದಂತೆ ವಿವಿಧ ಸ್ವಾಮೀಜಿಗಳು ಧಾರ್ಮಿಕ ಸಭೆಯಲ್ಲಿ ಭಾಗವಹಿಸಿದ್ದರು.

ಬಸಪ್ಪನ ಮೆರವಣಿಗೆ...



ತಿ.ನರಸೀಪುರ ತ್ರಿವೇಣಿ ಸಂಗಮದಲ್ಲಿ ನಡೆಯುತ್ತಿರುವ ಕುಂಭಮೇಳದಲ್ಲಿ ಚಿಕ್ಕಅರಸಿನಕೆರೆ ಬಸಪ್ಪ ಹಾಗೂ ತಿ.ನರಸೀಪುರ ಕಾಲಭೈರವೇಶ್ವರ ಬಸಪ್ಪ ಸ್ನಾನ ಮಾಡಿ ಪ್ರಮುಖ ಬೀದಿಯಲ್ಲಿ ಮೆರವಣಿಗೆ ಸಾಗಿ ಭಕ್ತರಿಗೆ ಆಶೀರ್ವಾದಿಸಿದವು ಬೈರಾಪುರ ಗ್ರಾಪಂ ಮಾಜಿ ಉಪಾಧ್ಯಕ್ಷ ಪುಟ್ಟು, ಜೋಗಪ್ಪ, ಪುಟ್ಟರಾಜು, ಸಿಂಚನ ನಾಯಕ್, ನವೀನ, ಚೇತು, ಸಿದ್ದಾರ್ಥ್ ನಾಯಕ್, ಗ್ರಾಮಸ್ಥರು ಮೆರವಣಿಗೆಯಲ್ಲಿ ಪಾಲ್ಗೊಂಡರು.

ಹೆಚ್.ಡಿ.ಕೋಟೆ, ಸರಗೂರಲ್ಲಿ ಶಾಸಕ ಅನಿಲ್ ಹುಟ್ಟುಹಬ್ಬ ಆಚರಣೆ



ಶಾಸಕ ಅನಿಲ್ ಚಿಕ್ಕಮಾದು ಅವರ ಹುಟ್ಟುಹಬ್ಬದ ಪ್ರಯುಕ್ತ ಸ್ವಾಮಿ ವಿವೇಕಾನಂದ ಆಸ್ಪತ್ರೆಗೆ ಭೇಟಿ ನೀಡಿದ ಕಾಂಗ್ರೆಸ್ ಮುಖಂಡರು, ಅಭಿಮಾನಿಗಳು ರೋಗಿಗಳಿಗೆ ಹಣ್ಣು–ಹಂಪಲು, ಬ್ರೆಡ್ ವಿತರಿಸಿದರು.

ಹೆಚ್.ಡಿ.ಕೋಟೆ/ಸರಗೂರು, ಫೆ.12– ಶಾಸಕ ಅನಿಲ್ ಚಿಕ್ಕಮಾದು ಅವರ ಹುಟ್ಟುಹಬ್ಬವನ್ನು ತಾಲೂಕಿನಾದ್ಯಂತ ವಿವಿಧ ಸೇವಾ ಕಾರ್ಯಗಳ ಮೂಲಕ ಆಚರಿಸಲಾಯಿತು.

ಸರಗೂರು: ಪಟ್ಟಣದಲ್ಲಿ ಶಾಸಕ ಅನಿಲ್ ಚಿಕ್ಕಮಾದು ಅವರ ಹುಟ್ಟುಹಬ್ಬದ ಪ್ರಯುಕ್ತ ವಿವಿಧ ಸೇವಾ ಕಾರ್ಯಕ್ರಮದ ಮೂಲಕ ಹುಟ್ಟುಹಬ್ಬ ಆಚರಿಸಲಾಯಿತು. ಈ ವೇಳೆ ಮಾತನಾಡಿದ ಜಿಪಂ ಮಾಜಿ ಸದಸ್ಯ ನರಸೀಪುರ ರವಿ, ತಂದೆಯಂತೆ ಎರಡು ತಾಲೂಕಿನಲ್ಲಿ ತಮ್ಮದೇ ಆದ ಅಭಿವೃದ್ಧಿಯ ಪರಂಪರೆ ಉಳಿಸಿಕೊಂಡವರಲ್ಲಿ ಅನಿಲ್ ಚಿಕ್ಕಮಾದು ಮೊದಲಿಗರಾಗಿದ್ದಾರೆ. ಕ್ಷೇತ್ರದಲ್ಲಿ ಎರಡನೇ ಬಾರಿಗೆ ಆಯ್ಕೆಯಾದ ಅನಿಲ್ ಚಿಕ್ಕಮಾದು ಅವರು ತಂದೆ ಮಾಜಿ ಶಾಸಕರಾದ ದಿ.ಚಿಕ್ಕಮಾದು ಅವರಂತೆ ಅವಳಿ ತಾಲೂಕಿನ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡುತ್ತಿದ್ದಾರೆ. ಯುವಕರಿಗೂ ಮಾದರಿಯಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಕರೆದು ಮಿನಿವಿಧಾನ ಸೌಧ ಗುದ್ದಲಿ ಪೂಜೆ ಮಾಡಲು ಮುಂದಾಗಲಿದ್ದಾರೆ.

ಅನಿಲ್ ಚಿಕ್ಕಮಾದು ಅಭಿಮಾನಿ ಬಳಗವು ಪಟ್ಟಣದ ಗಣಪತಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಭಗವಂತನು ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ಹೆಚ್ಚಿನ ಆಯಸ್ಸು, ಆರೋಗ್ಯ ದೊರಕಿಸಿ ಜನಸೇವೆ ಮಾಡಲು ಶಕ್ತಿ ನೀಡುವಂತೆ ಪ್ರಾರ್ಥಿಸಿದರು. ಅಲ್ಲಿರುವ ಮಕ್ಕಳೊಂದಿಗೆ ಸಿಹಿ ವಿತರಿಸಿದರು. ಹಾಗೆ ಸಾರ್ವಜನಿಕ ಆಸ್ಪತ್ರೆ, ಸ್ವಾಮಿ ವಿವೇಕಾನಂದ ಆಸ್ಪತ್ರೆಗೆ ಭೇಟಿ ನೀಡಿದ ಕಾಂಗ್ರೆಸ್ ಮುಖಂಡರು ಹಾಗೂ ಅಭಿಮಾನಿಗಳು ರೋಗಿಗಳಿಗೆ ಹಣ್ಣು–ಹಂಪಲು, ಬ್ರೆಡ್ ವಿತರಿಸಿದರು.

ಕೆ.ಈರೇಗೌಡ, ಜಿಯಾರ ಸೋಮೇಶ್, ಬೊಪ್ಪಹಳ್ಳಿ ಭಾಸ್ಕರ್, ಕೆಂಡಗಣ್ಣೇಗೌಡ, ಶಿವಪ್ಪಕೋಟೆ, ಕ್ಯಾತನಹಳ್ಳಿ ನಾಗರಾಜು, ಜಿನ್ನಹಳ್ಳಿ ರಾಜನಾಯಕ, ಬೀರ್ವಾಳ್ ಚಿಕ್ಕಣ್ಣ, ಡಾ.ಮರದೇವಯ್ಯ, ಗಿರಿಗೌಡ, ಎಸ್.ಎಸ್.ಪ್ರಭುಸ್ವಾಮಿ, ಹೆಚ್.ಸಿ. ಮಂಜುನಾಥ್, ಸೌಮ್ಯ ಮಂಜುನಾಥ್, ನಾಗನಹಳ್ಳಿ ಪ್ರದೀಪ್, ಸತೀಶ್‌ಗೌಡ, ಗಣೇಶಚಾರಿ, ಪರಶಿವಮೂರ್ತಿ, ಮಧುಕುಮಾರ್, ಶಂಭುಲಿಂಗನಾಯಕ, ಎಂ.ಕೆಂಡಗಣ್ಣಸ್ವಾಮಿ, ಕಂದೇಗಾಲ ಶಿವರಾಜು, ದೇವಲಾಪುರ ಸಿದ್ದರಾಜು, ಶಿವಶಂಕರ್, ಪಪಂ ಸದಸ್ಯರಾದ ಶ್ರೀನಿವಾಸ್, ಚಲುವಕೃಷ್ಣ, ನರಸೀಪುರ ನಾಗೇಂದ್ರ, ಆನಂದ ಹಾಗೂ ಆಸ್ಪತ್ರೆಯ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಹೆಚ್.ಡಿ.ಕೋಟೆ: ಪಟ್ಟಣದಲ್ಲಿ ಶಾಸಕ ಅನಿಲ್ ಚಿಕ್ಕಮಾದು ಅವರ 36ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಪಟ್ಟಣದ ಚಾಮುಂಡೇಶ್ವರಿ ದೇವಾಲಯದಲ್ಲಿ ವಿಶೇಷಪೂಜೆ ಸಲ್ಲಿಸಿ, ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಒಳರೋಗಿಗಳಿಗೆ ಹಣ್ಣು–ಹಂಪಲು ವಿತರಣೆ ಮಾಡುವುದರ ಮೂಲಕ ಹುಟ್ಟುಹಬ್ಬವನ್ನು ಆಚರಿಸಿದರು.

ಕಾಂಗ್ರೆಸ್ ಮುಖಂಡ ಸತೀಶ್‌ಗೌಡ ಮಾತನಾಡಿ, ತಾಲೂಕಿನ ಅಭಿವೃದ್ಧಿಗೆ ಕಳೆದ ಹತ್ತು ವರ್ಷಗಳಿಂದ ಹಗಲಿರುಳೆನ್ನದೇ ನಮ್ಮ ಶಾಸಕ ಅನಿಲ್ ಚಿಕ್ಕಮಾದುರವರು ಶ್ರಮಿಸುತ್ತಿದ್ದಾರೆ. ತಾಲೂಕಿನಲ್ಲಿ ಸಾವಿರಾರು ಕೋಟಿ ಅನುದಾನದ ಅಭಿವೃದ್ಧಿ ಕಾಮಗಾರಿಗಳು ನಡೆದಿವೆ. ಅವರ ಸೇವೆ ಇದೇ ರೀತಿ ಮುಂದುವರಿಯಲಿ ಎಂದು ಹಾರೈಸಿ, ಅವರ ಆರೋಗ್ಯ ಮತ್ತು ಆಯಸ್ಸು ವೃದ್ಧಿಗಾಗಿ ವಿಶೇಷ ಪೂಜೆ ಮಾಡಿ ನಂತರ ಆಸ್ಪತ್ರೆಯ ರೋಗಿಗಳಿಗೆ ಹಣ್ಣು–ಹಂಪಲನ್ನು ವಿತರಿಸಿದ್ದೇವೆ. ಜೊತೆಗೆ ಪಟ್ಟಣದ ಸಮೀಪವಿರುವ ನಿರಾಶ್ರಿತರ ತಾಣ ಚಿತ್ತಧಾಮದಲ್ಲಿ ಕೇಕ್ ಕತ್ತರಿಸಿ ಅನ್ನದಾನ ಮಾಡುವುದರ ಮೂಲಕ ಸರಳವಾಗಿ ಆಚರಿಸಲಾಯಿತು ಎಂದರು.





ಹೆಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆಯ ಒಳರೋಗಿಗಳಿಗೆ ಹಣ್ಣು ಹಂಪಲು ವಿತರಿಸಲಾಯಿತು. ನಿರಾಶ್ರಿತರ ತಾಣ ಚಿತ್ತಧಾಮದಲ್ಲಿ ಕೇಕ್ ಕತ್ತರಿಸಿ ಅನ್ನದಾನ ಮಾಡುತ್ತಿರುವುದನ್ನು ಬಲಚಿತ್ರದಲ್ಲಿ ಕಾಣಬಹುದು.

ಶಾಸಕ ಅನಿಲ್ ಚಿಕ್ಕಮಾದುರವರು ತಮ್ಮ ಹುಟ್ಟುಹಬ್ಬಕ್ಕೆ ಯಾವುದೇ ಫ್ಲೆಕ್ಸ್‌ಗಳಾಗಲಿ, ಆಚರಣೆಗಳಾಗಲಿ ಮಾಡಬಾರದು ಎಂದು ಸಂದೇಶವನ್ನು ನೀಡಿದ್ದರು. ಆದರೂ ಸಹ ನಾವು ತಾಲೂಕಿನಲ್ಲಿ ಸರಳವಾಗಿ ಇನ್ನೊಬ್ಬರಿಗೆ ಅನುಕೂಲವಾಗುವ ರೀತಿ ಸೇವೆ ಸಲ್ಲಿಸಲಾಗಿದೆ ಎಂದರು.

ಇದೇ ಸಂದರ್ಭದಲ್ಲಿ ಮೈಮುಲ್ ನಿರ್ದೇಶಕ ಚಿಕ್ಕಮಾದು ಅಭಿಮಾನಿ ಬಳಗದ ಅಧ್ಯಕ್ಷ ಜಿನ್ನಹಳ್ಳಿ ರಾಜನಾಯಕ, ಹಿರೇಗೌಡ, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಕ್ಯಾತನಹಳ್ಳಿ ನಾಗರಾಜು, ನಾಗನಹಳ್ಳಿ ಪ್ರದೀಪ, ಜಿಪಂ ಮಾಜಿ ಸದಸ್ಯ ಎಚ್.ಸಿ. ಮಂಜು, ಕೆಪಿಸಿಸಿ ನಂಜನಗೂಡು ಉಸ್ತುವಾರಿ ಸೋಮೇಶ್, ಡಿಸಿಸಿ ಸದಸ್ಯ ಪರಶಿವಮೂರ್ತಿ, ಅಕ್ರಮ ಸಕ್ರಮ ಸದಸ್ಯ ಕೆಂಡಗಣ್ಣೇಗೌಡ, ಕುರುಬ ಸಮಾಜದ ಜಿಲ್ಲಾ ಅಧ್ಯಕ್ಷ ಶಿವಪ್ಪ ಕೋಟೆ, ತಾಲೂಕು ಅಧ್ಯಕ್ಷ ಆನಂದ್, ಡಾ. ಶ್ರೀನಿವಾಸ್, ಡಾ. ಸೋಮಣ್ಣ, ಮುಖಂಡರಾದ ರವಿ, ಗಣೇಶ್ ಆಚಾರ್, ಜಯರಾಮ್, ಬಿ.ವಿ. ಬಸವರಾಜ್, ವೀರೇಗೌಡ, ಮಧು, ಗಣೇಶ್, ಸೌಮ್ಯ, ಅಶೋಕ್, ಮರಿದೇವಯ್ಯ, ಶಿವಮಲ್ಲು, ಬಿ.ಪಿ. ಸಿದ್ದನಾಯ್ಕ, ಕೃಷ್ಣ, ರಾಜು, ಶಿವರಾಜು, ಚೆಲುರಾಜು, ಬೈರನಾಯಕ, ತಮ್ಮನಾಯಕ, ಉಮೇಶ್, ಧನಂಜಯ, ನೇರಳೆ ಗೋವಿಂದ, ಬಿದರಹಳ್ಳಿ ರಾಜು, ಶಿವಯ್ಯ, ಕಾರ್ಯಕರ್ತರು ಮುಖಂಡರುಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದ್ದರು.

ಸಾವಿತ್ರಮ್ಮ ನಿಧನ



ಹುಣಸೂರು, ಫೆ.12– ನಗರದ ಮಾರುತಿ ಬಡಾವಣೆಯ ವಾಸಿ ನಿವೃತ್ತ ಆಹಾರ ಶಿರಸ್ತೆದಾರ್ ಗೋವಿಂದರಾಜ್ ಅವರ ಪತ್ನಿ ಶ್ರೀಮತಿ ಸಾವಿತ್ರಮ್ಮ (61) ಇಂದು ಬೆಳಗ್ಗೆ ನಿಧನರಾದರು. ಮೃತರು ಪತಿ, ಓರ್ವ ಪುತ್ರ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ತಾಲೂಕಿನ ಚಿಲ್ಕುಂದ ಗ್ರಾಮದ ಮೃತರ ಜಮೀನಿನಲ್ಲಿ ನಾಳೆ (ಗುರುವಾರ) ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಉದಯಗಿರಿ ಉದ್ವಿಗ್ನ ಪ್ರಕರಣ; ಮುಂದುವರೆದ ದೂರು-ಪ್ರತಿದೂರು ಸಲ್ಲಿಕೆ

●ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹಿಸಿ ಪೊಲೀಸ್ ಆಯುಕ್ತರಿಗೆ ದೂರು ಸಲ್ಲಿಸಿದ ಬಿಜೆಪಿ ಕಾನೂನು, ಮಾಧ್ಯಮ ಪ್ರಕೋಷ್ಠದ ಮುಖಂಡರು



ಮೈಸೂರಿನ ನಗರ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ಬಿಜೆಪಿ ಮುಖಂಡರು ದೂರು ಸಲ್ಲಿಸಿ ಹೊರಬಂದ ಸಂದರ್ಭ.

ಮೈಸೂರು,ಫೆ.12(ಪಿಎಂ)–ಅವಹೇಳನಕಾರಿ ಪೋಸ್ಟ್ ಹಿನ್ನೆಲೆಯಲ್ಲಿ ಮೈಸೂರಿನ ಉದಯಗಿರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಉಂಟಾಗಿದ್ದ ಉದ್ವಿಗ್ನ ಪರಿಸ್ಥಿತಿಯ ಪ್ರಕರಣ ಸಂಬಂಧ ಕಾಂಗ್ರೆಸ್ ಮತ್ತು ಬಿಜೆಪಿ ಮುಖಂಡರ ಆರೋಪ-ಪ್ರತ್ಯಾರೋಪ ಹಾಗೂ ದೂರು-ಪ್ರತಿ ದೂರು ಸಲ್ಲಿಕೆ ಮುಂದುವರೆದಿದೆ.

ಉದಯಗಿರಿಯಲ್ಲಿ ಉದ್ವಿಗ್ನ ಪರಿಸ್ಥಿತಿ ಉದ್ಭವಿಸಲು ಬಿಜೆಪಿ ಮತ್ತು ಆರ್‌ಎಸ್‌ಎಸ್ ಕಾರ್ಯಕರ್ತರು ಕಾರಣವೆಂದು ಆರೋಪಿಸಿ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮಂಗಳವಾರ ಉದಯಗಿರಿ ಪೊಲೀಸ್ ಠಾಣೆಗೆ ದೂರು ಸಲ್ಲಿಸಿದ್ದರು. ಅಲ್ಲದೆ, ದೂರು ನೀಡಿದ ಬಳಿಕ ಮಾಧ್ಯಮಗಳ ಮುಂದೆಯೂ ಬಿಜೆಪಿ ಮತ್ತು ಆರ್‌ಎಸ್‌ಎಸ್ ವಿರುದ್ಧ ಹರಿಹಾಯ್ದಿದ್ದರು.

ಇದರ ಬೆನ್ನಲ್ಲೇ ಬುಧವಾರ ಎಂ.ಲಕ್ಷ್ಮಣ್ ಅವರ ಆರೋಪ ಖಂಡಿಸಿ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಮೈಸೂರು ನಗರ ಮತ್ತು ಗ್ರಾಮಾಂತರದ ಬಿಜೆಪಿ ಕಾನೂನು ಪ್ರಕೋಷ್ಠ ಹಾಗೂ ಬಿಜೆಪಿ ಮಾಧ್ಯಮ ಪ್ರಕೋಷ್ಠದ ಮುಖಂಡರು ನಗರ ಪೊಲೀಸ್ ಆಯುಕ್ತರಿಗೆ ದೂರು ಸಲ್ಲಿಸಿದರು.

ಆರ್‌ಎಸ್‌ಎಸ್ ಬಗ್ಗೆ ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ. ಅವರ ವಿರುದ್ಧ ಶಿಸ್ತು ಕಾನೂನು ಕ್ರಮ ಜರುಗಿಸಬೇಕೆಂದು ಬಿಜೆಪಿ ಕಾನೂನು ಪ್ರಕೋಷ್ಠ ಮತ್ತು ಮಾಧ್ಯಮ ಪ್ರಕೋಷ್ಠ ನೀಡಿರುವ ದೂರಿನಲ್ಲಿ ಮನವಿ ಮಾಡಲಾಗಿದೆ.

ಎಂ.ಲಕ್ಷ್ಮಣ್ ಅವರು ಮಂಗಳವಾರ ಮೈಸೂರಿನ ಉದಯಗಿರಿ ಪೊಲೀಸ್ ಠಾಣೆ ಮುಂದೆ ಮಾತನಾಡುವಾಗ ಠಾಣೆ ಎದುರು ನಡೆದ ದಾಂದಲೆಗೆ ಆರ್‌ಎಸ್‌ಎಸ್‌ನವರು ಕಾರಣವೆಂದು ಸುಳ್ಳು ಆರೋಪ ಮಾಡಿದ್ದಾರೆ. ಆರ್‌ಎಸ್‌ಎಸ್ ಕಾರ್ಯಕರ್ತರು ಮಾರುವೇಷದಲ್ಲಿ ಬಂದು ಪೊಲೀಸ್ ಠಾಣೆಯ ಬಳಿ ದಾಂದಲೆ ಮಾಡಿದ್ದಾರೆ ಎಂದು ರಾಜಕೀಯ ದುರುದ್ದೇಶದಿಂದ ಸುಳ್ಳು ಆರೋಪ ಮಾಡಿದ್ದಾರೆ. ಆರ್‌ಎಸ್‌ಎಸ್ ಸಂಘಟನೆಯು ತನ್ನದೇ ಆದ ಘನತೆ-ಗೌರವಗಳೊಂದಿಗೆ ದೇಶದ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುವ ಅತ್ಯಂತ ದೊಡ್ಡ ಸಂಘಟನೆಯಾಗಿದೆ.

ಕಳೆದ 100 ವರ್ಷಗಳಿಂದ ಕೋಟ್ಯಾಂತರ ಸ್ವಯಂ ಸೇವಕರು ಆರ್‌ಎಸ್‌ಎಸ್ ವಿಚಾರಧಾರೆಗಳಿಗೆ ಆಕರ್ಷಿತರಾಗಿ ದೇಶ ಸೇವೆ ಮಾಡುತ್ತಿದ್ದಾರೆ. ಇಂತಹ ಶ್ರೇಷ್ಠ ಸಂಘಟನೆಯ ಬಗ್ಗೆ ಆಧಾರರಹಿತ ಆರೋಪ ಮಾಡಿದ್ದು, ಇದು ಖಂಡನೀಯ. ಲಕ್ಷ್ಮಣ್ ಅವರ ಅವಹೇಳನಕಾರಿ ಹೇಳಿಕೆ ಮುಂದುವರೆಯದಂತೆ ಕಡಿವಾಣ ಅಗತ್ಯವಾಗಿದೆ. ಇವರ ಬೇಜವಾಬ್ದಾರಿ ಹೇಳಿಕೆಯಿಂದ ಕೋಟ್ಯಾಂತರ ರಾಷ್ಟ್ರಭಕ್ತರಿಗೆ ನೋವು ಉಂಟಾಗಿದೆ. ಹಾಗಾಗಿ ಇವರನ್ನು ತಕ್ಷಣವೇ ಬಂಧಿಸಿ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ದೂರಿನಲ್ಲಿ ಕೋರಲಾಗಿದೆ.

ಇದೇ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಕಾನೂನು ಪ್ರಕೋಷ್ಠದ ಜಿಲ್ಲಾ ಸಂಚಾಲಕ ನಂಜುಂಡಸ್ವಾಮಿ, ಆರ್‌ಎಸ್‌ಎಸ್‌ನವರ ವಿರುದ್ಧ ಸುಳ್ಳು ಆರೋಪ ಮಾಡುವ ಮೂಲಕ ಪ್ರಕರಣದ ದಾರಿ ತಪ್ಪಿಸಲು ಲಕ್ಷ್ಮಣ್ ಹೊರಟಿದ್ದಾರೆ. ದೇಶ ಸೇವೆ ಮಾಡುತ್ತಿರುವ ಆರ್‌ಎಸ್‌ಎಸ್ ಕಾರ್ಯಕರ್ತರು ಎಂದೂ ಕಲ್ಲು ತೂರುವ ಕೆಲಸ ಮಾಡುವುದಿಲ್ಲ. ಲಕ್ಷ್ಮಣ್ ಇದೇ ಪರಿಪಾಠ ಮುಂದುವರೆಸಿದರೆ ಅವರ ವಿರುದ್ಧ ಕಾನೂನು ಹೋರಾಟ ಸಹ ಮಾಡುತ್ತೇವೆ ಎಂದು ಎಚ್ಚರಿಸಿದರು.

ಅಂತೆಯೇ ಬಿಜೆಪಿ ಜಿಲ್ಲಾ ವಕ್ತಾರ ದಯಾನಂದ ಪಟೇಲ್ ಮಾತನಾಡಿ, ಆರ್‌ಎಸ್‌ಎಸ್ ಅಂದರೆ ರಾಷ್ಟ್ರಭಕ್ತಿ ಮೂಡಿಸಿ ವ್ಯಕ್ತಿತ್ವ ಬೆಳೆಸುವ ಸಂಘಟನೆಯಾಗಿದೆ. ಅಂತಹ ಸಂಘಟನೆ ಬಗ್ಗೆ ಬೇಜವಾಬ್ದಾರಿ ಹೇಳಿಕೆ ನೀಡಿರುವ ಲಕ್ಷ್ಮಣ್ ಅವರಿಗೆ ನಾಚಿಕೆಯಾಗುವುದಿಲ್ಲವೇ ಎಂದು ಕಿಡಿಕಾರಿದರು.

ಈ ಸಂದರ್ಭದಲ್ಲಿ ಬಿಜೆಪಿ ಮೈಸೂರು ನಗರ ಮಾಧ್ಯಮ ಸಹ ಸಂಚಾಲಕ ಬಿ.ಎಂ.ಸಂತೋಷ್ ಕುಮಾರ್, ಬಿಜೆಪಿ ಮುಖಂಡರಾದ ಹೆಚ್.ಕೆ.ಭಾಗ್ಯ, ಬಿ.ಎನ್.ಗಂಗಾಧರಪ್ಪ, ದಕ್ಷಿಣಮೂರ್ತಿ ಮತ್ತಿತರರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಛಂಗಾರಿ (ಕ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ತಂಡೇಲ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ದೇವ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ವಿದಾಮುಯರ್ಚಿ (ತ)	4 ಪ್ರದರ್ಶನಗಳು
ಗಾಯಿತ್ರಿ	
ಮಾರ್ಕೋ (ತ)+ ಮಾರ್ಕೋ (ಕ)	1+4 ಪ್ರದರ್ಶನಗಳು
ರಾಜಕಮಲ್	
ವಿದಾಮುಯರ್ಚಿ (ತ)	4 ಪ್ರದರ್ಶನಗಳು
ಸಂಗಂ	
ರಾಯಲ್ (ಕ)	4 ಪ್ರದರ್ಶನಗಳು
ಲಿಡೋ	
ತಲ್ವಾರ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಡಾಕು ಮಹಾರಾಜ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಭಗೀರಥ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ವಿದ್ದಾಮುಯರ್ಚಿ (ತ): ಬೆ.6.55ಕ್ಕೆ, ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.24ಕ್ಕೆ.
ಸ್ಕ್ರೀನ್ 2	ಅಧಿಪತ್ರ (ಕ): ಬೆ.10.10ಕ್ಕೆ, ನೋಡಿದವರು ಏನಂತಾರೆ (ಕ): ಮ.1.15ಕ್ಕೆ, ರುದ್ರ ಗರುಡ ಪುರಾಣ (ಕ): ಸಂ.4.10ಕ್ಕೆ, ಬಡಾಸ್ ರವಿಕುಮಾರ್ (ಹಿಂ): ರಾ.7.10ಕ್ಕೆ, ನರೇ ಅನೀಂಟೆ ಮೂನನ್‌ಮಕ್ಕಲ್ (ಮ): ರಾ.10.10ಕ್ಕೆ.
ಸ್ಕ್ರೀನ್ 3	ಮಿ.ರಾಣಿ (ಕ): ಬೆ.10.30ಕ್ಕೆ, ಲವಯಪಾ (ಹಿಂ): ಮ.1.15ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ಭಗೀರಥ (ಕ): ಸಂ.4.10ಕ್ಕೆ.
ಸ್ಕ್ರೀನ್ 4	ಅನ್‌ಲಾಕ್ ರಾಘವ (ಕ): ಬೆ.10.25ಕ್ಕೆ, ಸ್ಕೈಫೋರ್ಸ್ (ಹಿಂ): ಮ.1.20ಕ್ಕೆ, ಥಂಡೇಲ್ (ತೆ): ಸಂ.4.15ಕ್ಕೆ, ರಾ.7.20ಕ್ಕೆ, ರಾ.10.25ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ರಾಯಲ್ (ಕ): ಬೆ.10.40ಕ್ಕೆ, ರುದ್ರ ಗರುಡ ಪುರಾಣ (ಕ): ಮ.1.30ಕ್ಕೆ, ಸಂ.6.45ಕ್ಕೆ, ಮ್ಯಾಕ್ಸ್ (ಕ): ಸಂ.4.15ಕ್ಕೆ, ಕುಜಂತೈಗಲ್ ಮುನ್ನೇತ್ರ ಕಳಗಂ (ತ): ರಾ.9.30ಕ್ಕೆ.
ಸ್ಕ್ರೀನ್ 2	ಫಾರೆಸ್ಟ್ (ಕ): ಮ.1.05ಕ್ಕೆ, ಮ.3.50ಕ್ಕೆ, ರಾಯಲ್ (ಕ): ಸಂ.6.35ಕ್ಕೆ, ಸ್ಕೈ ಫೋರ್ಸ್ (ಹಿಂ): ರಾ.9.30ಕ್ಕೆ.
ಸ್ಕ್ರೀನ್ 3	ಸ್ಕೈ ಫೋರ್ಸ್ (ಹಿಂ): ಬೆ.11ಕ್ಕೆ, ರಾ.7.05ಕ್ಕೆ, ರಾಯಲ್ (ಕ): ಮ.1.25ಕ್ಕೆ, ಡೊಮಿನಿಕ್ ಅಂಡ್ ದಿ ಲೇಡಿಸ್ ಪರ್ಸ್ (ಮ): ಸಂ.4.15ಕ್ಕೆ, ರಾ.9.30ಕ್ಕೆ.
ಸ್ಕ್ರೀನ್ 4	ಫಾರೆಸ್ಟ್ (ಕ): ಬೆ.10.40ಕ್ಕೆ, ರಾ.9.20ಕ್ಕೆ, ಭೂ ಮಂತರ್ (ಕ): ಮ.1.30ಕ್ಕೆ, ಸಂ.6.40ಕ್ಕೆ, ಸ್ಕೈ ಫೋರ್ಸ್ (ಹಿಂ): ಸಂ.4.15ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಗೃಹ ಸಚಿವರ ವಿರುದ್ಧದ ಹೇಳಿಕೆಗೆ ಖಂಡನೆ



ಮೈಸೂರು: ಕೋಮುಗಲಭೆಗೆ ಅವಕಾಶವಿಲ್ಲದಂತೆ ಶಾಂತವಾಗಿರುವ ರಾಜ್ಯವನ್ನು ಪ್ರಕ್ಷುಬ್ಧಗೊಳಿಸಲು ಸಮಾಜಘಾತುಕ ಶಕ್ತಿಗಳು ನಿರಂತರವಾಗಿ ಪ್ರಯತ್ನಿಸುತ್ತಿವೆ. ಇದರ ಭಾಗವಾಗಿಯೇ ಸಾಮಾಜಿಕ ಜಾಲತಾಣಗಳಲ್ಲಿ ಒಂದು ಧರ್ಮವನ್ನು ಹೀಯ್ಯಾಳಿಸುವ ಪೋಸ್ಟ್‌ಗಳನ್ನು ಹಾಕುವ ಮೂಲಕ ರಾಜಕೀಯ ಮತ್ತು ಧಾರ್ಮಿಕವಾಗಿ ಸ್ನೇಹಮಯ ವಾತಾವರಣ ಹಾಳುಗೆಡವಲು ದುಷ್ಕರ್ಮಿಯೊಬ್ಬ ಯತ್ನಿಸಿದ್ದಾನೆ. ಆತನನ್ನು ಬಂಧಿಸಿ ಪೊಲೀಸರು ಕ್ರಮ ತೆಗೆದುಕೊಂಡಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್ ತಿಳಿಸಿದ್ದಾರೆ. ಅಶೋಕ್ ಸಹ ಈ ಹಿಂದೆ ಗೃಹ ಸಚಿವರಾಗಿದ್ದರು. ಘಟನೆಗೆ ಕಾರಣ ಏನು ಎನ್ನುವುದನ್ನು ಅರಿತಿದ್ದರೂ ಪ್ರಚೋದನಾಕಾರಿ ಹೇಳಿಕೆ ನೀಡುವುದು ಸರಿಯಲ್ಲ. ಪೋಸ್ಟ್ ಮಾಡಿರುವ ದುಷ್ಕರ್ಮಿ ಯಾರು, ಈತನ ಇತಿಹಾಸವೇನು, ಯಾರೊಂದಿಗೆ ಈತ ಒಡನಾಟ ಹೊಂದಿದ್ದ ಎನ್ನುವುದನ್ನು ಗಮನಿಸಿದರೆ, ಈ ವಿಪಕ್ಷ ನಾಯಕರ ಇಬ್ಬಗೆ ನೀತಿ ಬಯಲಾಗುತ್ತದೆ.

ಕಾನೂನು ಕೈಗೆತ್ತಿಕೊಳ್ಳುವುದನ್ನು ಯಾರೂ ಕ್ಷಮಿಸುವುದಿಲ್ಲ. ಗೃಹ ಸಚಿವ ಡಾ. ಪರಮೇಶ್ವರ್ ಅವರು ಎಲ್ಲವನ್ನೂ ಗಮನಿಸಿದ್ದಾರೆ. ಸುಳ್ಳು ಹರಡುವ ವಾಟ್ಸಾಪ್ ಯೂನಿವರ್ಸಿಟಿಯಿಂದ ಹಿಡಿದು ಕಲ್ಲುತೂರುವ ಎಲ್ಲರನ್ನೂ ಕಾನೂನು ಕ್ರಮಕ್ಕೊಳಪಡಿಸುವ ಭರವಸೆಯನ್ನು ಸಚಿವರು ನೀಡಿದ್ದಾರೆ. ಹೀಗಾಗಿ ತಮ್ಮದೇ ಸಂಘಟನೆ ದುಷ್ಕರ್ಮಿಯೋರ್ವನ ಕಿಡಿಗೇಡಿತನದಿಂದ ಹಾಳಾಗಿರುವ ಸಾಮರಸ್ಯವನ್ನು ಒಗ್ಗೂಡಿಸಲು ಬಿಜೆಪಿ ನಾಯಕರು ಕೈಜೋಡಿಸಬೇಕು. ಅದು ಬಿಟ್ಟು ಕೆದಕಿ ಮತ್ತೆ ಬೆಂಕಿ ಹಾಕಲು ನೋಡುವ ಕಿಡಿಗೇಡಿ ಮನಸ್ಥಿತಿಯ ಬಿಜೆಪಿ ನಾಯಕರ ವಿರುದ್ಧವೂ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಮನವಿ ಮಾಡುತ್ತೇನೆ ಎಂದಿದ್ದಾರೆ.

ಮತ್ತೆ ಕಾಂಗ್ರೆಸ್ ಸೇರ್ಪಡೆಯಾದ ಪ್ರಣಬ್ ಮುಖರ್ಜಿ ಪುತ್ರ ಅಭಿಜಿತ್



ಕೋಲ್ಕತ್ತಾ, ಫೆ.12– ನಾಲ್ಕು ವರ್ಷಗಳ ಬಳಿಕ ಮಾಜಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರ ಪುತ್ರ ಅಭಿಜಿತ್ ಮುಖರ್ಜಿ ಬುಧವಾರ ಮತ್ತೆ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು. ಇಲ್ಲಿಯವರೆಗೂ ಅವರು ತೃಣಮೂಲ ಕಾಂಗ್ರೆಸ್‌ನಲ್ಲಿದ್ದರು. ರಾಜ್ಯ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ, ಪಶ್ಚಿಮಬಂಗಾಳ ಉಸ್ತುವಾರಿ ಅಹ್ಮದ್ ಮಿರ್ ಅವರ ಸಮ್ಮುಖದಲ್ಲಿ ಪಕ್ಷ ಸೇರ್ಪಡೆಯಾದ ಮಾಜಿ ಸಂಸದರಿಗೆ ಕಾಂಗ್ರೆಸ್ ಪಕ್ಷದ ಸದಸ್ಯತ್ವ ನೀಡಲಾಯಿತು. ರಾಷ್ಟ್ರ ಹಾಗೂ ರಾಜ್ಯ ನಾಯಕರು ಅವರಿಗೆ ಪಕ್ಷದ ಧ್ವಜ ನೀಡುವ ಮೂಲಕ ಪಕ್ಷಕ್ಕೆ ಸೇರ್ಪಡೆ ಮಾಡಿಕೊಂಡರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಎರಡನೇ ಬಾರಿಗೆ ಕಾಂಗ್ರೆಸ್ ಸೇರಿದ್ದೇನೆ. ಕಳೆದ ವರ್ಷ ಜೂನ್‌ನಲ್ಲಿಯೇ ಪಕ್ಷ ಸೇರಲು ಬಯಸಿದ್ದೆ. ಆದರೆ, ವಿವಿಧ ರಾಜ್ಯಗಳ ಚುನಾವಣೆಯಿಂದಾಗಿ ಮುಂದೂಡಲ್ಪಟ್ಟಿದ್ದ ಪಕ್ಷ ಸೇರ್ಪಡೆ ಕಾರ್ಯಕ್ರಮ ಇಂದು ನೆರವೇರಿದೆ ಎಂದರು. ಜುಲೈ 2021ರಲ್ಲಿ ತೃಣಮೂಲ ಕಾಂಗ್ರೆಸ್ ಸೇರ್ಪಡೆಯಾಗಿದ್ದ ಅಭಿಷೇಕ್ ಮುಖರ್ಜಿ 4 ವರ್ಷಗಳ ಬಳಿಕ ಕಾಂಗ್ರೆಸ್‌ಗೆ ಮರಳಿದ್ದಾರೆ. ಪಶ್ಚಿಮಬಂಗಾಳದ ಜನರ ಪರವಾಗಿ ಹೋರಾಟ ನಡೆಸಲು ಪಕ್ಷದ ರಾಜ್ಯ ಘಟಕಕ್ಕೆ ಇದು ದೊಡ್ಡ ಹೆಜ್ಜೆಯಾಗಿದೆ ಎಂದು ಪಶ್ಚಿಮ ಬಂಗಾಳ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸುಭಾಂಕರ್ ಸರ್ಕಾರ್ ಹೇಳಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಸ್ಥಾನದ ಬದಲಾವಣೆಯ ಸುಳಿವು ನೀಡಿದ ಮಲ್ಲಿಕಾರ್ಜುನ ಖರ್ಗೆ



ಕಲಬುರಗಿ, ಫೆ.12– ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ರಾಜ್ಯ ಕಾಂಗ್ರೆಸ್ ನಾಯಕರು ನಡುವೆ ಪೈಪೋಟಿ ಈಗಾಗಲೇ ಆರಂಭವಾಗಿದ್ದು, ಈ ಮಧ್ಯೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಹತ್ವದ ಹೇಳಿಕೆ ನೀಡಿದ್ದಾರೆ. ಕಲಬುರಗಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ಇನ್ನೆರಡು ದಿನಗಳಲ್ಲಿ ಎಲ್ಲವೂ ಸ್ಪಷ್ಟವಾಗಲಿದೆ. ಇನ್ನು ಎಂಟು ದಿನಗಳಲ್ಲಿ ನಮ್ಮಿಂದಲೇ ಪ್ರಕಟಣೆ ಹೊರಬೀಳಲಿದೆ ಎಂದು ಸ್ಪಷ್ಟಪಡಿಸಿದರು.

ಒಡಿಶಾದಲ್ಲಿ ಪಿಸಿಸಿ ಅಧ್ಯಕ್ಷರ ಬದಲಾವಣೆ ಮಾಡಿ ಬಂದಿದ್ದೇನೆ. ಅಲ್ಲಿ ಹಿಂದುಳಿದ ವರ್ಗದವರು ಪಿಸಿಸಿ ಅಧ್ಯಕ್ಷರಾಗಿದ್ದಾರೆ. ಬೇರೆ ರಾಜ್ಯಗಳಲ್ಲೂ ಕೆಲವೇ ದಿನಗಳಲ್ಲಿ ಅಧ್ಯಕ್ಷರ ಬದಲಾವಣೆ ಆಗುತ್ತದೆ. ಈ ಬಗ್ಗೆ ನಿರ್ದಿಷ್ಟವಾಗಿ ನಾನು ಹೇಳಲು ಸಾಧ್ಯವಾಗುವುದಿಲ್ಲ. ನಾವು ಒಂದೊಂದು ರಾಜ್ಯಗಳಲ್ಲಿ ಬದಲಾವಣೆ ಮಾಡುತ್ತಿದ್ದೇವೆ. ಒಂದೆರಡು ದಿನದಲ್ಲಿ ಮತ್ತೆ ಒಂದೆರಡು ರಾಜ್ಯಗಳಲ್ಲಿ ಬದಲಾವಣೆ. 8 ದಿನಗಳಲ್ಲಿ ಎಲ್ಲಾ ಪ್ರಕ್ರಿಯೆ ಮುಗಿಯಲಿದೆ ಎಂದರು.

ದಲಿತ ನಾಯಕರಾದ ಡಾ.ಜಿ.ಪರಮೇಶ್ವರ್, ಪ್ರಿಯಾಂಕ್ ಖರ್ಗೆ ಮತ್ತಿತರರು ತಮ್ಮನ್ನು ಭೇಟಿಯಾದ ಬಗ್ಗೆ ಪ್ರತಿಕ್ರಿಯಿಸಿ, ಅವರಿವರು ಬಂದು ಭೇಟಿಯಾಗುತ್ತಲೇ ಇರುತ್ತಾರೆ. ನಾನು ಎಐಸಿಸಿ ಅಧ್ಯಕ್ಷನಾಗಿದ್ದೇನೆ. ಅದರಲ್ಲಿ ಯಾವ ದೊಡ್ಡ ಮಾತಿದೆ ಎಂದರು.

ಅಂತರ ಕಾಲೇಜು ಚರ್ಚಾ ಸ್ಪರ್ಧೆ, ಪ್ರಬಂಧ ಸ್ಪರ್ಧೆ; ಶಾಸ್ತ್ರೀಯ ಸಂಗೀತ ವಾದ್ಯಗಳ ಸ್ಪರ್ಧೆ

ಮೈಸೂರು, ಫೆ. 12– ವೃದ್ಧ ಪಿತಾಮಹ ದಯಾಸಾಗರ ಎಂ. ವೆಂಕಟೇಶಯ್ಯ (ತಾತಯ್ಯ) ಅವರ ಅನಾಥಾಲಯ ಸಂಸ್ಥೆಯ ಸಾಹಿತ್ಯ ಸಂಘದ ವತಿಯಿಂದ ಲೋಕಸೇವಾನಿರತ ವಿ. ನಾರಾಯಣ ರಾವ್ ಸ್ಮಾರಕ ಅಂತರ ಕಾಲೇಜು ಕನ್ನಡ ಚರ್ಚಾ ಸ್ಪರ್ಧೆ, ಶಾಸ್ತ್ರೀಯ ಸಂಗೀತ ವಾದ್ಯ ಸ್ಪರ್ಧೆ ಮತ್ತು ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಫೆ.16 ರಂದು ಬೆಳಗ್ಗೆ 9 ಗಂಟೆಗೆ ಪ್ರಬಂಧ ಸ್ಪರ್ಧೆ, 11 ಗಂಟೆಗೆ ಶಾಸ್ತ್ರೀಯ ಸಂಗೀತ ವಾದ್ಯ ಸ್ಪರ್ಧೆಯನ್ನು ನಾರಾಯಣ ಶಾಸ್ತ್ರಿ ರಸ್ತೆಯಲ್ಲಿನ ಸದ್ವಿದ್ಯಾ ಶಿಕ್ಷಣ ಸಂಸ್ಥೆಯಲ್ಲಿ ಹಾಗೂ ಫೆ.23 ರಂದು ಬೆಳಗ್ಗೆ 10 ಗಂಟೆಗೆ ಶಾಂತಲಾ ಚಿತ್ರಮಂದಿರದ ಪಕ್ಕದಲ್ಲಿರುವ ಅನಾಥಾಲಯ ಸಂಸ್ಥೆಯಲ್ಲಿ ಚರ್ಚಾ ಸ್ಪರ್ಧೆ ನಡೆಯಲಿದೆ. ಚರ್ಚಾ ಸ್ಪರ್ಧೆಗೆ ಕಾಲೇಜಿನ ಇಬ್ಬರು ವಿದ್ಯಾರ್ಥಿಗಳಲ್ಲಿ ಒಬ್ಬರು ವಿಷಯದ ಪರ ಹಾಗೂ ಮತ್ತೊಬ್ಬರು ವಿರೋಧವಾಗಿ ಮಾತನಾಡಬೇಕು.

ಸ್ಪರ್ಧಿಗಳು ಕಾಲೇಜಿನ ಗುರುತಿನ ಚೀಟಿ ಮತ್ತು ಅನುಮತಿ ಪತ್ರದೊಂದಿಗೆ ಹಾಜರಿರಬೇಕು. ವಿಜೇತರಿಗೆ ಪ್ರಥಮ ಬಹುಮಾನ ರೂ.8000, ದ್ವಿತೀಯ ಬಹುಮಾನ ರೂ.5000 ಮತ್ತು ತೃತೀಯ ಬಹುಮಾನ ರೂ.3000 ನೀಡಲಾಗುವುದು. ಹೆಚ್ಚಿನ ಮಾಹಿತಿಗೆ ಮೊ. 9591563181, 9482698001 ಸಂಪರ್ಕಿಸಬಹುದು.

ಡಿಸಿಎಂ ಡಿಕೆಶಿ–ಸಚಿವ ರಾಜಣ್ಣ ನಡುವೆ ಮಾತಿನ ಸಮರ



ಶಿವಕುಮಾರ್



ರಾಜಣ್ಣ

ಬೆಂಗಳೂರು,ಫೆ.12(ಕೆಎಂಶಿ)–ಮೈಸೂರಿನ ಉದಯಗಿರಿ ಘಟನೆ ವಿಚಾರವಾಗಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಸಹಕಾರಿ ಸಚಿವ ಕೆ.ಎನ್. ರಾಜಣ್ಣ ನಡುವೆ ಮಾತಿನ ಸಮರವೇ ನಡೆದಿದೆ. ಉದಯಗಿರಿ ಪೊಲೀಸರು ತಪ್ಪು ಮಾಡಿದ್ದಾರೆಂದು ರಾಜಣ್ಣ 'ಪೊಲೀಸರಿಗೆ ಕಾಮನ್‌ಸೆನ್ಸ್ ಇಲ್ಲ' ಎಂದು ಹೇಳಿಕೆ ನೀಡಿದ್ದರು. ಅದಕ್ಕೆ ತಿರುಗೇಟು ನೀಡಿರುವ ಶಿವಕುಮಾರ್, ಮೈಸೂರು ಪೊಲೀಸರ ಕ್ರಮ ಸರಿಯಾಗಿದೆ, ಅವರು ಯಾವುದೇ ತಪ್ಪು ಮಾಡಿಲ್ಲ ಎಂದಿದ್ದರು. ಇದಕ್ಕೆ ಖಾರವಾಗಿ ಪ್ರತಿಕ್ರಿಯಿಸಿರುವ ರಾಜಣ್ಣ, 'ಕುಬೇರರ ಮಾತಿಗೆ ಪ್ರತಿಕ್ರಿಯೆ ನೀಡುವುದರಲ್ಲಿ ಅರ್ಥವಿಲ್ಲ. ಜನಸಾಮಾನ್ಯರ ನೋವುಗಳನ್ನು ಅರಿತು ನಾನು ಈ ಮಾತನ್ನು ಹೇಳಿದ್ದೇನೆಯೇ ಹೊರತು ಬೇರೆ ಉದ್ದೇಶದಿಂದ ಅಲ್ಲ'.

ಆರೋಪಿಯನ್ನು ಘಟನಾ ಪ್ರದೇಶದ ಠಾಣೆಗೆ ಕರೆದುಕೊಂಡು ಹೋದರೆ, ಇಂತಹದ್ದೇ ಪರಿಸ್ಥಿತಿ ಎದುರಾಗುತ್ತದೆ, ಅಷ್ಟೂ ಪರಿಜ್ಞಾನ ಇಲ್ಲವೇ ಈ ಪೊಲೀಸರಿಗೆ ಎಂದಿದ್ದಾರೆ. ಈ ಮಧ್ಯೆ ಸುದ್ದಿಗಾರರೊಂದಿಗೆ ಮಾತನಾಡಿದ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಉದಯಗಿರಿ ಘಟನೆಗೆ ಸಂಬಂಧಿಸಿದಂತೆ ಆರೋಪಿಗಳನ್ನು ಬಂಧಿಸಿದ್ದೇವೆ. ಇದರಲ್ಲಿ ಪೊಲೀಸರ ವೈಫಲ್ಯ ಇಲ್ಲ. ಆರೋಪಿಯನ್ನು ತಮ್ಮ ವಶಕ್ಕೆ ಕೊಡಿ ಎಂದರೆ, ನೀಡಲು ಆಗುತ್ತದೆಯೇ, ಕಾನೂನನ್ನೇ ಅವರ ಕೈಗೆ ಕೊಡಲು ಆಗುವುದೇ, ನಾವು ಕಠಿಣವಾದ ಕ್ರಮ ಕೈಗೊಳ್ಳುತ್ತೇವೆ, ಆರೋಪಿಗಳನ್ನು ಸುಮ್ಮನೆ ಬಿಡಲ್ಲ. ಯಾರ ಮುಲಾಜಿಗೂ ಒಳಗಾಗದೆ ಕ್ರಮ ಕೈಗೊಳ್ಳುತ್ತೇವೆ, ಠಾಣೆಗೆ ಕಲ್ಲು ಹೊಡೆಯುತ್ತಾರೆ, ಕಾರು, ಬೈಕ್ ಜಖಂ ಮಾಡುತ್ತಾರೆಂದರೆ, ಅಂತಹವರನ್ನು ಸುಮ್ಮನೆ ಬಿಡಲು ಆಗುವುದಿಲ್ಲ. ಕ್ಯಾಮೆರಾ ಮೂಲಕ ಗಲಭೆಕೋರರನ್ನು ಗುರುತಿಸಿ, ಪತ್ತೆ ಹಚ್ಚಿ, ಕೆಲವರನ್ನು ವಶಕ್ಕೆ ಪಡೆಯಲಾಗಿದೆ ಎಂದು ಪರಮೇಶ್ವರ್ ಹೇಳಿದ್ದಾರೆ.

ಕಂದಾಯ ಇಲಾಖೆ ಸಹಕಾರ ಸಂಘಕ್ಕೆ ಆಯ್ಕೆ

ಮೈಸೂರು, ಫೆ.12– ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಕಂದಾಯ ಇಲಾಖಾ ನೌಕರರ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಎಂ. ನೀಲಕಂಠಸ್ವಾಮಿ, ಉಪಾಧ್ಯಕ್ಷರಾಗಿ ಬಿ. ರಾಮಚಂದ್ರ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಚುನಾವಣಾಧಿಕಾರಿ ಬಿ.ಡಿ. ಸುಮಲತಾ ಕಾರ್ಯ ನಿರ್ವಹಿಸಿದರು.

ಇಂದು ಲೋಕಸಭೆಯಲ್ಲಿ ಹೊಸ, ಸರಳೀಕೃತ ತೆರಿಗೆ ಮಸೂದೆ ಮಂಡನೆ

ನವದೆಹಲಿ, ಫೆ.12– ನಾಳೆ (ಫೆ.13) ಸಂಸತ್ತಿನಲ್ಲಿ ಮಂಡಿಸಲಾಗುವ ಹೊಸ ಆದಾಯ ತೆರಿಗೆ ಮಸೂದೆಯು 23 ಅಧ್ಯಾಯಗಳು, 536 ವಿಭಾಗಗಳು ಮತ್ತು 16 ವೇಳಾಪಟ್ಟಿಗಳನ್ನು ಹೊಂದಿರುತ್ತವೆ. ಈಗಿರುವ ಮಸೂದೆಗಿಂತ ದೀರ್ಘವಾಗಿದೆ. ಪ್ರಸ್ತುತ ಆದಾಯ ತೆರಿಗೆ ಕಾಯ್ದೆ 23 ಅಧ್ಯಾಯಗಳು, 298 ವಿಭಾಗಗಳು ಮತ್ತು 14 ವೇಳಾಪಟ್ಟಿಗಳನ್ನು ಹೊಂದಿದೆ.

ವಿಭಾಗಗಳ ಸಂಖ್ಯೆಯಲ್ಲಿನ ಹೆಚ್ಚಳವು ತೆರಿಗೆ ಆಡಳಿತಕ್ಕೆ ಹೆಚ್ಚು ರಚನಾತ್ಮಕ ವಿಧಾನವನ್ನು ಪ್ರತಿಬಿಂಬಿಸುತ್ತದೆ, ಆಧುನಿಕ ಅನುಸರಣೆ ಕಾರ್ಯವಿಧಾನಗಳು, ಡಿಜಿಟಲ್ ಆಡಳಿತ ಮತ್ತು ವ್ಯವಹಾರಗಳು ಮತ್ತು ವ್ಯಕ್ತಿಗಳಿಗೆ ಸುವ್ಯವಸ್ಥಿತ ನಿಬಂಧನೆಗಳನ್ನು ಒದಗಿಸುತ್ತದೆ.

ವಿದ್ಯುತ್ ವಾಹನಗಳ ಖರೀದಿಗೆ ಕಡಿತವನ್ನು ಪ್ರಸ್ತಾಪಿಸುತ್ತದೆ, ದೇಣಿಗೆ ನಿಯಮಗಳನ್ನು ಪರಿಷ್ಕರಿಸುತ್ತದೆ. ವೈದ್ಯಕೀಯ ಮತ್ತು ಶಿಕ್ಷಣ ಸಂಬಂಧಿತ ಕಡಿತವನ್ನು ನವೀಕರಿಸುತ್ತದೆ. ಇದು ಕ್ರಿಪ್ಟೋ–ಸ್ವತ್ತುಗಳು ಮತ್ತು ಡಿಜಿಟಲ್ ವಹಿವಾಟುಗಳಿಗೆ ಬಲವಾದ ನಿಯಮಗಳನ್ನು ಮತ್ತು ಸರಳೀಕೃತ ಮರುಪಾವತಿ ಪ್ರಕ್ರಿಯೆಯನ್ನು ಪ್ರಸ್ತಾಪಿಸುತ್ತದೆ. ವರದಿ ಮಾಡುವ ಪ್ರಕ್ರಿಯೆಯನ್ನು ಸುಗಮಗೊಳಿಸಲು ಮಸೂದೆಯು 'ಹಿಂದಿನ ವರ್ಷ' ಬದಲಿಗೆ 'ತೆರಿಗೆ ವರ್ಷ' ಎಂಬ ಪದವನ್ನು ಬಳಸುತ್ತದೆ. ಹೊಸ ಮಸೂದೆಯಡಿಯಲ್ಲಿ, ನೇರ ತೆರಿಗೆಗಳ ಕೇಂದ್ರ ಮಂಡಳಿ ಮತ್ತು ಹಣಕಾಸು ಸಚಿವಾಲಯವು ನಿಯೋಜಿತ ಶಾಸನದ ಮೂಲಕ ನಿಯಮಗಳು, ಅಧಿಸೂಚನೆಗಳು ಮತ್ತು ವಿನಾಯಿತಿಗಳನ್ನು ನೀಡಲು ಹೆಚ್ಚಿನ ಅಧಿಕಾರವನ್ನು ಪಡೆಯುತ್ತದೆ.

2026ರ ಏಪ್ರಿಲ್ 1ಕ್ಕೆ ಹೊಸ ತೆರಿಗೆ ಜಾರಿ: ಏಪ್ರಿಲ್ 1, 2026ರಿಂದ ಅಸ್ತಿತ್ವದಲ್ಲಿರುವ ಐಟಿ ಕಾಯ್ದೆಯನ್ನು ರದ್ದುಗೊಳಿಸಲಾಗುವುದು. ಸಂಸತ್ತು ಹೊಸ ಮಸೂದೆಯನ್ನು ಅಂಗೀಕರಿಸಿದ ನಂತರ, ಇದು 1962ರಿಂದ ಜಾರಿಯಲ್ಲಿರುವ ಅಸ್ತಿತ್ವದಲ್ಲಿರುವ ಆದಾಯ ತೆರಿಗೆ ಕಾಯ್ದೆಯನ್ನು ಬದಲಾಯಿಸುತ್ತದೆ. ಈ ಕಾಯ್ದೆಯನ್ನು ಏಪ್ರಿಲ್ 1, 2026ರಿಂದ ಜಾರಿಗೆ ತರಲಾಗುವುದು. ಏಪ್ರಿಲ್ 1, 2026ರ ಹಿಂದಿನ ವರ್ಷಗಳ ತೆರಿಗೆ ಪ್ರಕ್ರಿಯೆಗಳು 1961ರ ಕಾಯ್ದೆಯ ನಿಬಂಧನೆಗಳನ್ನು ಅನುಸರಿಸುತ್ತವೆ ಹೊಸ ಮಸೂದೆಯು 600 ಪುಟಗಳನ್ನು ಹೊಂದಿರುತ್ತದೆ.

ಕರ್ನಾಟಕದಲ್ಲಿ 8,000 ಕೋಟಿ ರೂ. ಹೂಡಿಕೆ: ವಿಪ್ರೋ–ಜಿಇ ಹೆಲ್ತ್‌ಕೇರ್ ಘೋಷಣೆ



ಬೆಂಗಳೂರು, ಫೆ.12– ವಿಪ್ರೋ–ಜಿಇ ಹೆಲ್ತ್‌ಕೇರ್ ಸಂಸ್ಥೆಯು ಕರ್ನಾಟಕದ ಆರೋಗ್ಯ ಸೇವೆಗಳ ಕ್ಷೇತ್ರದಲ್ಲಿ ಮುಂದಿನ 5 ವರ್ಷಗಳಲ್ಲಿ ಇನ್ನೂ 8,000 ಕೋಟಿ ರೂ. ಹೂಡಿಕೆ ಮಾಡಲಿದೆ. ಇದು ಕಳೆದ ಎರಡು ದಶಕಗಳಲ್ಲಿ ವಿನಿಯೋಗಿಸಿರುವ 32 ಸಾವಿರ ಕೋಟಿ ರೂ. ಬಂಡವಾಳದ ಮುಂದುವರಿದ ಭಾಗವಾಗಿದೆ ಎಂದು ಕಂಪನಿಯ ದಕ್ಷಿಣ ಏಷ್ಯಾ ವಿಭಾಗದ ಮುಖ್ಯಸ್ಥ ಚೈತನ್ಯ ಸರವಟೆ ಹೇಳಿದ್ದಾರೆ.

ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ನಡೆದ 'ಜಗತ್ತಿನ ಅಗತ್ಯಗಳಿಗೆ ಮೇಕ್ ಇನ್ ಇಂಡಿಯಾ ಉಪಕ್ರಮ' ಗೋಷ್ಠಿಯಲ್ಲಿ ಅವರು ಮಾತನಾಡಿದರು.

ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ವಿಪ್ರೋ–ಜಿಇ ಕೇವಲ ಕಿಲೋಮೀಟರ್ ಅಂತರದಲ್ಲಿ ನಾಲ್ಕು ಉತ್ಪಾದನಾ ಘಟಕಗಳನ್ನು ಹೊಂದಿದ್ದು, ಇಲ್ಲಿ 30ಕ್ಕೂ ಹೆಚ್ಚು ಔಷಧೋತ್ಪನ್ನಗಳನ್ನು ಸಿದ್ಧಪಡಿಸಲಾಗುತ್ತಿದೆ. ಜೊತೆಗೆ 5 ಸಾವಿರಕ್ಕೂ ಹೆಚ್ಚು ಸಿಬ್ಬಂದಿಯಿರುವ ಆರ್ ಅಂಡ್ ಡಿ ಕೇಂದ್ರವನ್ನೂ ವಿಪ್ರೋ ಹೊಂದಿದೆ. ಸಮಾಜದ ಋಣವನ್ನು ತೀರಿಸುವ ನೈತಿಕ ಹೊಣೆಗಾರಿಕೆ ಅರಿತು ಸರಕಾರದ ಹಲವು ಯೋಜನೆಗಳಲ್ಲೂ ಕಂಪನಿ ಕೈಜೋಡಿಸಿದೆ. ಜತೆಗೆ ರಾಯಚೂರಿನಂತಹ ಹಿಂದುಳಿದ ಜಿಲ್ಲೆಗಳಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೆ ಏರಿಸಲಾಗಿದೆ ಎಂದು ಅವರು ಮಾಹಿತಿ ನೀಡಿದರು.

ವಿಪ್ರೋ–ಜಿಇ ಹೆಲ್ತ್ ಕೇರ್ ಇದುವರೆಗೆ 30 ಕೋಟಿ ರೋಗಿಗಳಿಗೆ ತನ್ನ ಸೇವೆಗಳನ್ನು ಒದಗಿಸಿದೆ. ಬೇಡಿಕೆ, ಸಾಮರ್ಥ್ಯ ಮತ್ತು ಜನಸಂಖ್ಯೆಗಳೇ ಕರ್ನಾಟಕ ಮತ್ತು ಭಾರತದ ಶಕ್ತಿಗಳಾಗಿವೆ. ವಿಶೇಷವಾಗಿ ಬೆಂಗಳೂರು ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ಪೋಷಿಸುವ ಸಂಸ್ಕೃತಿ ಹೊಂದಿದೆ ಎಂದು ಸರವಟೆ ನುಡಿದರು.

ಬೆಳಗಾವಿ ಏರೋಸ್ಪೇಸ್ ಕೇಂದ್ರ: ಇದೇ ಗೋಷ್ಠಿಯಲ್ಲಿ ಮಾತನಾಡಿದ ಏಕಸ್ ಕಂಪನಿ ಸಿಇಒ ಅರವಿಂದ್ ಮೆಳ್ಳಿಗೇರಿ, ಬೆಳಗಾವಿಯು ದೇಶದ ವೈಮಾಂತರಿಕ್ಷ ವಲಯದ ಕೇಂದ್ರವಾಗಿ ಹೊರಹೊಮ್ಮಿದ್ದು, ಈ ವಲಯದ ಶೇ. 70ರಷ್ಟು ಬಿಡಿಭಾಗಗಳನ್ನು ಪೂರೈಸುತ್ತಿದೆ. ಇವುಗಳ ಗುಣಮಟ್ಟವು ಯಾವುದೇ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ತಯಾರಾಗುವ ಸಾಧನಗಳಿಗಿಂತ ಕಿಂಚಿತ್ತೂ ಕಡಿಮೆ ಇಲ್ಲ. ಸರಕಾರವು ಮೂಲಸೌಕರ್ಯ ಅಭಿವೃದ್ಧಿಗೆ ಇನ್ನಷ್ಟು ಗಮನ ಹರಿಸಿದರೆ, ಇಡೀ ಜಗತ್ತು ಬೆಳಗಾವಿಯತ್ತ ನೋಡುವ ದಿನ ದೂರವಿಲ್ಲ ಎಂದರು.

ದೇಶದಲ್ಲಿ 15 ವರ್ಷಗಳಲ್ಲಿ ಸಾಕಷ್ಟು ಸುಧಾರಣೆಯಾಗಿದ್ದು, ದ್ವಿತೀಯ ಸ್ತರದ ನಗರಗಳಿಗೂ ವಿಮಾನ ಸಂಪರ್ಕ ಸಾಧ್ಯವಾಗಿದೆ. ಏಕಸ್ ಮೂರು ಜಂಟಿ ಸಹಭಾಗಿತ್ವ ಹೊಂದಿದ್ದು, 2 ಮಿಲಿಯನ್ ಗಂಟೆಗಳಷ್ಟು ಅಗಾಧ ಉತ್ಪಾದನಾ ವ್ಯವಸ್ಥೆಯನ್ನು ರೂಪಿಸಿಕೊಂಡಿದೆ. ಚೀನಾಕ್ಕೆ ಹೋಲಿಸಿದರೆ ನಮ್ಮಲ್ಲಿ ವೆಚ್ಚವು ಮೂರನೇ ಒಂದು ಭಾಗದಷ್ಟು ಕಡಿಮೆ ಇದೆ. ಈ ನಿಟ್ಟಿನಲ್ಲಿ ಬೆಳಗಾವಿ ಮತ್ತು ಹುಬ್ಬಳ್ಳಿಯಲ್ಲಿ 5,000 ವೃತ್ತಿಪರರು ಹಗಲಿರುಳೂ ದುಡಿಯುತ್ತಿದ್ದಾರೆ ಎಂದು ವಿವರಿಸಿದ್ದಾರೆ.

ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

ಮೈಸೂರು,ಫೆ.12–2024–25ನೇ ಸಾಲಿನ ಸಮಾಜ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾತಿ ಪಡೆಯಲು ಬಯಸುವ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳು ವೆಬ್‌ಸೈಟ್ https://swdhmis.karnataka.gov.in/#/registration ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಅವಧಿಯನ್ನು ಫೆ.28ವರೆಗೆ ವಿಸ್ತರಿಸಲಾಗಿದೆ. ಅರ್ಜಿ ಸಲ್ಲಿಸಿದ ನಂತರ ಆನ್‌ಲೈನ್ ಅರ್ಜಿ ಪ್ರತಿಯೊಂದಿಗೆ ದೃಢೀಕೃತ ದಾಖಲೆಗಳನ್ನು ಆಯ್ಕೆ ಮಾಡಿರುವ ವಿದ್ಯಾರ್ಥಿನಿಲಯಗಳ ಮೇಲ್ವಿಚಾರಕರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ಪಡುವಾರಹಳ್ಳಿಯ ಆದಿಪಂಪ ರಸ್ತೆ, ಒಂಟಿಕೊಪ್ಪಲು ಪೂರ್ವ ಬಡಾವಣೆಯ ಡಾ.ಬಾಬು ಜಗಜೀವನರಾಂ ಭವನ ಕಟ್ಟಡದ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಗ್ರೇಡ್–1 ಅವರ ದೂ.:0821–2520910 ಅನ್ನು ಸಂಪರ್ಕಿಸಬಹುದು ಎಂದು ಮೈಸೂರು ತಾಲೂಕಿನ ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರು ಗ್ರೇಡ್–1 ತಿಳಿಸಿದ್ದಾರೆ.

ಶಾಲೆಗಳಲ್ಲಿ ನೀತಿ ಕಥೆಗಳ ಕ್ಲಾಸ್ ನಡೆಸಬೇಕು...

●ರಾಜ್ಯಸಭೆಯಲ್ಲಿ ಸುಧಾಮೂರ್ತಿ ಪ್ರತಿಪಾದನೆ ●ನೈತಿಕ ಮೌಲ್ಯವಿಲ್ಲದೆ ಮಗು ಉತ್ತಮ ನಾಗರಿಕನಾಗಲ್ಲ



ನವದೆಹಲಿ, ಫೆ.12–ಮಕ್ಕಳಿಗೆ ಮೌಲ್ಯಯುತ ಶಿಕ್ಷಣ ನೀಡದೇ ಹೋದರೆ ಅವರು ಸುಶಿಕ್ಷಿತರಾಗುತ್ತಾರೆಯೇ ಹೊರತು ದೇಶಕ್ಕೆ ಉತ್ತಮ ನಾಗರಿಕರಾಗುವುದಿಲ್ಲ ಎಂದು ರಾಜ್ಯಸಭೆ ಸದಸ್ಯೆ ಸುಧಾಮೂರ್ತಿ ಅಭಿಪ್ರಾಯಪಟ್ಟಿದ್ದಾರೆ.

ಮಕ್ಕಳಿಗೆ ಮೌಲ್ಯಯುತ ಶಿಕ್ಷಣ ನೀಡುವ ಬಗ್ಗೆ ಸಂಸತ್‌ನಲ್ಲಿ ಮಾತನಾಡಿದ ಅವರು, ನೈತಿಕ ಮೌಲ್ಯ ಇಲ್ಲದ ಮಗು ಉತ್ತಮ ನಾಗರಿಕನಾಗಲು ಅಸಾಧ್ಯ ಎಂದಿದ್ದಾರೆ.

ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಈ ಬಾರಿಯ ಬಜೆಟ್ ಬಗ್ಗೆ ಪ್ರಶಂಸೆ ವ್ಯಕ್ತಪಡಿಸುತ್ತಲೇ ಮಾತು ಆರಂಭಿಸಿದ ಸುಧಾಮೂರ್ತಿ, ಮಕ್ಕಳಲ್ಲಿ ನೈತಿಕ ಮೌಲ್ಯಗಳನ್ನು ಬೆಳೆಸುವ ಶಿಕ್ಷಣ ನೀಡಬೇಕೆಂದರು. ಪ್ರಸ್ತುತ ನಾವು ಎಐ, ತಾಂತ್ರಿಕ, ವಿಜ್ಞಾನ, ಗಣಿತ ಹೀಗೆ ಹಲವಾರು ರೀತಿಯ ಶಿಕ್ಷಣ ಮಕ್ಕಳಿಗೆ ನೀಡುತ್ತಿದ್ದೇವೆ. ಆದರೆ ಮೌಲ್ಯಯುತ ಶಿಕ್ಷಣ ನೀಡುವಲ್ಲಿ ವಿಫಲರಾಗಿದ್ದೇವೆ ಎಂದು ಹೇಳಿದ್ದಾರೆ.

ತಮ್ಮ ಮಕ್ಕಳು ಹೇಳಿದ ಮಾತು ಕೇಳುತ್ತಿಲ್ಲ ಎಂದು ಅನೇಕ ಪೋಷಕರು ದೂರುತ್ತಾರೆ. ಇದಕ್ಕೆ ಯಾವುದೇ ತಕ್ಷಣದ ಪರಿಹಾರ ಇಲ್ಲ. ಆದರೆ ಸಮಸ್ಯೆಗೆ ಪರಿಹಾರ ಅಂತು ಖಂಡಿತ ಇದ್ದೇ ಇದೆ. ಮಕ್ಕಳ ಮನಸ್ಸು ಹಸಿಗೋಡೆ ಇದ್ದಂತೆ. ಅಲ್ಲಿ ನಾವು ಯಾವುದನ್ನು ಎಸೆಯುತ್ತೇವೆಯೋ ಅದೇ ಅಚ್ಚಳಿಯದೇ ಉಳಿಯುತ್ತದೆ. ಹಾಗಾಗಿ ಮಕ್ಕಳನ್ನು ಮಕ್ಕಳ ದಾರಿಯಲ್ಲೇ ಹೋಗಿ ಮೌಲ್ಯಯುತ ಶಿಕ್ಷಣ ನೀಡಬೇಕು. ಮಕ್ಕಳಿಗೆ ಹಲವು ನೀತಿಕಥೆಗಳ ಮೂಲಕ ಬದುಕಿನ ಏಳು–ಬೀಳುಗಳ ಬಗ್ಗೆ ಮನವರಿಕೆ ಮಾಡಬಹುದು. ಕರ್ನಾಟಕದ ಒಂದು ಶಾಲೆಯಲ್ಲಿ ನಾವು ಇದನ್ನು ಪ್ರಾಯೋಗಿಕವಾಗಿ ಜಾರಿಗೊಳಿಸಿ ಯಶಸ್ವಿಯಾಗಿದ್ದೇವೆ ಎಂದರು.

ಸ್ಮೃತಿ ಮತ್ತು ಶ್ರುತಿ ಎರಡೂ ಬಹಳ ಮುಖ್ಯ. ಶಾಲೆಗಳಲ್ಲಿ ಪೌರಾಣಿಕ ಕಥೆಗಳು, ನೀತಿಕಥೆಗಳನ್ನು ಹೇಳುವ ಮೂಲಕ ಮಕ್ಕಳನ್ನು ಸುಲಭವಾಗಿ ಸೆಳೆಯಬಹುದು. ಇಂತಹ ಕಥೆಗಳನ್ನು ಮಕ್ಕಳಿಗೆ ಸರಿಯಾದ ವಯಸ್ಸಿನಲ್ಲಿ ಸರಿಯಾದ ರೀತಿಯಲ್ಲಿ ಹೇಳಬೇಕಿದೆ. ಆ ಮೂಲಕವೇ ಅವರಲ್ಲಿ ಮೌಲ್ಯಗಳು ಬೆಳೆಯಲು ಸಾಧ್ಯ. ಮಕ್ಕಳನ್ನು ಇಂತಹ ಕಾರ್ಯಕ್ರಮಗಳಿಂದ ಮಾತ್ರ ಶಾಲೆಯತ್ತ ಸೆಳೆಯಲು ಸಾಧ್ಯ. ಕೇಂದ್ರ ಸರ್ಕಾರ ಹೊಸ ಶಿಕ್ಷಣ ನೀತಿ ಶಿಕ್ಷಣ ವ್ಯವಸ್ಥೆಯಲ್ಲಿ ಹಲವಾರು ಬದಲಾವಣೆಗಳನ್ನು ಪರಿಚಯಿಸಿದೆ. ಅದು ಪ್ರಶಂಸನೀಯ ಎಂದಿದ್ದಾರೆ.

ಶಾಲೆಗಳಲ್ಲಿ ನೀತಿಕಥೆ ಹೇಳುವ ತರಗತಿಗಳನ್ನು ಕಡ್ಡಾಯವಾಗಿ ಪರಿಚಯಿಸಬೇಕಿದೆ. ಶಿಕ್ಷಕರ ತರಬೇತಿ ಕೋರ್ಸ್‌ಗಳಲ್ಲಿ ಇದನ್ನು ಸೇರಿಸಬೇಕಿದೆ. ಕಥಾಸರಿತ ಸಾಗರದಂತಹ ನೀತಿಕಥೆಗಳ ಪರಂಪರೆಯನ್ನು ಭಾರತ ಹೊಂದಿದೆ. ಕಥಾಸರಿತ ಸಾಗರ ಸಾವಿರಾರು ಕಥೆಗಳನ್ನು ಹೇಳುತ್ತದೆ. ಆದರೆ ನಾವು ಮಾತ್ರ ಅದರ ಮೌಲ್ಯ ಅರಿತಿಲ್ಲ. ನಾವು ಸದಾ ಪಾಶ್ಚಿಮಾತ್ಯ ರಾಷ್ಟ್ರಗಳು ಏನು ಕಥೆ ಹೇಳುತ್ತವೆ ಎಂಬುದಷ್ಟೇ ನೋಡುತ್ತೇವೆ. ಅತ್ಯದ್ಭುತ ಕಥೆಗಳನ್ನು ಮುಂದಿನ ಪೀಳಿಗೆ ರವಾನಿಸುವ ಪರಂಪರೆಯನ್ನು ಭಾರತ ಹೊಂದಿದೆ. ಹೀಗಾಗಿ ಕಥೆ ಹೇಳುವ ಪರಂಪರೆಯನ್ನು ನಾವು ಎಂದಿಗೂ ನಿರ್ಲಕ್ಷ್ಯ ಮಾಡಬಾರದು. ಎಲ್ಲಾ ಶಾಲೆಗಳಲ್ಲಿ ಕಥೆ ಹೇಳುವುದನ್ನು ಪಠ್ಯೇತರ ಚಟುವಟಿಕೆಯನ್ನಾಗಿ ಅಳವಡಿಸಬೇಕು ಎಂದು ಕರೆ ನೀಡಿದರು.

ಹಣಕಾಸು ಸಚಿವರಿಗೆ ಈ ಮೂಲಕ ನಾನು ಮನವಿ ಮಾಡಿಕೊಳ್ಳುವುದು ಏನೆಂದರೆ ಕಥೆಗಳ ಮೂಲಕ ಮಕ್ಕಳಿಗೆ ಪಾಠ ಮಾಡುವ ಕ್ರಮವನ್ನು ಪರಿಚಯಿಸಬೇಕು. ಇದಕ್ಕಾಗಿ ಎಲ್ಲಾ ಶಾಲೆಗಳಲ್ಲಿ ಒಂದು ದೊಡ್ಡ ಹವಾನಿಯಂತ್ರಿತ ಕೊಠಡಿಯನ್ನು ನಿರ್ಮಿಸಲು ಹೆಚ್ಚುವರಿ ಅನುದಾನ ನೀಡಬೇಕಿದೆ. ಕಥೆಗಳಿಂದ ಮಾತ್ರ ಮಕ್ಕಳಲ್ಲಿ ಕಲ್ಪನೆಯ ಕೌಶಲ್ಯ ಮತ್ತಷ್ಟು ವೃದ್ಧಿಯಾಗಲಿದೆ ಎಂದು ಅಭಿಪ್ರಾಯಪಟ್ಟರು.

ಮೈಸೂರು ರೇಸ್ ಕ್ಲಬ್ ಅಧ್ಯಕ್ಷ ಕೆ.ಎನ್.ಸುರೇಶ್‌ಕುಮಾರ್ ರಾಜೀನಾಮೆ

ಮೈಸೂರು, ಫೆ.12– ಮೈಸೂರು ರೇಸ್ ಕ್ಲಬ್ (ಎಂಆರ್‌ಸಿ) ಅಧ್ಯಕ್ಷ ಸ್ಥಾನಕ್ಕೆ ಕೆ.ಎನ್.ಸುರೇಶ್ ಕುಮಾರ್ ರಾಜೀನಾಮೆ ನೀಡಿದ್ದಾರೆ.



ಗಾಲ್ಫ್ ಕ್ಲಬ್‌ನಲ್ಲಿ ಅನಧಿಕೃತವಾಗಿ ಗಾಲ್ಫ್ ಹಟ್‌ಗಳ ನಿರ್ಮಾಣಕ್ಕೆ ಆಸ್ಪದ ಮಾಡಿಕೊಡಲಾಗಿದೆ ಎಂಬ ವಿಚಾರಕ್ಕೆ ಸಂಬಂಧಿಸಿದಂತೆ ಎಂಆರ್‌ಸಿ ಆಡಳಿತ ಮಂಡಳಿಯ ಬಹುತೇಕ ಸದಸ್ಯರು ಆಕ್ಷೇಪಿಸಿ, ಸುರೇಶ್ ಕುಮಾರ್ ವಿರುದ್ಧ ಅವಿಶ್ವಾಸ ಗೊತ್ತುವಳಿ ಮಂಡನೆಗೆ ನಿರ್ಧರಿಸಿದ್ದರು.

ಅದಕ್ಕೆ, ಆಡಳಿತ ಮಂಡಳಿಯ 10 ಮಂದಿ ಸದಸ್ಯರಲ್ಲಿ ಆರು ಮಂದಿ ಸಹಿ ಸಹ ಮಾಡಿದ್ದರು ಎನ್ನಲಾಗಿದೆ. ಸಭೆಯಲ್ಲಿ ಗೊತ್ತುವಳಿ ಮಂಡನೆಗೆ ಮುನ್ನವೇ ಸುರೇಶ್ ಕುಮಾರ್ ಎಂಆರ್‌ಸಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ.

ಈ ಮಧ್ಯೆ ಮೈಸೂರು ರೇಸ್ ಕ್ಲಬ್ ವ್ಯಾಪ್ತಿಯ ಗಾಲ್ಫ್ ಕ್ಲಬ್‌ನಲ್ಲಿ ಗಾಲ್ಫ್ ಹಟ್‌ಗಳ ನಿರ್ಮಾಣ ತಡೆಯುವ ಸಂಬಂಧ ಎಂಆರ್‌ಸಿ ಅಧ್ಯಕ್ಷರಾಗಿ ತಾವು ಕೈಗೊಂಡಿರುವ ಕ್ರಮಗಳ ವಿಚಾರವಾಗಿ ಸದಸ್ಯರ ಗಮನಕ್ಕೆ ನಿರಂತರವಾಗಿ ತಂದಿದ್ದಾಗಿ ಸುರೇಶ್ ಕುಮಾರ್ ಸದಸ್ಯರಿಗೆ ಕಳಿಸಿರುವ ತಮ್ಮ ಸ್ಪಷ್ಟನೆ ಪತ್ರದಲ್ಲಿ ತಿಳಿಸಿದ್ದಾರೆ. ಗಾಲ್ಫ್ ಕ್ಲಬ್‌ನಲ್ಲಿ ಹಟ್ ನಿರ್ಮಾಣಕ್ಕೆ ಪರಿಷ್ಕೃತ ನಕ್ಷೆಯನ್ನು ಲೋಕೋಪಯೋಗಿ ಇಲಾಖೆ ಅನುಮೋದಿಸಿದ್ದು, ಇದು ನಿಯಮ ಉಲ್ಲಂಘನೆ. ಈ ಸಂಬಂಧವೂ ಮೈಸೂರು ನಗರ ಪಾಲಿಕೆಗೆ ಪತ್ರ ಬರೆದು ಮೂಲ ನಕ್ಷೆ ಉಲ್ಲಂಘಿಸಿ ಮಾಡಿರುವ ನಿರ್ಮಾಣವನ್ನು ನೆಲಸಮ ಮಾಡುವುದರೊಂದಿಗೆ, ಅನಧಿಕೃತ ಗಾಲ್ಫ್ ಹಟ್ ನಿರ್ಮಾಣ ತಡೆಯುವಲ್ಲಿ ವಿಫಲರಾದ ಅಧಿಕಾರಿಗಳಿಗೆ ದಂಡ ವಿಧಿಸುವ ಅವಕಾಶ ಇರುವುದನ್ನು ಮನವರಿಕೆ ಮಾಡಿಕೊಡಲಾಗಿತ್ತು.


ಆದರೆ, ಇಷ್ಟೆಲ್ಲಾ ಪ್ರಯತ್ನ ಮಾಡಿದ್ದರೂ ಕೆಲವರು ಅದನ್ನು ಕಿಂಚಿತ್ತು ಪರಿಗಣಿಸದೇ ತಾವು ಗಾಲ್ಫ್ ಕ್ಲಬ್‌ಗೆ ಒತ್ತಾಸೆಯಾಗಿರುವುದಾಗಿ ಭಾವಿಸಿ, ತಮ್ಮ ವಿರುದ್ಧ ಅವಿಶ್ವಾಸ ಗೊತ್ತುವಳಿ ತರುವ ಪ್ರಕ್ರಿಯೆಯಲ್ಲಿ ತೊಡಗಿದ್ದ ರಿಂದ, ಅನಿವಾರ್ಯವಾಗಿ ಕೆ.ಎನ್.ಸುರೇಶ್ ಕುಮಾರ್ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ ಎನ್ನಲಾಗಿದೆ. ಸುರೇಶ್ ಕುಮಾರ್ ರಾಜೀನಾಮೆ ಹಿನ್ನೆಲೆಯಲ್ಲಿ ಹಂಗಾಮಿ ಅಧ್ಯಕ್ಷರನ್ನಾಗಿ ಜಿ.ವೆಂಕಟೇಶ್ ಅವರನ್ನು ನೇಮಕ ಮಾಡಲಾಗಿದೆ.

ನಾಳೆಯಿಂದ 3 ದಿನ ಶ್ರೀ ತ್ಯಾಗರಾಜರ, ಶ್ರೀ ಪುರಂದರದಾಸರ ಆರಾಧನಾ ಸಂಗೀತೋತ್ಸವ

ಮೈಸೂರು,ಫೆ.12(ಪಿಎಂ)– ಎನ್‌ಆರ್ ಮೊಹಲ್ಲಾ ಸಂಗೀತ ಸಭಾ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಫೆ.14ರಿಂದ 16ರ ವರೆಗೆ ಶ್ರೀ ತ್ಯಾಗರಾಜರ ಮತ್ತು ಶ್ರೀ ಪುರಂದರದಾಸರ ಆರಾಧನಾ ವಾರ್ಷಿಕ ಸಂಗೀತೋತ್ಸವ ಆಯೋಜಿಸಲಾಗಿದೆ.



ತ್ಯಾಗರಾಜರು



ಪುರಂದರದಾಸರು

ಎನ್‌ಆರ್ ಮೊಹಲ್ಲಾದ ಶ್ರೀ ಪ್ರಸನ್ನ ಮಹಾಗಣಪತಿ ದೇವಸ್ಥಾನದಲ್ಲಿ ಸಂಗೀತೋತ್ಸವ ನಡೆಯಲಿದೆ. ಫೆ.14ರಂದು ಸಂಜೆ 6.15ಕ್ಕೆ ವಿದ್ವಾನ್ ಕುನ್ನಕುಡಿ ಎಂ.ಬಾಲಮುರಳಿಕೃಷ್ಣ ಅವರಿಂದ ಗಾಯನ ಕಾರ್ಯಕ್ರಮ ನಡೆಯಲಿದ್ದು, ಇವರಿಗೆ ಪಕ್ಕವಾದ್ಯದಲ್ಲಿ ವಿದ್ವಾನ್ ಮೈಸೂರು ವಿ.ಶ್ರೀಕಾಂತ್ (ಪಿಟೀಲು), ವಿದ್ವಾನ್ ಅರ್ಜುನ್‌ಕುಮಾರ್ (ಮೃದಂಗ), ವಿದ್ವಾನ್ ಶಮಿತ್ ಎಸ್.ಗೌಡ (ಘಟಂ) ಸಹಕಾರ ನೀಡಲಿದ್ದಾರೆ.

ಫೆ.15ರಂದು ಸಂಜೆ 6.15ಕ್ಕೆ ವಿದುಷಿ ಎಸ್.ಐಶ್ವರ್ಯ ಮತ್ತು ವಿದುಷಿ ಎಸ್.ಸೌಂದರ್ಯ ಅವರ (ಭಾರತ ರತ್ನ ಎಂ.ಎಸ್.ಸುಬ್ಬಲಕ್ಷ್ಮಿ ಅವರ ಮರಿಮಕ್ಕಳು) ಗಾಯನ ಕಾರ್ಯಕ್ರಮ ನಡೆಯಲಿದ್ದು, ಇವರಿಗೆ ಪಕ್ಕವಾದ್ಯದಲ್ಲಿ ವಿದುಷಿ ಅದಿಥಿ ಕೃಷ್ಣಪ್ರಕಾಶ್ (ಪಿಟೀಲು), ವಿದ್ವಾನ್ ಹೆಚ್.ಎಲ್.ಶಿವಶಂಕರ ಸ್ವಾಮಿ (ಮೃದಂಗ), ವಿದ್ವಾನ್ ಶರತ್ ಕೌಶಿಕ್ (ಘಟಂ) ಸಹಕಾರ ನೀಡಲಿದ್ದಾರೆ.

ಫೆ.16ರಂದು ಬೆಳಗ್ಗೆ 9ರಿಂದ 11ರವರೆಗೆ ನಾದಸ್ವರ ಮತ್ತು ಶ್ರೀ ತ್ಯಾಗರಾಜರ, ಶ್ರೀ ಪುರಂದರದಾಸರ ಕೃತಿಗಳನ್ನು ಹಾಡಲು ಅವಕಾಶ ಕಲ್ಪಿಸಲಾಗಿದೆ. ನಂತರ ಬೆಳಗ್ಗೆ 11ರಿಂದ 12ರವರೆಗೆ ವಿದ್ವಾನ್ ಎನ್.ವಿ.ಸತ್ಯನಾರಾಯಣ ಮತ್ತು ವಿದುಷಿ ಹೆಚ್.ವಿ.ವಾಸವಾಂಬ ಅವರಿಗೆ ಸನ್ಮಾನ ಸಮಾರಂಭ ನಡೆಯಲಿದೆ. ಮಧ್ಯಾಹ್ನ 12ಕ್ಕೆ ಶ್ರೀ ತ್ಯಾಗರಾಜರ ಪಂಚರತ್ನ ಕೃತಿಗಳ ಗೋಷ್ಠಿಗಾಯನ ಕಾರ್ಯಕ್ರಮ ನಡೆಯಲಿದ್ದು, ಮಧ್ಯಾಹ್ನ 1.15ಕ್ಕೆ ಸಮಾರೋಪ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಬೇಕಾಗಿದ್ದಾರೆ

ಹೋಟೆಲ್ (ಲಾಡ್ಜ್)ನಲ್ಲಿ ಹೌಸ್ ಕೀಪಿಂಗ್ ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ.
ಸಂಪರ್ಕಿಸಿ:
7892528932

WANTED

We are looking for a Young and Qualified FEMALE Technologist to join our Skin & Hair Clinic in J P Nagar, Mysore. Training will be provided with a stipend.
Salary: ₹20,000+
Send your resume via WhatsApp to
63663 45111

SITE FOR SALE

Kuberananda sagar - Mysore
Kuberananadasagar Pase 1 ನಲ್ಲಿ ಇರುವ 40x60 ಪೂರ್ವಾಭಿಮುಖ ಸೈಟ್ ಮಾರಾಟಕ್ಕೆ ಇದೆ. ಸಂಪರ್ಕಿಸಿ ರಾವ್ :
7795088989 | 8147474199

COMMERCIAL PROPERTY FOR RENT

on Irwin Road, Mysore
First Floor - 185 sqft
Second Floor - 400 sqft
Suitable for
Office, Tailors, Repairs shops
Call: 96202 24675

CHANGE OF NAME

I, Mahesh Ballal Nidambur Bhojaraj, residing at No. 1243, Krishnamurthy-puram, Mysuru, declare that my minor son was previously known as Ahan Ballal in his old passport. However, his Aadhar Card and 10th-grade marks card list his name as Ahan Mahesh Ballal. Therefore, we wish to officially recognize his name as Ahan Mahesh Ballal going forward.
Sd/- Mahesh Ballal Nidambur Bhojaraj

FOR SALE

PRIME RESIDENTIAL PLOTS
SADHANA LAYOUT
40×60 East Facing
Near Chamundeshwari Railway Layout, Opp to Kusuma Chandrasekhar Convention Hall, KRS Road, Mysuru
ANURADHA AVENUE
30×40
Opp Wipro, Off. KRS Road, Mysore
Call: 78920 21814



ಶ್ರೀಮತಿ ರೂಪ.ಎನ್ ಮತ್ತು ಶ್ರೀ ಸುನೀಲ್ ಕುಮಾರ್.ಎಸ್ ರವರಿಗೆ 20ನೇ ವಿವಾಹ ವಾರ್ಷಿಕೋತ್ಸವದ ಶುಭಾಶಯಗಳು

ಶುಭಕೋರುವವರು:
ಎನ್.ಕಿರಣ್ ಕುಮಾರ್.ಎನ್. ಅಭಿಲಾಷ್, ಪ್ರೇಕ್ಷಾ.ಎಸ್.ಗೌಡ, ಸಿರಿ.ಎಸ್.ಗೌಡ ಮತ್ತು ಕುಟುಂಬವರ್ಗದವರು

COMMERCIAL SITES FOR SALE

PRIME LOCATIONS
JLB ROAD, Mysore
6517 Sqft (S/W Corner)
2847 Sqft (S/E Corner)
9821 Sqft (S/E Corner)
BOGADI GADDIGE Main Road, Mysore
100 x 120 Sqft (S/E Corner)
KANDAYA LAYOUT, Srirampura
40 x 60 North Facing Residential Site for Sale
Contact: Atharva Realty & Co
9980083876

NEW HOUSE FOR SALE

20x30, GF &FF 100% vastu. Sump 12000 Litres, Full teak with spray polish, Foundation 3 Feet From road level. Rate: Rs 70,00,000, Slightly Negotiable, Srinidhi Layout, Oppsite to Sai Garments
MOB: 9902650282

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ವೆರಿಕೋಸ್ ವೆಯಿನ್ಸ್ ಚಿಕಿತ್ಸೆ

MEGAVIN Vascular Care
ಈ ಕೆಳಗಿನ ಸಮಸ್ಯೆಗಳಿಂದ ಬಳಲುತ್ತಿದ್ದರೆ ನಮ್ಮನ್ನು ಸಂಪರ್ಕಿಸಿ
ಕಾಲುಗಳಲ್ಲಿ ನೋವು | ಸೆಳೆತ | ತುರಿಕೆ | ಊತ
ಚರ್ಮದ ಬಣ್ಣ ಕಪ್ಪಾಗುವುದು | ಗಾಯಗಳು / ಹುಣ್ಣುಗಳು
ಶಸ್ತ್ರಚಿಕಿತ್ಸೆ ಇಲ್ಲದೆ! ಲೇಸರ್ ಚಿಕಿತ್ಸೆ
ಸಂದರ್ಶನ
ಪ್ರತಿ ಶುಕ್ರವಾರ
14ನೇ ಫೆಬ್ರವರಿ 2025
ಬೆಳಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ
ಡಾ. ವಿನಯ್ ನ್ಯಾಪತಿ
ಕ್ಲಿನಿಕಲ್ & ವ್ಯಾಸ್ಕುಲಾರ್ ಇಂಟರ್‌ವೆನ್ಷನಲ್ ರೇಡಿಯೋಲಜಿಸ್ಟ್
ರಾಮ ಕೃಷ್ಣ ಹಾಸ್ಪಿಟಲ್
ಲಕ್ಷ್ಮೀಬಾಯಿ ರಸ್ತೆ ವಿದ್ಯಾರಣ್ಯಪುರ ಮೈಸೂರು
ಕರೆಮಾಡಿ: 98804 62229

MAHATMA GANDHI B.Ed., COLLEGE


Sathagalli, Mysuru.
ACADEMIC YEAR : 2024-2025
ADMISSION FOR
B.Ed., (Last Few Seats Left)
Call : 0821-2420374 / 93438 28203
Email : mahatmagandhitrust@gmail.com

G9 projects

Designing your Dreams
CLOSING DEAL
SITES FOR SALE
UTTANAHALLI, MYSURU
JUST 1 K M FROM RING-ROAD
AVAILABLE PLOTS 20X30 & 30X40
R T NAGAR, MYSURU
RING-ROAD OPP TO UNIVERSITY LAYOUT
AVAILABLE PLOTS
30X40 & 30X50 & 40X60
8055-00-4400

100% TEAK WOOD

FACTORY FINISH DOORS & FRAMES
@ FACTORY DEPOT RATES
10 YEARS WARRANTY*
9845426862
9901291267



14.02.2025 ನಾಳೆಯಿಂದ
ಪದ್ಮ ಚಿತ್ರಮಂದಿರ
ಚಾಲೆಂಜಿಂಗ್ ಸ್ಟಾರ್ ದರ್ಶನ್ ಹುಟ್ಟುಹಬ್ಬದ ಪ್ರಯುಕ್ತ
ಚಿಂಗಾರಿ (ಕನ್ನಡ)
ದಿನ 4 ಪ್ರದರ್ಶನ
10.30 1.30 4.30 7.30
ಬುಕ್ ಮೈ ಶೋನಲ್ಲಿ ಟಿಕೇಟ್ ಲಭ್ಯವಿದೆ.

5ನೇ ವರ್ಷದ ಪುಣ್ಯಸ್ಮರಣೆ



ಎಂ.ಬಿ.ಪೆಮ್ಮಯ್ಯ (ರಘು)
ನಿವೃತ್ತ ಸಬ್‌ಇನ್ಸ್‌ಪೆಕ್ಟರ್ (ಕೆಎಸ್‌ಆರ್‌ಪಿ)
ನೀವು ನಮ್ಮನ್ನಗಲಿ ಇಂದಿಗೆ 5 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಪತ್ನಿ ರಾಧ, ಮಕ್ಕಳು ದಿಲನ್, ಮಿಲನ್, ಸಜ್ಜನ್, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು.
ಮೊ: 9945752315

1ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರು ಸದಾ ನಿಮ್ಮ ನೆನಪಿನಲ್ಲಿರುವ
ದುಃಖತಪ್ತರು: ಗಂಡ ಮಹದೇವು, ಮಗ ಮಂಜು, ಸೊಸೆ ಲಕ್ಷ್ಮಿದೇವಿ, ಕುಟುಂಬವರ್ಗದವರು, ಯರಗನಹಳ್ಳಿ
ಶ್ರೀಮತಿ ಶಾಂತ

Vidyavardhaka Sangha (R), Mysore

Sri K. PUTTASWAMY SCHOOL (K.P. CONVENT)
Vidyavardhaka College of Engineering Campus
P.B.No 205, Gokulam III Stage, Mysuru – 02. Ph: 2419193
STAFF REQUIRED
Trained, experienced Teachers to teach Primary / Higher Primary / High School Classes in English Medium for the following subjects.
- SOCIAL STUDIES / ENGLISH : B.A / B.Ed
- NURSERY TEACHER : Montessori Training

Please submit the application at K.P.Convent at the above address with the copies of Certificates, Resume & Passport size photo within 7 days from date of publication.
Preference will be given for experienced candidate.
Hon. President — Hon. Secretary

ಕರ್ನಾಟಕ ಸರ್ಕಾರ
ಕರ್ನಾಟಕ ಪೊಲೀಸ್ ಅಕಾಡೆಮಿ

ಅಬ್ಬಾರಸ್ತೆ, ಜಲಪುರಿ, ನಜರ್‌ಬಾದ್ ಮೊಹಲ್ಲಾ, ಮೈಸೂರು – 570 019
Ph: 0821-2564297 | Email: kpamyc@ksp.gov.in
ಸಂಖ್ಯೆ: ಸಿಬ್ಬಂದಿ/31/ಕೆ.ಪಿ.ಎ/2024–25 ದಿನಾಂಕ: 12–02–2025

ಇ–ಟೆಂಡರ್ ಪ್ರಕಟಣೆ

ಈ ಕಚೇರಿಯ ಇ–ಟೆಂಡರ್ ಪ್ರಕಟಣೆ ಸಮ ಸಂಖ್ಯೆ ದಿನಾಂಕ: 05–02–2025 & 10–02–2025

Sl No	Particulars	Tender No.	Estimated Cost (in Lakhs)
01	Providing 04 Data Entry Operator for Karnataka Police Academy, Mysuru	No.KPA/EST/31/2024-25. Kppp Portal Ref No. KSP/2024-25/SE0059 Dated: 05-02-2025	Rs. 11 Lakhs
02	Providing 10 House Keeping Services for Karnataka Police Academy, Mysuru	No.KPA/STS/16/2024-25. Kppp Portal Ref No. KSP/2024-25/SE0061 Dated: 10-02-2025	Rs. 23 Lakhs

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ಪೊಲೀಸ್ ಅಕಾಡೆಮಿ, ಮೈಸೂರು ಘಟಕಕ್ಕೆ ಅಗತ್ಯವಿರುವ ಸಿಬ್ಬಂದಿರವರನ್ನು ಬಾಹ್ಯ ಮೂಲದಿಂದ ಪಡೆಯಲು Kppp Portal of the Govt. of Karnataka ಮುಖಾಂತರ e-tender ಪ್ರಕಟಿಸಲಾಗಿರುತ್ತದೆ.

ನಿರ್ದೇಶಕರು,
ಕರ್ನಾಟಕ ಪೊಲೀಸ್ ಅಕಾಡೆಮಿ, ಮೈಸೂರು

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಅಭಿಯಂತರರ ಕಛೇರಿ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಮಂಡ್ಯ.

ಸಂಖ್ಯೆ:ಕಾಅ:ಪಂರಾಇಂವಿ:ಮಂಡ್ಯ:ಟೆಂಪ್ರ:ಸಇಂ–2:2024–25/2511
ದಿನಾಂಕ:06.02.2025

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 47/2024–25

ಕರ್ನಾಟಕ ರಾಜ್ಯದ ರಾಜ್ಯಪಾಲರುರವರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ ಮಂಡ್ಯರವರಿಂದ, 2023–24ನೇ ಸಾಲಿಗೆ ಲೆಕ್ಕಶೀರ್ಷಿಕೆ: 4235–02–102–0–06 (386)ರಡಿ (ಐ.ಸಿ.ಡಿ.ಎಸ್.–ನರೇಗಾ) ಒಗ್ಗೂಡಿಸುವಿಕೆ ಯೋಜನೆಯಡಿ ಅನುಮೋದನೆಯಾಗಿರುವ ವಿಭಾಗ ವ್ಯಾಪ್ತಿಯ ಒಟ್ಟು 11 ಅಂಗನವಾಡಿ ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ದ್ವಿಲಕೋಟೆ ಪದ್ಧತಿ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಅಹ್ವಾನಿಸಲಾಗಿದೆ. ಪ್ರತಿ ಕಾಮಗಾರಿಗೆ ಟೆಂಡರ್‌ಗೆ ಇಡಲಾದ ಮೊತ್ತ ರೂ.14.50ಲಕ್ಷ. ಟೆಂಡರ್‌ಗಳನ್ನು https://kppp.karnataka.gov.in, KPP Portal ಆನ್‌ಲೈನ್ ಮೂಲಕ ಸಲ್ಲಿಸತಕ್ಕದ್ದು. ಟೆಂಡರ್‌ಗಳನ್ನು ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕ:18.02.2025ರ ಸಂಜೆ 4.00ಗಂಟೆವರೆಗೆ. ಹೆಚ್ಚಿನ ವಿವರಗಳಿಗಾಗಿ ಕೆ.ಪಿ.ಪಿ. ಪೋರ್ಟಲ್ ಅಥವಾ ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ. ವಿಭಾಗ, ಮಂಡ್ಯರವರ ಕಛೇರಿಯಲ್ಲಿ ಸಂಪರ್ಕಿಸಿ ಪಡೆಯಬಹುದು.

ಸಹಿ/–ಕಾರ್ಯಪಾಲಕ ಅಭಿಯಂತರರು,
ಪಂ.ರಾ.ಇಂ.ವಿಭಾಗ, ಮಂಡ್ಯ.

DIPR/AD-MDY/KSMCA/656/2024-25

ಪ್ರೆಸ್ಟೀಜ್ ಜ್ಯಾಕ್‌ಪಾಟ್ ಸೇಲ್

40% ರಿಂದ 50% ರಿಯಾಯಿತಿ
8th - 16th FEBRUARY 2025
ವಾರ್ಷಿಕ ಸ್ಟಾಕ್ ಕ್ಲಿಯರೆನ್ಸ್ ಸೇಲ್
ಸೀಮಿತ ದಾಸ್ತಾನು. ದಾಸ್ತಾನು ಮುಗಿಯುವ ಮುನ್ನ ತ್ವರೆ ಮಾಡಿ.
ಮಿಕ್ಸರ್ ಗ್ರೈಂಡರ್ | ಚಿಮಣಿ | ಸಣ್ಣ ಉಪಕರಣಗಳು
ಪ್ರೆಸ್ಟೀಜ್ ಎಕ್ಸ್‌ಕ್ಲೂಸಿವ್
ಸ್ಥಳ : ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಮೈಸೂರು - 570005 ಫೋನ್ : 9845166263, 9980971281

ಜಿಲ್ಲಾ ಪಂಚಾಯತ್ ಚಾಮರಾಜನಗರ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ,

ಚಾಮರಾಜನಗರ ಜಿಲ್ಲೆ, ಚಾಮರಾಜನಗರ
ಕೊಠಡಿ ಸಂಖ್ಯೆ: 306, ಜಿಲ್ಲಾ ಆಡಳಿತ ಭವನ, ಫೋ: 08226-222421 | Email: dhochamarajanagar@gmail.com

ಸಂಖ್ಯೆ: ಜಿಆಕುಕ/ಚಾನ/ಸಿವಿ(1)/02/2024–25 ದಿನಾಂಕ: 10.02.2025

ಪತ್ರಿಕಾ ಪ್ರಕಟಣೆ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ಇಲ್ಲಿನ ಅಧೀನ ಸಂಸ್ಥೆಗಳಲ್ಲಿ ಇರುವ ಈ ಕೆಳಕಂಡ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಸರ್ಕಾರದ ನಿಯಮಾನುಸಾರ ಭರ್ತಿ ಮಾಡಲು ದಾಖಲಾತಿ ಪರಿಶೀಲನೆ ಮತ್ತು ನೇರ ಸಂದರ್ಶನವನ್ನು ದಿನಾಂಕ: 28.02.2025 ರಂದು ಸಮಯ: 10.30 AM ರಿಂದ 04.30 PM ವರೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ಚಾಮರಾಜನಗರ, ಕೊಠಡಿ ಸಂಖ್ಯೆ: 312, 3ನೇ ಮಹಡಿ, ಜಿಲ್ಲಾಡಳಿತ ಭವನ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ಇಲ್ಲಿ ಏರ್ಪಡಿಸಲಾಗಿದೆ.

ಕ್ರ.ಸಂ.	ಹುದ್ದೆಯ ಹೆಸರು	ವಿದ್ಯಾರ್ಹತೆ	ಹುದ್ದೆಗಳ ಸಂಖ್ಯೆ	ಷರಾ
1.	ತುರ್ತು ಚಿಕಿತ್ಸಾ ವೈದ್ಯಾಧಿಕಾರಿ (CMO)	M.B.B.S.	09	ಸರ್ಕಾರದ ಆದೇಶದಂತೆ ವಯೋಮಿತಿ ಮತ್ತು ವೇತನವನ್ನು ನಿಗಧಿಪಡಿಸಲಾಗಿರುತ್ತದೆ.
2.	ಹಿರಿಯ ವೈದ್ಯಾಧಿಕಾರಿ ಹುದ್ದೆ (SMO)	M.B.B.S.	01	
3.	Physician	MD in General Medicine	02	
4.	Dermatologist	MD in Dermatology	01	
5.	Gynecologist	GDO/DNB/MD (OBG)	01	
6.	Paediatrician	DCH/DNB/MD (Paediatric)	02	
7.	Anaesthetist	DA/DNB/MD (Anaesthesia)	03	
8.	ENT	MS in ENT	01	
9.	Radlologist	MD In Radlologist	02	
10.	Ophthalmologist	MS in Opthalmology	01	

ಮೀಸಲಾತಿ ಬಿಂದುಗಳು: (ಹುದ್ದೆಗಳ ಸಂಖ್ಯೆವಾರು ಅನ್ವಯವಾಗುತ್ತವೆ)
ಪ.ಜಾ. (ಇತರೆ), ಸಾ.ಅ. (ಮಹಿಳೆ), ಪ.ಪಂ. (ಗ್ರಾ.ಅ.), ಸಾ.ಅ. (ಅಂ.ವಿ.), ಪ್ರವರ್ಗ–1 (ಮಹಿಳೆ), ಸಾ.ಅ. (ಗ್ರಾ.ಅ.), ಪ್ರವರ್ಗ–11 (ಇತರೆ), ಸಾ.ಅ. (ಮ.ಅ.), ಪ.ಜಾ. (ಗ್ರಾ.ಅ.)

ಷರತ್ತು ನಿಬಂಧನೆಗಳು:
ಅ) ಒಂದು ವರ್ಷದ ಅವಧಿಗೆ ತಾತ್ಕಾಲಿಕ ನೆಲೆಗಟ್ಟಿನಲ್ಲಿ ನೇಮಕಾತಿ ಮಾಡಲಾಗುವುದು ಮತ್ತು ರಾಜ್ಯ ಮಟ್ಟದಿಂದ ಖಾಯಂ ವೈದ್ಯರು ನೇಮಕವಾದಲ್ಲಿ ಹುದ್ದೆಯನ್ನು ತೆರವುಗೊಳಿಸುವ ಷರತ್ತಿಗೊಳಪಟ್ಟಿರುತ್ತದೆ.
ಆ) ಆಸಕ್ತ ಅಭ್ಯರ್ಥಿಗಳು ಹುದ್ದೆಗೆ ಸಂಬಂಧಿಸಿದ ಮೂಲ ದಾಖಲಾತಿಗಳು ಹಾಗೂ ಅವುಗಳ Xerox ಪ್ರತಿಗಳನ್ನು ಸ್ವಯಂ ದೃಢೀಕರಿಸಿ ಸಂದರ್ಶನ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸುವುದು.
ಇ) ಸದರಿ ನೇಮಕಾತಿ ಪತ್ರಿಕಾ ಪ್ರಕಟಣೆಯು ಮೇಲೆ ಸೂಚಿಸಿರುವ ಹುದ್ದೆಗಳು ಒಂದು ವರ್ಷದ ಅವಧಿಗೆ ಭರ್ತಿಯಾಗುವುವರೆಗೆ ಚಾಲ್ತಿಯಲ್ಲಿರುತ್ತದೆ.
ಈ) ದಿನಾಂಕ: 28.02.2025 ರಂದು ಭರ್ತಿಯಾಗದೇ ಉಳಿದ ಮೇಲ್ಕಂಡ ಹುದ್ದೆಗಳಿಗೆ ನಂತರದ ದಿನಗಳಲ್ಲಿ ಬರುವ ಪ್ರತೀ ಸೋಮವಾರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಾರ್ಯಾಲಯ, ಚಾಮರಾಜನಗರ, ಕೊಠಡಿ ಸಂಖ್ಯೆ: 312, 3ನೇ ಮಹಡಿ, ಜಿಲ್ಲಾಡಳಿತ ಭವನ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ಇಲ್ಲಿ ಮೇಲ್ಕಂಡ ಹುದ್ದೆಗಳು ಭರ್ತಿಯಾಗುವವರೆಗೆ ನಡೆಯುವ ನೇರ ಸಂದರ್ಶನ (Walk-in-Interview) /ದಾಖಲಾತಿ ಪರಿಶೀಲನೆಗೆ ಅರ್ಹ ಆಸಕ್ತ ಅಭ್ಯರ್ಥಿಗಳು ಭಾಗವಹಿಸಿ ಹುದ್ದೆ ಪಡೆಯಬಹುದಾಗಿರುತ್ತದೆ. (ಸಾರ್ವತ್ರಿಕ ರಜಾ ದಿನಗಳನ್ನು ಹೊರತುಪಡಿಸಿ)
ಉ) ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಚೇರಿಯನ್ನು ಕರ್ತವ್ಯದ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/– ಸದಸ್ಯ ಕಾರ್ಯದರ್ಶಿಗಳು ಹಾಗೂ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ
ಚಾಮರಾಜನಗರ ಜಿಲ್ಲೆ, ಚಾಮರಾಜನಗರ

ಸಂ:ವಾಸಾಸಂಇ:ಚಾನಗರ:607:2024–25

ಪತ್ರಿಕಾ ಪ್ರಕಟಣೆ

ನನ್ನ ಕಕ್ಷಿದಾರರಾದ ಶ್ರೀಮತಿ ಲೀಲಾಂಬಿಕೆ ಹೆಚ್.ವಿ. ಕೋಂ ಎಂ.ನೀಲಕಂಠಸ್ವಾಮಿ, ವಾಸ ಮನೆ ನಂ.68, ಡಿ.ವಿ.ಸಿ.ಬಡಾವಣೆ, ಇ & ಎಫ್ ಬ್ಲಾಕ್, ರಾಮಕೃಷ್ಣ ನಗರ, ಮೈಸೂರು 570023ರವರು ನಂಜನಗೂಡು ತಾಲ್ಲೂಕು, ಚಿಕ್ಕಯ್ಯನಛತ್ರ ಹೋಬಳಿ, ಮರಳೂರು ಗ್ರಾಮಕ್ಕೆ ಸೇರಿರುವ ಖುಷ್ಕಿ ಸರ್ವೇ ನಂ. 283/2ರ ಒಟ್ಟು ವಿಸ್ತೀರ್ಣ 03 ಎಕರೆ 20 ಗುಂಟೆ ಪೈಕಿ 01 ಎಕರೆ 20 ಗುಂಟೆ ಜಮೀನನ್ನು ಸದರಿ ಸ್ವತ್ತಿನ ಮಾಲೀಕರಾದ ಸೋಮಣ್ಣಚಾರಿ ಬಿನ್ ಲೇಟ್. ಜವರಾಚಾರಿ ಹಾಗೂ ಇತರೆರವರಿಂದ ಖರೀದಿಸಲು ಇಚ್ಚಿಸಿರುತ್ತಾರೆ. ಸದರಿ ಸ್ವತ್ತಿನ ಬಗ್ಗೆ ಯಾರಿಗಾದರೂ ತಂಟೆ–ತಕರಾರು ಅಥವಾ ಹಿತಾಸಕ್ತಿ ಇದ್ದಲ್ಲಿ ಈ ಕೆಳಕಂಡವರಿಗೆ ದಾಖಲೆ ಸಹಿತ ಈ ಪ್ರಕಟಣೆ ಪ್ರಕಟವಾದ 15 ದಿವಸಗಳಲ್ಲಿ ತಕರಾರನ್ನು ಸಲ್ಲಿಸತಕ್ಕದ್ದು. 15 ದಿವಸಗಳಲ್ಲಿ ಯಾವುದೇ ತಕರಾರು ಬರದಿದ್ದಲ್ಲಿ ನನ್ನ ಕಕ್ಷಿದಾರರು ಸದರಿ ಸ್ವತ್ತಿನ ಖರೀದಿಗೆ ಮುಂದಾಗುತ್ತಾರೆ. ಹಾಗೂ ಮುಂದೆ ಅಂತಹ ಯಾವುದಾದರೂ ತಂಟೆ–ತಕರಾರು ಬಂದಲ್ಲಿ ಅದನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅದು ನನ್ನ ಕಕ್ಷಿದಾರರನ್ನು ಬಾಧಿಸತಕ್ಕದ್ದಲ್ಲವೆಂದು ಈ ಮೂಲಕ ತಿಳಿಸಲಾಗಿದೆ.

ಸಹಿ/–
ಸಿ.ಕೆ.ವೆಂಕಟೇಶ್ ಬಿ.ಎಸ್ಸಿ.,ಎಲ್‌ಎಲ್‌ಬಿ, ವಕೀಲರು,
ನಂ.14, ಕನಕದಾಸ ಮಾರ್ಗ, ಐಶ್ವರ್ಯನಗರ ಬಡಾವಣೆ, 'ಎನ್'ಬ್ಲಾಕ್, ಕುವೆಂಪುನಗರ, ಮೈಸೂರು 570023

ಹಸಿರು ನಮ್ಮ ಉಸಿರು

IN THE COURT OF THE I ADDITIONAL PRINCIPAL JUDGE FAMILY COURT AT BENGALURU

M.C. No. 3265/ 2024

BETWEEN: Dr. Savitha.S.L... PETITIONER
AND: Sri.V.R.Rajesh @ Rajesh Gowda... RESPONDENT

NOTICE TO THE RESPONDENT

To: Sri. V.R.Rajesh @ Rajesh Gowda, aged about 53 years, C/o Naveen Nachappa No.2969, Behind Bharath Cancer Hospital Nisarga Layout, Lakshmikanth Nagar Hebbala 1st Stage, MYSURU-570 017.

Whereas, the above named petitioner has filed the above petition Under section 13 (1) (i-a) of the Hindu Marriage Act 1955 against the Respondent for the Decree of Divorce and such other relief. You are hereby summoned to appear in person or through a pleader duly instructed before I Additional Principal Judge Family court, Bengaluru.

Take notice that in default of your appearance, on the 01-03-2025 at 11:00 A.M. the petition will be heard and determined in your absence, placing you as ex-parte.

Given under my hand and seal of this court on 21-01-2025.

By order of the court, Senior Sheristedar Family Court, Bengaluru.

K.P. RAVISHANKAR, Advocate
No.14/B, 2nd Floor Cubbonpet, Bengaluru-560001.